
ಅಂಬಿಕಾತನಯದತ್ತರ

ಹೃದಯ ಗೀತ

ಸಮಗ್ರ ಮರಾಠಿ ಕವನಗಳ ಭಾವಾನುವಾದ



ಅನುವಾದಕರು:

ಸಂ.ವಾ.ದ.

(ಡಾ॥ ವಾಮನ ಬೇಂದ್ರೆ)

ಡಾ॥ ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಕೊಡುಗೆ

ಡಾ. ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆ ಹುಬ್ಬಳ್ಳಿ

ಹೃದಯ-ವಿವೇಕ ಬೆಳಕು ಬರಲಿ

ಡಾ॥ ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಪ್ರಕಟಣೆಗಳು

ಡಾ|| ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಕೊಡುಗೆ

ಹೃದಯ-ವಿವೇಕ ಬೆಳಕು ಬರಲಿ

ಡಾ|| ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಪ್ರಕಟಣೆಗಳು

ಡಾ|| ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಕೊಡುಗೆ


ಹೃದಯ-ವಿವೇಕ ಬೆಳಕು ಬರಲಿ

ಡಾ|| ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಪ್ರಕಟಣೆಗಳು

ಡಾ|| ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಕೊಡುಗೆ

ಹೃದಯ-ವಿವೇಕ ಬೆಳಕು ಬರಲಿ

ಡಾ|| ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಪ್ರಕಟಣೆಗಳು



ಅಂಬಿಕಾತನಯದತ್ತರ

ಹೃದಯ ಗೀತ

ಸಮಗ್ರ ಮರಾಠಿ ಕಾವ್ಯದ ಕನ್ನಡ ಅನುವಾದ

೩೬ನೆಯ ಕವನ ಸಂಗ್ರಹ

ಅಂಬಿಕಾತನಯದತ್ತರ ಕಾವ್ಯ

(ವರಕವಿ ಡಾ|| ದ. ರಾ. ಬೇಂದ್ರೆ)

ಹೃದಯ ಗೀತ

ಸಮಗ್ರ ಮರಾಠಿ ಕಾವ್ಯದ ಕನ್ನಡ ಅನುವಾದ

ಅನುವಾದಕರು :

''ಸಂ.ವಾ.ದ.''

ಡಾ|| ವಾಮನ ಬೇಂದ್ರೆ

ಸಹ-ನಿರ್ದೇಶಕರು,

ಬೇಂದ್ರೆ ಸಂಶೋಧನ ಸಂಸ್ಥೆ, ಹುಬ್ಬಳ್ಳಿ

ಪ್ರಕಾಶಕರು :

ಡಾ|| ಕೆ. ಎಸ್. ಶರ್ಮಾ,

ನಿರ್ದೇಶಕರು, ಬೇಂದ್ರೆ ಸಂಶೋಧನ ಸಂಸ್ಥೆ

ಶ್ರೀಮಾತಾ ಪ್ರಕಾಶನ,

ಅಂಬಿಕಾತನಯದತ್ತ ವೇದಿಕೆ

''ವಿಶ್ವಶ್ರಮ ಚೇತನ'', ಗೋಕುಲ ರಸ್ತೆ ಹುಬ್ಬಳ್ಳಿ - ೫೮೦ ೦೩೦.

ಕರ್ನಾಟಕ ರಾಜ್ಯ

ಹೃದಯ ಗೀತ (ಸಮಗ್ರ ಮರಾಠಿ ಕಾವ್ಯದ ಕನ್ನಡ ಅನುವಾದ)

★

ಕವಿ : 'ಅಂಬಿಕಾತನಯದತ್ತ' (ವರಕವಿ ಡಾ|| ದ. ರಾ. ಬೇಂದ್ರೆ)

★

ಅನುವಾದಕರು : "ಸಂ. ವಾ. ದ" ಡಾ|| ವಾಮನ ಬೇಂದ್ರೆ,
ಸಹ ನಿರ್ದೇಶಕರು, ಬೇಂದ್ರೆ ಸಂಶೋಧನ ಸಂಸ್ಥೆ ಹುಬ್ಬಳ್ಳಿ

★

ಪ್ರಕಾಶಕರು :
ಡಾ|| ಕೆ. ಎಸ್. ಶರ್ಮಾ, ನಿರ್ದೇಶಕರು, ಬೇಂದ್ರೆ ಸಂಶೋಧನ ಸಂಸ್ಥೆ ಹುಬ್ಬಳ್ಳಿ
ಶ್ರೀಮಾತಾ ಪ್ರಕಾಶನ,
ಅಂಬಿಕಾತನಯದತ್ತ ವೇದಿಕೆ, 'ವಿಶ್ವಶ್ರಮ ಚೇತನ', ಗೋಕುಲ ರಸ್ತೆ ಹುಬ್ಬಳ್ಳಿ - 580 030.

★

★

ಬೆಲೆ : ರೂ.140-00

★

ಆವೃತ್ತಿಗಳು : ಪ್ರಥಮ ಆವೃತ್ತಿ 2ನೇ ಫೆಬ್ರವರಿ, 2007, ಭಾರತ ಹುಣ್ಣಿವೆ
ವರಕವಿ ಡಾ|| ದ. ರಾ. ಬೇಂದ್ರೆಯವರ 111ನೇ ಜನ್ಮ ವಾರ್ಷಿಕ ದಿನಾಚರಣೆ

★

ಆಕಾರ : 1/8 ಡೆಮ್ಮಿ

★

ಹೊರಹೊದಿಕೆ ವಿನ್ಯಾಸ : ಶ್ರೀ ರವೀಂದ್ರ ಶಿರೋಳಕರ, ಧಾರವಾಡ

★

ಪುಟ ವಿನ್ಯಾಸ/ಡಿಟಿಪಿ : ಶ್ರೀ ಈರಣ್ಣ ನೂಲ್ವಿ, ಡಾ|| ಕೆ. ಎಸ್. ಶರ್ಮಾ ಐ.ಟಿ.ಸಿ., ಹುಬ್ಬಳ್ಳಿ

★

ಮುದ್ರಕರು :
ಶರ್ಮಾ ಮುದ್ರಕರು,
4, ಪತ್ರಕರ್ತರ ಕಾಲನಿ, ಹುಬ್ಬಳ್ಳಿ - 580 032.

★

ಕೃತಿಗಳಿಗಾಗಿ ಬರೆಯಿರಿ :
ಶ್ರೀಮಾತಾ ಪ್ರಕಾಶನ,
'ವಿಶ್ವಶ್ರಮ ಚೇತನ', ಗೋಕುಲ ರಸ್ತೆ ಹುಬ್ಬಳ್ಳಿ - 580 030. ದೂರವಾಣಿ : (0836) 2330466.

ರವೀಂದ್ರ ಪುಸ್ತಕಾಲಯ,
ಚಾಮರಾಜಪೇಟೆ, ಸಾಗರ - 577 401, ಶಿವಮೊಗ್ಗ ಜಿಲ್ಲೆ ದೂರವಾಣಿ : 08183-228616 (ಕ).

ಸಮರ್ಪಣೆ



★ ವರಕವಿ ಡಾ|| ದ. ರಾ. ಬೇಂದ್ರೆಯವರ ಕಾವ್ಯಾಶ್ರಯದಲ್ಲಿ ಬೆಳೆಯುತ್ತಾ, ನನ್ನಲ್ಲಿಯ ಕನ್ನಡ ಮತ್ತು ಮರಾಠಿ ಸಾಹಿತ್ಯ ಸೃಜನಕ್ರಿಯೆಗೆ ನೆರಳಾದ ನನ್ನ ಮನದನ್ನೆ.

★ ಸಂಸ್ಕೃತ-ಮರಾಠಿ-ಕನ್ನಡ ಸಾಹಿತ್ಯಗಳ ತ್ರಿ-ವೇಣಿ ಸಂಗಮವಾಗಿದ್ದ ನನ್ನ ಸಾಹಿತ್ಯ ಸಂಗಾತಿ.

★ ಮಹಾಕವಿ ಕಾಳಿದಾಸನ ''ಮೇಘದೂತ''ವನ್ನು ಮರಾಠಿಯಲ್ಲಿ ಭಾವಾನುವಾದ ಮಾಡಿದ ಕೀರ್ತಿ ಪಡೆದ 'ದತ್ತಾತ್ರೇಯ'ರ ಅನುಪಮ ಸೊಸೆ.

★ ನನ್ನ ಹಾಗೂ ನನ್ನ ತಂದೆಯವರ ಮರಾಠಿ ಕೃತಿಗಳ ಅಚ್ಚುಕಟ್ಟಾದ ಹಸ್ತಪ್ರತಿಗಳನ್ನು ಸಿದ್ಧಪಡಿಸುವದರ ಮೂಲಕ ಅವುಗಳ ಪ್ರಕಟನೆಗೆ ನೆರವಾದ 'ಬಾಳ ಸಂಗಾತಿ'.

★ ಉತ್ತಮ ಸಣ್ಣ ಕತೆಗಳನ್ನು ಬರೆದು, ಕನ್ನಡ ಸಾಹಿತ್ಯವನ್ನು ಸಿರಿವಂತಗೊಳಿಸಿದ ''ವೈಖರಿ''ಯ ಮಮತೆಯ ಮಾತೆ.

★ ವಿಶಾಖಾ! ನಿನ್ನ ಕೊಡುಗೆಗಳು ಅಮರ! ನೀನೂ ಅಮರ.

ನನ್ನ ಬಾಳ ಸಖಿ

ಸೌ. ವಿಶಾಖಾ (ಮಂದಾಕಿನಿ)ಗೆ

ಅಂಬಿಕಾತನಯದತ್ತರ ಸಮಗ್ರ ಮರಾಠಿ ಕಾವ್ಯದ ಕನ್ನಡ ಭಾವಾನುವಾದ
''ಹೃದಯ ಗೀತ''ದ ಒಲವಿನ ಸಮರ್ಪಣೆ.

೨-೨-೨೦೦೭ - ವಾಮನ ಬೇಂದ್ರೆ

ಪರಿವಿಡಿ

ಅನುವಾದಕರ ಭೂಮಿಕೆ

ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ಹುಟ್ಟಿದ್ದು ೩೧-೧-೧೮೯೬ ರಂದು ಧಾರವಾಡದಲ್ಲಿ. ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಈಗಿನ ವಿದ್ಯಾರಣ್ಯ ಹೈಸ್ಕೂಲಿನಲ್ಲಿ, ಕನ್ನಡ ಮಾಧ್ಯಮದಲ್ಲಿಯೇ ಕಲಿತದ್ದು. ಆಗಿನ ಸಾಮಾಜಿಕ ಪರಿಸರದಲ್ಲಿ ಮರಾಠಿ ಭಾಷೆಗೆ ಪ್ರಾಧಾನ್ಯವಿದ್ದರೂ, ಶಾಲೆಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಇಂಗ್ಲಿಷ್, ಸಂಸ್ಕೃತ ಹಾಗೂ ಕನ್ನಡ ಭಾಷೆ, ವಾಙ್ಮಯದ ಪ್ರೀತಿಯನ್ನು ಬಿತ್ತುತ್ತಿದ್ದರು. ಶ್ರೇಷ್ಠ ಕವಿಗಳ ಕಾವ್ಯ ಹಾಗೂ ನಾಟಕಗಳನ್ನು ಕಂಠಪಾಠ ಮಾಡಿಸುವುದು, ನಾಟಕ ದೃಶ್ಯಗಳ ಅಭಿನಯ ಮಾಡಿಸುವುದು ಶಿಕ್ಷಕರ ಕರ್ತವ್ಯ ಎಂದು ಭಾವಿಸಲಾಗುತ್ತಿತ್ತು. ಈ ಎರಡೂ ಕಾರ್ಯದಲ್ಲಿ ಬೇಂದ್ರೆ ಹಾಗೂ ಅವರ ಬಾಲ್ಯ ಸ್ನೇಹಿತ ಶ್ರೀಧರ ಖಾನೋಳಕರ ಮುಂದಾಗಿದ್ದರು. ಇದರ ಫಲವಾಗಿ ಇವರಿಬ್ಬರಲ್ಲಿ - ಕನ್ನಡ, ಇಂಗ್ಲಿಷ್ ಹಾಗೂ ಸಂಸ್ಕೃತದಲ್ಲಿ ಕಾವ್ಯ ರಚಿಸುವ ಹವ್ಯಾಸ, ಪ್ರೌಢಶಾಲಾ ವಿದ್ಯಾಭ್ಯಾಸದ ಕಾಲದಲ್ಲಿ - ೧೯೧೩ ರ ಪೂರ್ವದಲ್ಲಿಯೇ ಬೆಳೆದುಬಿಟ್ಟಿತು.

೧೯೧೪ ರಿಂದ ೧೯೧೮ ರ ವರೆಗೆ ಬೇಂದ್ರೆ ಮತ್ತು ಖಾನೋಳಕರ ಮಹಾವಿದ್ಯಾಲಯದ ಅಭ್ಯಾಸಕ್ಕಾಗಿ ಪುಣೆಯ ಪ್ರಖ್ಯಾತವಾದ - ಫರ್ಗ್ಯುಸನ್ ಕಾಲೇಜ ಸೇರಿದರು. ಅಲ್ಲಿಯ ಪ್ರಾಧ್ಯಾಪಕರೂ ಇಂಗ್ಲಿಷ್ ಹಾಗೂ ಸಂಸ್ಕೃತ ಸಾಹಿತ್ಯ ಪ್ರವೀಣರಾಗಿದ್ದರಿಂದ ವಾಙ್ಮಯ ಪ್ರೀತಿ ಬೆಳೆಯುತ್ತಲೇ ಹೋಯಿತು. ಇದರ ಜೊತೆಗೆ ಬೇಂದ್ರೆಯವರು ಮಹಾಕವಿ ರವೀಂದ್ರನಾಥ ಟಾಗೋರ ಹಾಗೂ ಮಹಾಯೋಗಿ ಶ್ರೀ ಅರವಿಂದರನ್ನು ತಮ್ಮ ಕಾವ್ಯ ಮಾರ್ಗದ ಗುರುಗಳಾಗಿ ಸ್ವೀಕರಿಸಿದರು. ಮಹಾಕವಿ ಕಾಲಿದಾಸ ಹಾಗೂ ಮಹಾ ನಾಟಕಕಾರ ಶೆಕ್ಸಪೀಯರ ಇವರ ಕಾವ್ಯ ದೀಕ್ಷೆ ಬೇಂದ್ರೆಯವರಲ್ಲಿ ಕಾರ್ಯ ಮಾಡತೊಡಗಿತು. ಇದೇ ಕಾಲಕ್ಕೆ ಕನ್ನಡ ಮಹಾಕವಿ ನಾದಲೋಲ ಲಕ್ಷ್ಮೀಶ, ದಾಸಶ್ರೇಷ್ಠ ಕನಕದಾಸ ಹಾಗೂ ಸಮಾಜ ಶಿಕ್ಷಕ ಸರ್ವಜ್ಞ ಇವರ ಕಾವ್ಯಾಭ್ಯಾಸ ಮಾಡುವುದು ಬೇಂದ್ರೆ ಹಾಗೂ ಖಾನೋಳಕರ ಅವರ ನಿತ್ಯಪಾರಾಯಣದ ಕಾರ್ಯವಾಗಿತ್ತು. ಕರ್ನಾಟಕದ ಈ ವಿದ್ಯಾರ್ಥಿಗಳ ಪ್ರತಿಭೆ ಕಂಡು ಬೆರಗಾದ ಪುಣೆಯ ಮರಾಠಿ ವಿದ್ಯಾರ್ಥಿ ಶ್ರೇಷ್ಠರು, ಇವರೊಂದಿಗೆ ಸ್ನೇಹ ಬೆಳೆಸಿದರು. ಆಗ ಬೇಂದ್ರೆಯವರು ತಾವೂ ಮರಾಠಿ ಕಾವ್ಯ, ಸಾಹಿತ್ಯವನ್ನು ಆಳವಾಗಿ ಅಭ್ಯಾಸಮಾಡಿದ ಅನುಭವವನ್ನು ಅವರಿಗೆ ಕೊಡುತ್ತ ಪತ್ಯ

ಗ್ರಂಥಗಳ ಅಭ್ಯಾಸದಲ್ಲಿ ಭಾಷಾಪ್ರಜ್ಞೆ ಹಾಗೂ ಸಾಹಿತ್ಯ ಔನ್ನತ್ಯ ಗುರುತಿಸುವುದು ಹೇಗೆ ಎಂಬುದನ್ನು ಕುರಿತು ಸುದೀರ್ಘವಾಗಿ ಚರ್ಚಿಸಿದರು. ಮರಾಠಿ ಸಂತ ಮಹಾಕವಿಗಳಾದ ಶ್ರೀ ಜ್ಞಾನೇಶ್ವರ, ಏಕನಾಥ, ತುಕಾರಾಮ ಅವರ ಓವಿ ಹಾಗೂ ಅಭಂಗ ಛಂದಸ್ಸಿನ ಕಾವ್ಯ ಹಾಗೂ ಆ ಕಾಲದಲ್ಲಿ ಮರಾಠಿ ಜನರಲ್ಲಿ ಮನ್ನಣೆ ಸಂಪಾದಿಸಿದ ಸತ್ಪುರುಷರಾದ ರಾಮದಾಸ, ಚಿದಂಬರ ದೀಕ್ಷಿತ ಹಾಗೂ ಬ್ರಹ್ಮಚೈತನ್ಯ ಗೋಂದವಲೇಕರ ಮಹಾರಾಜರನ್ನು ಕುರಿತೂ ಆಳವಾಗಿ, ವೈಚಾರಿಕ ನೆಲೆಯಿಂದ ಮಾತನಾಡುತ್ತಿದ್ದರು. ಬೇಂದ್ರೆ ಪುಣೆಯಲ್ಲಿದ್ದರೂ ಅವರ ಮನಸ್ಸು

"ಧಾರವಾಡದ । ಧಾರಾ
ಧಾರಾತೀರ್ಥಾ - ಗುಪ್ತಶಾಲ್ಮಲಿ
ಮುಕ್ತಾ ಗೋಕರ್ಣದ ಸಮುದ್ರಾ
'ಅಂಬಿಕೆ' ನನ್ನ ತಾಯಿ
ಬಿತ್ತಿದಳು ಕನ್ನಡ ಭಾಷೆಯ ತಂತ್ರಾ
ತಾತಾ - ರಾಮಚಂದ್ರಾ
ಶಕ್ತಿದಾನ ಮಾಡಿದಾ ರಾಮಮಂತ್ರಾ !
ಇದು ನನಗೆ ನಾಥಾ-ದತ್ತಾ ಕೊಟ್ಟಗಾಥಾ
ಇದು ಅಲ್ಲ ಕಥಾ। ಶುದ್ಧ ಭಾವಗೀತಾ
'ಅಂಬಿಕಾತನಯದತ್ತಾ'
ಉನ್ಮನದಲ್ಲಿ ಸಂಪ್ರೀತಾ" -

- ಕವನ ೫೫ - 'ನೆನಪಾತು ಆಮ್ಯಾಲೆ'

ಎಂದೇ, ಬೇರು ಧರಿಸುತ್ತಿತ್ತು.

೧೯೧೬ ರ ಪೂರ್ವದಲ್ಲಿ ಬೇಂದ್ರೆ ಹಾಗೂ ಖಾನೋಳಕರ ಬರೆದ ಕವನಗಳನ್ನು ಪರಸ್ಪರರಲ್ಲಿ ಓದಿ ಹಾಗೂ ಪುಣೆಯ ಕನ್ನಡ ಸಹಾಧ್ಯಾಯಿಗಳಿಗೆ ಓದಿ ತೋರಿಸಿ ಆನಂದ ಪಡೆಯುತ್ತಿದ್ದರು. ಹೀಗೆ ರಚಿಸಿದ ಕವನಗಳೆಲ್ಲ ಒಂದೇ ನೋಟಬುಕ್ಕಿನಲ್ಲಿ ಬರೆದಿಟ್ಟದ್ದರು. ಅದರಲ್ಲಿಯ ಹೊಸ ಕವನಗಳನ್ನು ಖಾನೋಳಕರರಿಗೆ ಓದಿ ತೋರಿಸಿ, ಆನಂದದಲ್ಲಿ ಪುಣೆಯ ಮನೆಗೆ ಮರಳುವಾಗ, ದಾರಿಯಲ್ಲಿಯ ಮುಳಾಮುಠಾ ನದಿಯ ಪೂಲು ದಾಟುವಾಗ, ಬೇಂದ್ರೆ ಕೈಚೀಲ ಚಿಮ್ಮಿ ನದಿಯ ಪಾಲಾಯಿತು. ಇದಕ್ಕೆ ಕಾರಣ ಬೇಂದ್ರೆಯವರ ಆವೇಶದ ಕಾಲುನಡಿಗೆ ಹಾಗೂ ಕೈ ಕೊಡೆಯನ್ನು ತೂಗಾಡಿಸುವ ರೀತಿ. ಇಬ್ಬರಿಗೂ ವ್ಯಥೆ ಆಯಿತು, ಪರಿಹಾರವಿಲ್ಲ. ಹೀಗಾಗಿ ೧೯೧೬ರ ಪೂರ್ವದ ಬೇಂದ್ರೆ ಕಾವ್ಯಸೃಷ್ಟಿಗೆ ಆಧಾರ ಉಪಲಬ್ಧವಿಲ್ಲ. ಬೇಂದ್ರೆ ಜೀವನವೇ ಕಾವ್ಯ ಹಾಗೂ ಕಾವ್ಯವೇ ಜೀವನವಾದ ಕಾಲವದು.

೧೯೧೮ಕ್ಕೆ ಬೇಂದ್ರೆಯವರು ಧಾರವಾಡದ ವಿದ್ಯಾರಣ್ಯ ಹೈಸ್ಕೂಲಿನಲ್ಲಿಯೇ ಶಿಕ್ಷಕರಾಗಿ

ವೃತ್ತಿ ಪ್ರಾರಂಭಿಸಿದ್ದು ಮಹಾಸುಯೋಗ. ೧೯೧೮ರ ಧಾರವಾಡದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕಾವ್ಯ ವಾಚನ ಮಾಡಿ ಪಂಡಿತ ಹಾಗೂ ಪಾಮರರ ಮನ್ನಣೆ ಪಡೆದದ್ದು - ಅವರು ೧೯೧೬-೧೯೧೮ರ ಕಾಲಾವಧಿಯಲ್ಲಿ ರಚಿಸಿದ ಕವನಗಳಿಂದ. ಪ್ರಥಮ ಕಾವ್ಯ ವಾಚನದಿಂದ 'ವರಕವಿ' ಎಂಬ ಜನಮೆಚ್ಚಿಗೆ ಲಭಿಸಿದ್ದು ಅಸಾಮಾನ್ಯ ಘಟನೆ. ಇದರಿಂದ ಉತ್ಥಾನ ಪಡೆದ ಬೇಂದ್ರೆಕಾವ್ಯಪ್ರಜ್ಞೆ ವಿದ್ಯಾರಣ್ಯ ಹೈಸ್ಕೂಲಿನಲ್ಲಿ ಅವರು ನಿರ್ಮಿಸಿದ ಎಳೆಯರ ಗೆಳೆಯರ ಗುಂಪಿನಲ್ಲಿ ಪ್ರತಿಷ್ಠೆ ಪಡೆಯತೊಡಗಿತ್ತು. ಬೇಂದ್ರೆಯವರಿಗೆ ಕನ್ನಡ ಮಾತು ಹಾಗೂ ಕನ್ನಡ ಕಾವ್ಯಸೃಷ್ಟಿ ಹೃದಯಸ್ಥ ಭಾವ.

''ಮಾತು ಹೇಳಬೇಕಾದವರೂ, ಕೇಳಬೇಕಾದವರೂ ಒಳಮನಸ್ಸನ್ನು ಹದ ಮಾಡಬೇಕು. ಜೀವಭಾವದ ಮೈತ್ರಿಯ ಪುತ್ರರಾಗಬೇಕು..........ಹೃದಯವು ಹೃದಯದ ಒಳಹೋಗುವಂತೆ, ಬುದ್ಧಿ ಬುದ್ಧಿಯನ್ನು ಆಲಿಂಗಿಸುವಂತೆ, ಭಾವಕ್ಕೆ ಭಾವದ ಸರಪಣಿ ಕೂಡಿ ಬರುವಂತೆ, ಸಂವಾದಿ ಸ್ವರಮಾಲಿಕೆಯಂತೆ ಮಾತಿನ ರೀತಿ ಇರಬೇಕು. ಅದು ಮಾತುಗಾರಿಕೆಯ ಗತ್ತು ಮತ್ತು ಗಮಕ..........ಏನೆಂದರೂ ಬರಹದ ಮಾತೂ ಸಾಹಿತ್ಯದ ಮಾತಾಗಿ, ಹೃದಯದ ಮಾತಾಗಬೇಕಾದರೆ, ಅದಕ್ಕೆ ಬಾಯ್ಮಾತಿನ ಬಣ್ಣ ಬರಬೇಕಾಗುತ್ತದೆ. ಮುದ್ರಿತವಾದ ಅಕ್ಷರ ಮೂಕ. ಅದನ್ನು ನುಡಿಸಿ ತೋರಿಸಬೇಕು. ಬರೆಹ, ಬಾಯಿಮಾತಿನ ಉಸಿರಿನಿಂದ ಪ್ರಾಣ ಪ್ರತಿಷ್ಠಾಪನೆ ಹೊಂದುತ್ತದೆ. ಬರಹದ ಮಾತು ಕಣ್ಣಿಗೆ ಸಾಲಬಹುದು, ಬುದ್ಧಿಗೆ ನಿಲುಕಬಹುದು, ಆದರೆ ಬಾಯಿ ಮಾತು, ಕಿವಿ ಮಾತಾಗಬೇಕು; ಹೃದಯದ ಮಾತಾಗಬೇಕು'' -(ಸಾಹಿತ್ಯದ ವಿರಾಟ್ ಸ್ವರೂಪ). ಬೇಂದ್ರೆಯವರ ಈ ಕಾವ್ಯಧೋರಣೆಯ ಮೂಲಕ ಬೇಂದ್ರೆ ಕಾವ್ಯದಲ್ಲಿ ಆಡುಮಾತಿನ ಶಕ್ತಿ, ಧಾರವಾಡ ಭಾಷೆಯ ದೇಸೀಯ ಸೊಗಸು ಹಾಗೂ ಕಾವ್ಯ ವಾಚನ ಪದ್ಧತಿ ಜನಪ್ರಿಯವಾಯಿತು ಎಂದು ನಿರ್ಣಯಿಸ ಬೇಕಾಗುತ್ತದೆ. ಬುದ್ಧಿ ಮತ್ತು ಭಾವದ ಕಸಿಮಾಡಿ ಅದನ್ನು ಹೃದಯದಲ್ಲಿ ಬಿತ್ತುವ ಎದೆಯ ಒಕ್ಕಲಿಗ - ಬೇಂದ್ರೆ!

''ಗಾಂಧಿಯವರ ಪಾದದ ಬಳಿ ನನಗೆ ತಾಟಸ್ಥ್ಯದ ಮೌನ, ರವೀಂದ್ರರ ಕೃತಿಗಳಿಗೆ ಶ್ರುತಿಮೌನ; ಅರವಿಂದವಾಣಿನ ನಗೆ ಸೂತ್ರಸ್ವರ! ಕನ್ನಡದ ಗರ್ಭ, ಸರ್ವಧಾರಣಾ ಸಮರ್ಥ! ಭರತ-ಕೃಷ್ಣ-ಅಲ್ಲಮ ಎಂಥ ಪಿಂಡವಾದೀತು, ಸಮನ್ವಯ ಸಂಧಿ ಸಂಧಾನ ನಡೆದರೆ.......... ಅಧ್ಯಾತ್ಮ ಪ್ರಸಾದ, ಚಿತ್ತಪ್ರಸಾದ, ಅರ್ಪಣ-ದರ್ಪಣ ಇವು ಸಾಗಿದರೂ ಸಾಕು. ಅಂಬಿಕಾತನಯನ ಕಾವ್ಯಲೀಲೆ ಬೇಂದ್ರೇನ ಉದ್ಧಾರ ಶಾಲೆ..........ಕನ್ನಡ ಮಾತೆ ಧ್ವನಿದೋರುವ ಒಂದು ಹೃದಯಸ್ಥ ಭಾವ ಎಂಬ ಔಚಿತ್ಯದ ಒಪ್ಪ ತನ್ನ ವಾಣಿಗೆ ಬರುವುದೇ ಸಿದ್ಧಿ ಎಂಬ ತವಕ ಬೇಂದ್ರೇನ ಉಸಿರಾಟವಾಗಿದೆ. ಅದಕ್ಕೆ ಮರಣಾಂತವೇಕೆ? ಜನ್ಮಾಂತರದಲ್ಲಿಯೂ ಹೆಣಗಬೇಕಾದೀತು. ನಾಳಿನ ಮಾನವತೆಯ ಹೃದಯಸ್ಥ ಭಾಷೆಯೇ ಕವಿತೆ............ ನಾನು ಒಲವು ಲಿಂಗದ ಉದ್ಭವವಾದಿ, ಅದು ನನ್ನ ಹಾದಿ. ಅದಕ್ಕೆ ತಕ್ಕ ಪದ, ಅರ್ಥ, ಭಾವ, ಲಯ, ಧ್ವನಿ, ಪ್ರಕೃತಿ, ಪೌರುಷ ನನ್ನದು. ನನ್ನ ಅನುಭಾವಕ್ಕೆ ಅನುಭವ ದೂರಿಲ್ಲ'' - (ಸಾಹಿತ್ಯದ ವಿರಾಟ್ ಸ್ವರೂಪ).

ಈ ಅವತರಣಿಕೆ ಬೇಂದ್ರೆ ಕಾವ್ಯದ ಪ್ರಮುಖ ಆಯಾಮಗಳನ್ನು, ಗುರಿಗಳನ್ನು ಸ್ಪಷ್ಟಪಡಿಸುತ್ತದೆ. ಬೇಂದ್ರೆ ಕಾವ್ಯದಲ್ಲಿ ಅನುಭಾವ, ಅಧ್ಯಾತ್ಮ, ಅವಧೂತ ಮಾರ್ಗದ ಶಿಖರ ಕಾಣುತ್ತೇವೆ. ಒಲವಿನ ಉಪಾಸನೆ ಉದ್ಭವ ಕಾವ್ಯದ ಪುಣ್ಯಭೂಮಿ. ನಾಳಿನ ಮಾನವತೆಯ ಹೃದಯಸ್ಥ ಭಾವವನ್ನು ಹದಗೊಳಿಸಲು ಬೇಂದ್ರೆಯವರು ತಮ್ಮ ಕಾವ್ಯಪ್ರಜ್ಞೆಯನ್ನು ಕರ್ನಾಟಕಕ್ಕೆ, ಕನ್ನಡ ಭಾಷೆಗೆ ದಾನ ಮಾಡಿದ್ದಾರೆ. ಇದರಂತೆಯೇ ಮಹಾರಾಷ್ಟ್ರಕ್ಕೂ ಮರಾಠಿ ಭಾಷೆಗೂ ತನ್ನ ಕಾವ್ಯದ ಹುರುಳು ಉಣಿಸಿದ್ದಾರೆ. ಬೇಂದ್ರೆಯವರ ಕನ್ನಡ ಕಾವ್ಯವೇ ಇರಲಿ ಹಾಗೂ ಮರಾಠಿ ಕಾವ್ಯವೇ ಇರಲಿ ಅದು ಅವರ ಹೃದಯ. ತಮ್ಮ ಕಾವ್ಯವನ್ನು ವಿಶಿಷ್ಟ ಲಯದಲ್ಲಿ, ಗಮಕದಲ್ಲಿ, ಪದ್ಧತಿಯಲ್ಲಿ ವಾಚನ ಮಾಡಿದ್ದರಿಂದ ಅದು ಗೇಯ-ಗಾಥೆ ಆಗಿ ಕೀರ್ತಿ ಪಡೆಯಿತು. ಆದುದರಿಂದಲೇ ಬೇಂದ್ರೆಯವರ ಸಮಗ್ರ ಮರಾಠಿ ಕಾವ್ಯದ ಭಾವಾನುವಾದದ ಈ ಸಂಕಲನಕ್ಕೆ ''ಹೃದಯಗೀತ'' ಎಂದು ನಾಮಕರಣ ಮಾಡಿದ್ದು.

ಬೇಂದ್ರೆಯವರು ಧಾರವಾಡದಲ್ಲಿ ೧೮೯೬ ರಿಂದ ೧೯೧೪; ೧೯೧೮ ರಿಂದ ೧೯೩೨; ೧೯೩೫-೧೯೪೪; ೧೯೫೬-೧೯೮೧ ರ ವರೆಗೆ ಎಂದರೆ ಒಟ್ಟು ೬೭ ವರ್ಷ ಬೆಳೆದರು. ಪುಣೆಯಲ್ಲಿ ೧೯೧೪ ರಿಂದ ೧೯೧೮ ಹಾಗೂ ೧೯೩೨-೧೯೩೫ರ ವರೆಗೆ ೬ ವರ್ಷ ಬಿ. ಎ. ಹಾಗೂ ಎಂ. ಎ. ವಿದ್ಯಾಭ್ಯಾಸ ಮಾಡಿದರು. ಸೊಲ್ಲಾಪುರದಲ್ಲಿ ೧೯೪೪ ರಿಂದ ೧೯೫೬ ರ ವರೆಗೆ ೧೨ ವರ್ಷ ಕನ್ನಡ ವಿಷಯದ ಪ್ರಾಧ್ಯಾಪಕರಾಗಿ, ಕನ್ನಡ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದರು. ಧಾರವಾಡ-ಉತ್ತರ ಕರ್ನಾಟಕದ ಹೃದಯ, ಪುಣೆ-ಮಹಾರಾಷ್ಟ್ರದ ಭಾಗ್ಯ, ಸೊಲ್ಲಾಪುರ-ಕನ್ನಡ ಹಾಗೂ ಮರಾಠಿಯ ಸಮನ್ವಯ ಭೂಮಿ. ಕರ್ನಾಟಕದ ಎಲ್ಲ ವಿದ್ಯಾರ್ಥಿಗಳು ಮಹಾವಿದ್ಯಾಲಯ ಅಭ್ಯಾಸಕ್ಕಾಗಿ ಸಮಿಪದ ಪುಣೆಗೆ ಹೋಗುತ್ತಿದ್ದರು, ಬೇಂದ್ರೆಯವರೂ ಹೋದರು. ಉಪಜೀವನದ ಮಾರ್ಗಾವಲಂಬಿಯಾಗಿ ಬೇಂದ್ರೆ, ಸೊಲ್ಲಾಪುರಕ್ಕೆ ಹೋಗಬೇಕಾಯಿತು, ಹೋದರು. ಹೀಗಾಗಿ ಬೇಂದ್ರೆಯವರಿಗೆ ಮರಾಠಿ ಭಾಷಿಕರ, ಸಾಹಿತಿಗಳ, ಸಂಸ್ಕೃತಿಯ ನಿಕಟ ಸಂಬಂಧ ಬಂದದ್ದು ಕೇವಲ ೧೮ ವರ್ಷ ಮಾತ್ರ. ಕರ್ನಾಟಕ ಮತ್ತು ಮಹಾರಾಷ್ಟ್ರಗಳ ''ಯುಗ ಯುಗಗಳ ಋಣಾನುಬಂಧ''ವನ್ನು ಸ್ಮರಿಸಿ, ಕನ್ನಡ ಹಾಗೂ ಮರಾಠಿ ಭಾಷೆಯ ಸಾಹಿತ್ಯ ಹಾಗೂ ಸಂಸ್ಕೃತಿಯ ಮರ್ಮಸ್ಥಳಗಳನ್ನು ಅಭ್ಯಸಿಸಿ, ಕನ್ನಡಿಗರ ಮತ್ತು ಮರಾಠಿಗರ ಮನಸ್ಸುಗಳನ್ನು ಬೆಸೆಯುವ ಕಾರ್ಯ ಒಂದು ಕರ್ತವ್ಯವಾಗಿ ಬೇಂದ್ರೆ ಪಾಲಿಸಿದರು. ಇದಕ್ಕೆ ಸಾಕ್ಷಿ - ''ಹೃದಯಗೀತ''-ಕವನ ಸಂಕಲನ.

೧೯೫೯ರಲ್ಲಿ ಮೈಸೂರು ವಿಶ್ವವಿದ್ಯಾಲಯದವರು ಬೇಂದ್ರೆಯವರನ್ನು 'ಮಹಾರಾಷ್ಟ್ರ ಸಾಹಿತ್ಯ' ಕುರಿತು ವಿಶೇಷ ಉಪನ್ಯಾಸ ನೀಡಲು ಆಮಂತ್ರಿಸಿದರು. ೧೯೬೦ರಲ್ಲಿ ನಾಗಪೂರ ಆಕಾಶವಾಣಿ ಕೇಂದ್ರದವರು ಶ್ರೀ ಪು. ಮ. ಲಾಡ ವ್ಯಾಖ್ಯಾನಮಾಲೆಯಲ್ಲಿ ''ವಿಠ್ಠಲ ಸಂಪ್ರದಾಯ'' ಕುರಿತು ವಿಶೇಷ ಉಪನ್ಯಾಸ ಮಾಡಿಸಿದರು. ೧೯೬೩ರಲ್ಲಿ ಪುಣೆಯ ಕೌಶಿಕ ವ್ಯಾಖ್ಯಾನ ಮಾಲೆಯವರು ''ಸಂತ ಮಹಂತಾಂಚಾ ಪೂರ್ಣ ಶಂಭು ವಿಠ್ಠಲ'' (ಸಂತ

ಸತ್ಪುರುಷರು ಕಂಡ ಪೂರ್ಣ ಶಂಭು ವಿಠ್ಠಲ) ವಿಶಿಷ್ಟ ಉಪನ್ಯಾಸ ಕೊಡಿಸಿದರು. ೧೯೬೫ರಲ್ಲಿ ಬೇಂದ್ರೆಯವರು ೧೯೪೪ ರಿಂದ ೧೯೫೬ ರ ವರೆಗೆ ಪ್ರಕಟಿಸಿದ ಗದ್ಯಪದ್ಯಗಳಿಂದ ಆಯ್ದ ಲೇಖನ ಮತ್ತು ೪೪ ಕವನಗಳ ಸಂವಾದ ಎಂಬ ಗ್ರಂಥವನ್ನು ಪ್ರಕಟಪಡಿಸಿದರು. ಬೇಂದ್ರೆ ಸಾಹಿತ್ಯದ ಸಹೃದಯ ಅಭಿಮಾನಿ ಶ್ರೀ ದಾ. ಗೋ. ದೇಶಪಾಂಡೆಯುವರು ಸಂಪಾದಿಸಿದ್ದರು. ಅದೇ ವರ್ಷ ಈ ಗ್ರಂಥಕ್ಕೆ ನ. ಚಿ. ಕೇಳಕರ ಬಹುಮಾನದ ಮನ್ನಣೆಯೂ ೧೯೬೫ರಲ್ಲಿ ದೊರಕಿತು. ೧೯೬೮-೧೯೭೧ರ ವರೆಗೆ ಪುಣೆಯ ''ಕೇಸರಿ'' ಕಾರ್ಯಾಲಯದವರು, ಪುಣೆ ವಿಶ್ವವಿದ್ಯಾಲಯದವರು ಬೇಂದ್ರೆಯವರ ಮರಾಠಿ ಉಪನ್ಯಾಸಗಳನ್ನು ಏರ್ಪಡಿಸಿದರು. ೧೯೭೨ರಲ್ಲಿ ಸೊಲ್ಲಾಪುರದ ಜನತೆ ಬೇಂದ್ರೆಯವರಿಗೆ ೭೫ ವರ್ಷಪೂರ್ಣಗೊಂಡದ್ದನ್ನು ಸ್ಮರಿಸಿಕೊಂಡು ''ಅಮೃತಮಹೋತ್ಸವ'' ಆಚರಿಸಿದರು. ಈ ಎಲ್ಲ ಕಾಲಕ್ಕೂ ಬೇಂದ್ರೆಯವರ ಹೆಸರಿನೊಡನೆ ಕರ್ನಾಟಕದ ವರಕವಿ ಎಂಬ ವಿಶೇಷಣದ ಉಲ್ಲೇಖವನ್ನು ತಪ್ಪದೇ ಮಾಡಿದರು. ಈ ಘಟನೆಗಳು ಬೇಂದ್ರೆಯವರ ಮರಾಠಿ ಸಾಹಿತ್ಯ ಕೊಡುಗೆಗೆ ಪೂರಕವಾದುವು.

ಬೇಂದ್ರೆಯವರ ಕನ್ನಡ ಮತ್ತು ಮರಾಠಿ ಕಾವ್ಯ ಜೀವನದ ಪ್ರಾರಂಭ ೧೯೧೮ ಹಾಗೂ ಮುಕ್ತಾಯ ೧೯೮೧. ಹೀಗೆ ಆಗಲು ಪ್ರಮುಖ ಕಾರಣ ಮೇಲೆ ವಿವರಿಸಿದ ಜೀವನ ಘಟನೆಗಳು. ಜೀವನ ಘಟನೆಗಳು ಉದಾತ್ತವಾಗಿದ್ದರಿಂದಲೇ ಸಾಹಿತ್ಯ ಸೃಷ್ಟಿ ಔನ್ನತ್ಯವನ್ನು ತಲುಪಿತು. ಬೇಂದ್ರೆಯವರಿಗೆ ಸಾಹಿತ್ಯಕ್ಕಿಂತ ಜೀವನ ಶ್ರೇಷ್ಠ. ''ಔದುಂಬರಗಾಥೆ'' ಅವರ ಜೀವನ ಮಹಾಕಾವ್ಯವಾಯಿತು. ಈ ಮಹಾಕಾವ್ಯದಲ್ಲಿ ಕನ್ನಡ ಹಾಗೂ ಮರಾಠಿ ಕಾವ್ಯದ ಸಂಗಮವನ್ನು ಕಾಣಬಹುದಾಗಿದೆ. ೧೯೯೧ರಲ್ಲಿ ಮಹಾರಾಷ್ಟ್ರ ಸಾಹಿತ್ಯ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಧನದಿಂದ ಬೇಂದ್ರೆಯವರ 'ಉಮಾಳಾ' (ಉಮ್ಮಳಿಕೆ, ಹೃದಯ ತುಂಬಿ ಬರುವಿಕೆ) ಎಂಬ ಕವನ ಸಂಗ್ರಹವನ್ನು ಸಂಪಾದಿಸಿ ಪ್ರಕಟಿಸಿದ್ದೆ. ಬೇಂದ್ರೆಯವರ ಹತ್ತನೆಯ ಮರಣ ವಾರ್ಷಿಕದ ಸ್ಮರಣೆಯಾಗಿ ಉಮಾಳಾ ಪ್ರಕಾಶನ ಕಂಡಿತ್ತು. ಈ ಕಾರ್ಯದಲ್ಲಿ ಡಾ. ಯ. ದಿ. ಫಡಕೆಯವರು, ಮಹಾರಾಷ್ಟ್ರ ಸಾಹಿತ್ಯ ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿ ಸಹಾಯಧನ ದೊರಕಿಸಿದರು. ಇವರು ಬೇಂದ್ರೆ ಸಾಹಿತ್ಯದ ಅಭಿಮಾನಿ. ಬೇಂದ್ರೆಯವರನ್ನು ಗುರು ಸ್ಥಾನ ದಲ್ಲಿ ಇಂದಿಗೂ ಸ್ಮರಿಸುತ್ತಾರೆ. 'ಸಂವಾದ'ದಲ್ಲಿಯ ೪೪ ಕವನಗಳಿಗೆ ಮತ್ತೆ ೬೯ ಹೊಸ ಕವನಗಳನ್ನು ಸೇರಿಸಿ, ೧೧೩ ಕವನಗಳ ಸಂಗ್ರಹ ಉಮಾಳಾ ಆಗಿತ್ತು. ಈಗ ಈ ಹೃದಯಗೀತ ಸಂಕಲನದಲ್ಲಿ - 'ಸಂವಾದ' ಮತ್ತು 'ಉಮಾಳಾ' ದಿಂದ ೯೦ ಕವನಗಳ ಆಯ್ಕೆ ಮಾಡಿ, ೧೦ ಹೊಸ ಕವನಗಳ ಸೇರ್ಪಡೆ ಮಾಡಿರುವೆ. ಇದನ್ನು ಬೇಂದ್ರೆ ಮರಣದ ರಜತ ಮಹೋತ್ಸವದ ಸ್ಮರಣೆಯಾಗಿ ಹಾಗೂ ಬೇಂದ್ರೆಯವರ ೧೧೧ಸೇ ಜನ್ಮ ದಿನದ ನೆನಪಿಗಾಗಿ ವರಕವಿ ಡಾ॥ ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯಿಂದ ಪ್ರಕಟಪಡಿಸುವಲ್ಲಿ ಹೆಮ್ಮೆ ಪಡುತ್ತಿರುವೆ. ಇದಕ್ಕೆ ಡಾ॥ ಕೆ. ಎಸ್. ಶರ್ಮಾ ಅವರ ಪ್ರೇರಣೆಯೇ ಕಾರಣ. ಈ ನೂರೂ ಕವನಗಳ ವಿಭಜನೆ ಮಾಡಿದಾಗ ''ಔದುಂಬರಗಾಥೆ''ಯ ಎಲ್ಲ ಸಂಪುಟಗಳಲ್ಲಿ ಸೇರ್ಪಡೆ ಕಾಣುವ ವೈಶಿಷ್ಟ್ಯ ಕಂಡು ಬರುತ್ತದೆ.

ಬೇಂದ್ರೆ ಮರಾಠಿ ಕಾವ್ಯ ಅರಳಲು ಪ್ರಾರಂಭವಾದದ್ದು ೧೯೧೮ರಲ್ಲಿ ಪುಣೆಯ ಅಂಗಳದಲ್ಲಿ. ಆಗಿನ ಕಾಲಕ್ಕೆ ಪುಣೆಯಲ್ಲಿ ವಧುವಿನ ಆಯ್ಕೆ ಮಾಡುವ ಮಾನದಂಡಗಳು ಯಾವವು ಆಗಿದ್ದವು

ಎಂಬುದನ್ನು ಬೇಂದ್ರೆ ಮಾರ್ಮಿಕವಾಗಿ ವರ್ಣಿಸಿದ್ದಾರೆ.

"ಕಣ್ಣು, ವಾತ್ಸಲ್ಯಕ್ಕ, ತೊಟ್ಟಿಲಾ ಆಗಬೇಕು
ತುಟಿ, ಜೇನು ಸವರಿದ ರುಚಿ ಕೊಡಬೇಕು
ಹೃದಯ, ಸಂಜೀವನ ಶಕ್ತಿ ತಾಳಿರಬೇಕು
ಇದಕ್ಕ ಅಂತಾರಪ್ಪಾ ವಿಶೇಷಾ"

- ಕವನ ೩ - 'ವಧುವಿನ ಆಯ್ಕೆ'

ಈ ಒಂದನ್ನು ಬಿಟ್ಟು, ಉಳಿದೆಲ್ಲವಿತ್ತು ಎಂದು ಬೇಂದ್ರೆ ವಿಡಂಬಿಸಿದ್ದಾರೆ. ವರದಕ್ಷಿಣೆಯ ಸಾವು, ಸ್ತ್ರೀಯರ ಮಾರಾಟ, ಜನಸಂಖ್ಯೆಯ ಅತಿಶಯ ಬರಗಾಲ ಹಾಗೂ ಅನ್ನ ಸಮಸ್ಯೆ ಗಾಂಭೀರ್ಯವನ್ನು ಕುರಿತು ಎರಡು ಕವನಗಳಿವೆ.

೧೯೪೩ರ ಬಡತನದ ಸಮಸ್ಯೆಯನ್ನು ಕುರಿತು ಒಂದು ಕವನ ಬರೆದಿದ್ದಾರೆ. ಇದನ್ನು ವಿಶ್ವ ಸಮಸ್ಯೆ ಎಂದೇ ನಮೂದಿಸಿದ್ದಾರೆ.

"ತಿನ್ನಲು ಸಿಗದೆ ಅನ್ನದ ಅಗಳು
ಹೃದಯ ತುಂಬಿದೆ ಸುಖದಾ ಅರಳು
ಮಮತೆ, ಮಾಯೆ ಸರಳೇ ಸರಳು"

- ಕವನ ೬ - "ನೋಡಿರಿ ಬಡಮಕ್ಕಳ ಬಾಳು"

ಎಂದು ಬಡವರ ಹೃದಯ ಶ್ರೀಮಂತಿಕೆಯನ್ನು ಮೆಚ್ಚಿ

"ಬಡತನವೆಂಬುದು ಕಾಲನ ಜಾಲಾ
ಎಂದೂ ಮುಗಿಯದ ಹನುಮನ ಬಾಲಾ"

ಎಂದಿದ್ದಾರೆ. ಇದು ಇಂದಿಗೂ ಸತ್ಯ.

"ಹೇ ಚಾವುಂಡರಾಜೇ ಕರವಿಯಲೆ" ಎಂಬ ಕವನದಲ್ಲಿ ಬಾಹುಬಲಿ ಮೂರ್ತಿಯ ಶಾಂತಿಯ ಸಂದೇಶ ಕುರಿತು ವಿವರಿಸುತ್ತ "ಇದು ಕನ್ನಡ-ಮರಾಠಿ ನಂಟು, ನೆಂಟು, ಅಂಟು ಅರಳಿದ ಬಗೆ ಎಂದಿದ್ದಾರೆ. ಮಹಾರಾಷ್ಟ್ರದ ಹಿರಿಮೆಯನ್ನು ಎತ್ತಿ ತೋರಿಸುತ್ತ, ವಂದನೆ ಸಲ್ಲಿಸಿದ್ದಾರೆ. ಎಲ್ಲ ಭಾಷೆ, ಸಾಹಿತ್ಯ, ರಾಜಕಾರಣದಲ್ಲಿರುವ ಐಕ್ಯದ ಕೊರತೆ ಮಹಾರಾಷ್ಟ್ರದಲ್ಲಿಯೂ ಇದೆ. ಭಾವ ಬುದ್ಧಿಯ ಕಳಾಸ ಕೂಡಿಸುವ ಕಾರ್ಯ, ವಿಶ್ವದ ಮಾನವರು ಮಾಡಬೇಕಾದ ಕಾರ್ಯ.

"ಭಾವಾ ಅಂಬೋದು ಪ್ಯಾಟಿ ಧಾರಣಿ ಅಲ್ಲಾ
ಭಾವದಾಗss ಉದ್ಭವಿಸೋದು ದೇವಾ
ಅದರ ಪ್ರಕಟ ರೂಪಾ ಅನುಭಾವಾ
ಮಹಾರಾಷ್ಟ್ರದ ತುಂಬಾ ಇದರದss ಪ್ರಭಾವ"

ಎಂದೂ ಬೇಂದ್ರೆ ನುಡಿದಿದ್ದಾರೆ.

೧೯೫೩ರಲ್ಲಿ ಬಾಹುಬಲಿ ಮೂರ್ತಿಗೆ ಮಸ್ತಕಾಭಿಷೇಕವಾಗಿತ್ತು. ಅದೇ ಕಾಲದಲ್ಲಿ ಸ್ಟಾಲಿನ್ ಮರಣವೂ ಸಂಭವಿಸಿತ್ತು. ಬಾಹುಬಲಿ ಶಾಂತಿಯ ಮತ್ತು ಅಹಿಂಸೆಯ ಸಂಕೇತವಾದರೆ, ಸ್ಟಾಲಿನ್ ಬಡತನ ನಿರ್ಮೂಲನೆಗಾಗಿ ಹೋರಾಡಿದ ಮಹಾಶಕ್ತಿ ಎಂದು ಬೇಂದ್ರೆ ಮನ್ನಿಸಿದ್ದಾರೆ. ''ಬಡತನದ ವಿಮೋಚನೆ-ಅಲ್ಲಾ ದಯಾ'' ಎಂದು ಸ್ಪಷ್ಟಪಡಿಸಿದ್ದಾರೆ.

೧೯೪೩ ರಿಂದ ೧೯೫೩ ರ ಹತ್ತು ವರ್ಷಗಳಲ್ಲಿ ಬೇಂದ್ರೆ ಸಾಕಷ್ಟು ಮರಾಠಿ ಕವನಗಳನ್ನು ರಚಿಸಿದರು. ಇದಕ್ಕೆ ಮೂಲಕಾರಣ, ಸೊಲ್ಲಾಪುರದ ವಾಸ ಹಾಗೂ ಮರಾಠಿ ಜನತೆ, ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳೊಂದಿಗೆ ಬೆಳೆದ ಸಂಪರ್ಕ. ಸೊಲ್ಲಾಪುರದಲ್ಲಿ ಆಗ ಮರಾಠಿ ಭಾಷೆಗೆ ಪ್ರಾಧಾನ್ಯವಿತ್ತು. ಅಲ್ಲಿಯ ಜನರಿಗೆ ಹಣದ ವ್ಯವಹಾರ ಮತ್ತು ಇತರ ವ್ಯವಹಾರ ಪ್ರಥಮ ಕರ್ತವ್ಯ. ಸಾಹಿತ್ಯ ಮತ್ತು ಕಾವ್ಯದ ಸಹವಾಸ ಕಡಿಮೆ. ಸಾಹಿತ್ಯದ ಆದಾನ ಪ್ರದಾನದಿಂದ ಮಹತ್ತ್ವದ ಕಾರ್ಯ ಆಗದು. ಜನರ ಭಾವ ಶುದ್ಧಿಯಾಗದೇ ಅವರಿಗೆ ಬುದ್ಧಿ ಹೇಳುವುದರಲ್ಲಿ ಅರ್ಥವಿಲ್ಲ ಎಂಬುದನ್ನು ಮನಗಂಡ ಬೇಂದ್ರೆ, ಸೊಲ್ಲಾಪುರದ ಜೈನ, ವೀರಶೈವ, ಕ್ರಿಶ್ಚನ್, ಪಾರಸಿ, ಮರಾಠಾ, ಶೋಷಿತ ಬಡಜನಾಂಗದೊಂದಿಗೆ ಸ್ನೇಹ ಬೆಳೆಸಿದರು. ಜೈನಮುನಿ, ಸನ್ಯಾಸಿಗಳಿಗೆ ಕನ್ನಡ ಜೈನ ಸಾಹಿತ್ಯದ ಹಿರಿಮೆ ವರ್ಣಿಸುತ್ತ ಅವರ ಧರ್ಮಚತುಷ್ಟಯದ ಮಹತ್ತ್ವ ವಿವರಿಸಿದರು. ತತ್ತ್ವ ಆಚರಣೆಗೆ ಬಂದಾಗ, ಹೃದಯದ ಭಾವ ಶುದ್ಧವಾಗುವುದು ಹೇಗೆ ಎಂಬುದನ್ನು ಸ್ಪಷ್ಟಪಡಿಸಿದರು. ವೀರಶೈವರಿಗೆ, ತಮ್ಮ ಭಾಷೆ ಕನ್ನಡ, ಅದರ ಬಗ್ಗೆ ಹೆಮ್ಮೆ ತಾಳಿ, ವಚನ ಸಾಹಿತ್ಯ ಸಿದ್ರಾಮೇಶ್ವರ ಮತ್ತು ಅಲ್ಲಮಪ್ರಭುಗಳ ವ್ಯಕ್ತಿತ್ವದ ಅಭ್ಯಾಸ ಮಾಡಿರಿ, ಪ್ರಚಾರಪಡಿಸಿರಿ ಎಂದು ಸೂಚಿಸಿದರು. ಶೋಷಿತ ಬಡಜನಾಂಗದಲ್ಲಿ ನೊಂದವರನ್ನು ಹುಡುಕಿ, ಅವರಲ್ಲಿಯ ಕೀಳರಿಮೆಯನ್ನು ಹೋಗಲಾಡಿಸಿದರು. ಈ ಕಾಲದಲ್ಲಿ ಸೃಷ್ಟಿಯಾದ ಕವನಗಳಲ್ಲಿ ಭಾವಕ್ಕೆ ಪ್ರಾಧಾನ್ಯ ಕೊಡಲಾಗಿದೆ. ಭಾವಋಷಿ ಬೇಂದ್ರೆ ಕಾವ್ಯದೃಷ್ಟಿ ಹೀಗಿತ್ತು-

''ಶಬ್ದದಾಗ ಅರ್ಥ ಹುಡುಕಾಡೋ
ಶ್ರಮಾ ಆಗ್ತದ ಭಾವ ತಿಳೀದಿದ್ದರ''

''ಭಾವ ಅರ್ಥಾ ಮಾಡಿಕೊಳ್ಳಿರೋ
ಅಂತ ಅಳ್ತದ ಮೌನವಾಗಿ''

''ಕಣ್ಣು ಕಣ್ಣಿಗೆ ಕೂಡಿದಾಗ ಅರ್ಥಾ, ಒಕ್ಕಟ್ಟು
ಹೃದಯ ಹೃದಯಕ್ಕ ಕೂಡಿದಾಗ, ಭಾವಾ ಎರಡು ಪಟ್ಟು''

''ಭಾವದ ಸುತ್ತ ಅರ್ಥಾ ಸುತ್ತಾಡ್ತದ''
- ಕವನ ೧೨ - ''ಕುಹೂ''

"ಸಾಹಿತ್ಯದ ಭಾವವೇ ತಿಳಿಯದೆ
ಅರ್ಥದ ಲೋಭ ಅಡನಾಡಿ
ದೃಷ್ಟಿ ಬಂಧ, ದೃಷ್ಟಾಂತವೂ ಬಂಧ
ಸಾದೃಶ್ಯವಾಯಿತು ಬೀಡಾಡಿ"

- ಕವನ ೧೫ - "ಏಕೀಕರಣ"

ಆದುದರಿಂದ ಭಾವಬಾಂಧವ್ಯ ಸೃಷ್ಟಿಸುವುದೇ ತನ್ನ ಕವನಗಳ ಕಾರ್ಯ ಎಂದು ಬೇಂದ್ರೆ ನಿರ್ಣಯಿಸಿದರು.

೧) ಕವನದ ಭಾವ ಮತ್ತು ಅರ್ಥ ಸಹೃದಯರಿಗೆ ತೃಪ್ತಿಕೊಡುವಂತಿರಬೇಕು.

೨) ಕಾವ್ಯ ಒಂದು ರಸ ನೃತ್ಯ. ಶ್ರುತಿಯಾಗಿ ದರ್ಶನದೀಪ ಬೆಳಗಿಸುತ್ತದೆ ಅದು.

೩) ಪಠ್ಯಪುಸ್ತಕ ಹಾಗೂ ಪ್ರವಚನಗಳಿಂದ ಭಕ್ತಿ ಕಾವ್ಯ ತಿಳಿಸಿಕೊಡುವುದು ಕಠಿಣ. ಭಕ್ತಿ ಎಂಬುದು ವಿಶಿಷ್ಟ್ಯ ಅನುಭೂತಿ. ಅನುಭವದ ಎತ್ತರ ಅಧ್ಯಾತ್ಮ ಸಾಧನೆಯಿಂದ ಬೆಳೆಸಿಕೊಳ್ಳಬೇಕು. ಆಗ ಅನುಭಾವ ಸಾಹಿತ್ಯ ಸಮೀಪವಾಗುತ್ತದೆ. ವಚನಕಾರರು "ಪರಾತ್ಪರ=ಪರಾವಾಣಿ ಕೊಟ್ಟ ನೀರನ್ನು ರಸವಾಗಿ ಹರಿಸಿದ್ದಾರೆ".

೪) ಕಾವ್ಯದಲ್ಲಿ ಭಾವ, ಧ್ವನಿ, ರೀತಿಗೆ ಪ್ರಾಧಾನ್ಯ ಇವು ಉಪಮೆಗಳನ್ನು ಮೀರಿ ಮುಂದೆ ಸಾಗುತ್ತವೆ.

೫) ಕಾವ್ಯ ಸೃಷ್ಟಿ ವಿಮಾನ ಉಡ್ಡಾಣಕ್ಕೆ ಸಮ. ಅದು ಉತ್+ಯೋಗ ಸಾಧನೆ.

೬) ತುರೀಯ ನೆಲೆಯ ಅವತರಣ ಕಾವ್ಯಸೃಷ್ಟಿಗಾಗಿ, ಕವಿ ತನ್ನ ಅಭೀಪ್ಸೆಯನ್ನು ಬೆಳೆಸಿಕೊಳ್ಳಬೇಕು.

೭) ಶುದ್ಧ ಕಾಮವು ಮನೆಯ ಮಾಡಲು ।
ಕೇಳಬಲ್ಲೆವು ಕೊಳಲ ಸ್ವರಾ

- ಕವನ ೨೫ - "ಕಥೆಯ ಕಥೆ"

೮) ಬಾಳಿರಿ ಬಾಳಿಸಿರಿ
ನಂದದಂತೆ ಬೆಳಗಿರಿ
ಮುಚ್ಚುಮರೆ ಮಾಡದೆ
ಒರತೆಯಂತೆ ಜೀವಿಸಿರಿ

- ಕವನ ೨೮ - "ಸ್ವಾನಂದ ವಾತ್ಸಲ್ಯ"

ಎಂಬ ಉಕ್ತಿಗಳಲ್ಲಿ ಬೇಂದ್ರೆ ಕಾವ್ಯದೃಷ್ಟಿ ಹಾಗೂ ಜೀವನ ಸಿದ್ಧಾಂತದ ರೂಪರೇಖೆ ಕಾಣುತ್ತದೆ.

೧೯೪೭ರಲ್ಲಿ ಸ್ವಾತಂತ್ರ್ಯ ಸಿಕ್ಕಿತು ದೇಶಕ್ಕೆ, ಪ್ರಜೆಗಳ ಜೀವನ ಸಮೃದ್ಧವಾಗಲಿಲ್ಲ ಎಂಬ ನೋವಿನಿಂದ ಬೇಂದ್ರೆ ಅನೇಕ ಕವನ ಸೃಷ್ಟಿಸಿದರು. 'ಮೂರು ಮಂಗಗಳು' (ಕವನ ೩೨) "ಕಣ್ಣು ಇದ್ದೂ ಕುರುಡರ್ಹಾಂಗ, ಕಿವಿ ಇದ್ದೂ ಕಿವುಡರಹಾಂಗ, ಬಾಯಿ ಇದ್ದೂ ಮೂಕರ್ಹಾಂಗ ಬಾಳಬಾರದಣ್ಣ" ಎಂಬ ಸೂಚನೆ ಪ್ರಜೆಗಳಿಗೆ ಬೇಂದ್ರೆ ಕೊಟ್ಟಿದ್ದಾರೆ. ಗುಲಾಮಗಿರಿಗೆ ಪಟ್ಟಾ-ಹಳೆ ಕಥಿ. "ಉಳ್ಳವರು ಬಾಳಬೇಕು, ಇಲ್ಲದವರು ಸಾಯಬೇಕು, ಹಿಂಗ ಬಾಳಬೇಕು, ಇಲ್ಲದವರು ಸಾಯಬೇಕು ಹಿಂಗ ಅದ ನೋಡ್ರಿ ಇಂದಿನ ಜಗಾ" ಎಂದಿದ್ದಾರೆ ಬೇಂದ್ರೆ. ಸಮಾಜದಲ್ಲಿ ಒಡಕು, ವೈರ, ಅಸೂಯೆ, ದ್ವೇಷ ತುಂಬಿ ತುಳುಕುತ್ತಿವೆ. ಇವುಗಳ ಸಂಹಾರವಾಗಬೇಕು.

೧) "ಬೆಳೆದು ನಿಂತಾಗ ಡಿಕ್ಟೇಟರ್ ಭಕ್ತಿ
ಪ್ರಜಾರಾಜ್ಯಕ್ಕ ಮರಣವೆ ಮುಕ್ತಿ"
- ಕವನ ೨೨ - "ಯಾರು ಅಂತಾರ?"

೨) "ಸಾಮಾಜಿಕ ಸಮಸ್ಯೆ ಕಲ್ಲು ಬಂಡೆ
ತಲೆ ಅಪ್ಪಳಿಸಿ ಕತ್ತಲಿ ಕಂಡೆ"
ಏಕೀಕರಣ ಬೇಕು ಒಕ್ಕಟ್ಟು
ಒಡಕು ಹುಟ್ಟಿಸಿ ಮಾಡ್ತಾರ ಬಿಕ್ಕಟ್ಟು"

೩) "ರೊಕ್ಕಾ ಒಗದರ ಹೆಣಾ ಬಾಯಿ ತಗೀತಾವ
ಹಣಾ ಇಲ್ಲದವರ ಹೆಣಾ ದಿನಾನೂ ಬೀಳ್ತಾವ"
- ಕವನ ೩೨ - "ಮೂರು ಮಂಗಗಳು"

ಕವನ ೩೪ ರಿಂದ ೩೯ ನಾಟ್ಯಗೀತಗಳಾಗಿವೆ. ಮಾಸ್ತಿಯವರ "ಅನಾರಕಲಿ" ಎಂಬ ನಾಟಕದ ಮರಾಠಿ ಅನುವಾದ ನಾನು ಮಾಡಿದಾಗ, ಅದಕ್ಕಾಗಿ ಗೀತಗಳನ್ನು ಬೇಂದ್ರೆ ಬರೆದುಕೊಟ್ಟರು. ಅನಾರಕಲಿ ಮೂಕಬಲಿಯಾದ ವ್ಯಥೆ ಇಲ್ಲಿದೆ. ಈ ಗೀತ ರಚಿಸಿದ್ದು ೧೯೫೪ರಲ್ಲಿ.

೧೯೫೮ ರಿಂದ ೧೯೮೧ ರ ವರೆಗೆ ಬೇಂದ್ರೆಯವರು ಕೌಟುಂಬಿಕ ಸ್ವಾಸ್ಥ್ಯ, ಆರ್ಥಿಕ ಸಮಾಧಾನ ಮತ್ತು ಮೊಮ್ಮಕ್ಕಳು, ಮರಿಮಕ್ಕಳ ಆಗಮನದಿಂದ ಆನಂದ ಭಾವದಲ್ಲಿ ಇದ್ದರು. ಪ್ರತಿಮಾ, ಪ್ರಭಾಕರ, ಪುನರ್ವಸು, (ಪಾಂಡುರಂಗನ ಮಕ್ಕಳು); ಸ್ಮಿತಾ, ಮಿಲಿಂದ, ಮಕರಂದ (ಮಂಗಳಾಳ ಮಕ್ಕಳು); ವೈಖರಿ (ವಾಮನನ ಮಗಳು). ಹೀಗೆ ಏಳು ಮಂದಿ ಮೊಮ್ಮಕ್ಕಳು ಹಾಗೂ ಪಂಕಜಾ (ಪ್ರತಿಮಾನ ಮಗಳು) ಮರಿಮಗಳು. ಬೇಂದ್ರೆಯವರು ತಮಗೆ ಹುಟ್ಟಿದ ಒಂಭತ್ತೂ ಮಕ್ಕಳನ್ನು ಕುರಿತು ಕನ್ನಡದಲ್ಲಿ ಭಾವಗೀತ ರಚಿಸಿದ್ದರು. ಮೊಮ್ಮಕ್ಕಳು ಮತ್ತು ಮರಿಮಗಳನ್ನು ಕುರಿತು ಬರೆದ ಹನ್ನೆರಡೂ ಕವನಗಳು ಮರಾಠಿಯಲ್ಲಿವೆ. ಈ ಎಲ್ಲ ಕವನಗಳಲ್ಲಿ ಬೇಂದ್ರೆಯವರ ಕಲ್ಪಕತೆ, ಆನಂದ ಹಾಗೂ ದೂರದರ್ಶನ ಸಾಮರ್ಥ್ಯದ ಅರಿವಾಗುತ್ತದೆ. ಅವರು ಕವನಗಳಲ್ಲಿ ಅಭಿವ್ಯಕ್ತ ಪಡಿಸಿದ ಅಭಿಪ್ರಾಯ ಭವಿಷ್ಯಕಾಲದಲ್ಲಿ ಸತ್ಯದ ಘಟನೆಯಾಗುವುದು ಆಶ್ಚರ್ಯವೇ ಸರಿ. ಹೀಗೆ ಆಗಲು ಅವರ ಜ್ಯೋತಿಷ್ಯಶಾಸ್ತ್ರದ ಅಭ್ಯಾಸವೂ

ಕಾರಣವಾಗಿರುವ ಸಾಧ್ಯತೆ ಇದೆ. ಮಗುವಿನ ಸ್ವಭಾವ ಹೇಗಾದೀತು ಎಂಬುದರ ಸೂಚನೆಗಳಿವೆ. ಕವನ ೪೨ ರಿಂದ ೫೩ ಈ ರೀತಿಯವು. ''ಬಂತಪ್ಪಾ ಪ್ರತಿಮಾ ಕುದುರಿ'' ಎಂಬಲ್ಲಿಯ ಕಲ್ಪನೆಗಳ ಹಾರಾಟಾ ಅತ್ಯದ್ಭುತ. ''ಆರು ಕಣ್ಣು ಕೂಡುವಲ್ಲಿ ಇಂದ್ರವನದಾನಂದವು'' (ಕವನ-೧) ಎಂಬುದು ಬೇಂದ್ರೆಯವರ ಕೌಟುಂಬಿಕ ಭಾವದ ಸ್ಥಾಯಿ ಭಾವ. ಇವೆಲ್ಲಾ ಬೇಂದ್ರೆಯವರ ಅಂತಃಕರಣದ ವಾತ್ಸಲ್ಯಗೀತಗಳಾಗಿವೆ.

೧೯೬೭ರಲ್ಲಿ ಬೇಂದ್ರೆಯವರಿಗೆ ಅವರ ಬಾಳಸಖೀ-ಲಕ್ಷ್ಮೀಬಾಯಿಯವರಿಂದ ಅಗಲಬೇಕಾಗುತ್ತದೆ. ಚಿತೆ ಏರಿದ ಲಕ್ಷ್ಮೀಬಾಯಿಯವರನ್ನು ಕುರಿತು ಬರೆದ ಮೂರೂ ಕವನಗಳಲ್ಲಿ ದಾಂಪತ್ಯ ಜೀವನದ ಅಗಲಿಕೆಯ ವ್ಯಥೆ ಇದೆ ಹಾಗೂ ಸಖ್ಯ ತತ್ತ್ವದ ಮಹತಿ ಇದೆ.

೧೯೫೮ ರಿಂದ ೧೯೬೭ರ ಅವಧಿಯಲ್ಲಿ ಬೇಂದ್ರೆಯವರು ನಾರಾಯಣ, ಕೃಷ್ಣ, ವಿಠ್ಠಲ, ದೈವತಗಳ ಮಹಾತ್ಮ್ಯ ಕುರಿತು ಆಳವಾಗಿ ಚಿಂತಿಸಿದರು. ನಾರಾಣಣನೇ -ನವನಾರಾಯಣ ಹಾಗೂ ನವನಾಥ ಆಗಿ, ನಾಥ ಸಂಪ್ರದಾಯದ ಸೃಷ್ಟಿಯಾಯಿತು. ಶ್ರೀ ಕೃಷ್ಣ-ದಶಾವತಾರಿ., ವಿಠ್ಠಲಮೂರ್ತಿಯ ಶಿರದಲ್ಲಿ ಲಿಂಗ ಇರುವುದರಿಂದ, ಇವನು ಹರಿಹರ ಸಾಮರಸ್ಯದ ಸಂಕೇತ. ಕಲಿಯುಗದಲ್ಲಿ ಪತಿತರ ಉದ್ಧಾರ ಮಾಡಲು ಅವನು ಅವತರಿಸಿದ ಭಗವಂತ. ವಿಠ್ಠಲ, ದತ್ತ ಶಿವ ಸಂದೇಶಗಳನ್ನು ಕರ್ನಾಟಕ ಮತ್ತು ಮಹಾರಾಷ್ಟ್ರದವರು ಅರ್ಥ ಮಾಡಿಕೊಳ್ಳುವುದು ಅವಶ್ಯ ಎಂದೇ ಬೇಂದ್ರೆ ಸೂಚಿಸಿದರು.

೧) ಅನೇಕ ವಿಠ್ಠಲ ಮೂರ್ತಿಗಳು ಕರ್ನಾಟಕದಲ್ಲಿವೆ.

೨) ಪಂಢರಪುರದ ಅದ್ವೈತ ಭಕ್ತಿಯ ಅಧಿಕ ಪ್ರಸಂಗಕ್ಕೆ ಬೇಸತ್ತು, ವಿಠೋಬಾ ವಿಜಯನಗರಕ್ಕೆ ಬಂದ ಎಂಬುದು ಒಂದು ದಂತ ಕಥೆ!

೩) ಸಂತ ಏಕನಾಥನ ಅಜ್ಜ-ಭಾನುದಾಸನು ವಿಜಯ ನಗರದಿಂದ, ವಿಠ್ಠಲಮೂರ್ತಿಯನ್ನು ಮರಳಿ ತಂದು, ಪಂಢರಪುರದಲ್ಲಿ ಮತ್ತೆ ಪ್ರತಿಷ್ಠಾಪಿಸಿದನು ಎಂಬುದು ಇನ್ನೊಂದು ದಂತಕಥೆ.

ಈ ಎಲ್ಲ ಸಂಗತಿಗಳು, ವಿಠ್ಠಲಭಕ್ತಿ ಕರ್ನಾಟಕ ಮತ್ತು ಮಹಾರಾಷ್ಟ್ರದ ಭಕ್ತಿಯ ಮರ್ಮಸ್ಥಳ ಎಂಬುದಕ್ಕೆ ಆಧಾರ.

''ವಿಠ್ಠಲಾ ಕಲಿ ಕಾಲದ ದೇವರು
ಪತಿತರ ಉದ್ಧಾರ ಮಾಡುವ ಮೇರು
ಕೃಷ್ಣಾ ಮತ್ತು ಅರ್ಜುನಾ ಬೇರೆ ಬೇರೆ ಇದ್ದರೂ
ಒಂದSS ಪ್ರಾಣಾ, ಸಂವಾದದ ತೇರು''

ಎಂದು ವರ್ಣಿಸಿದ್ದಾರೆ. ಅಂಬೇಗಾಲಿಡುವ ಕೃಷ್ಣಾ, ಡೊಗ್ಗಾಲಕೃಷ್ಣಾ ವಿಠ್ಠಲಾ ಒಂದೇ ಎಂದೂ ಕಂಡಿದ್ದಾರೆ. ವಿಠ್ಠಲ ಚಿಂತನೆಯ ಆರೇಳು ಕವನ ಈ ಸಂಗ್ರಹದಲ್ಲಿವೆ.

೧೯೬೭ರಲ್ಲಿ ಸುಮಾರು ೨೫ ಕವನಗಳ ಸೃಷ್ಟಿಯಾಗಿದೆ. ಬೇಂದ್ರೆಯವರು, ಅಕ್ಷರ ಹಾಗೂ ಮಾತ್ರಾ ಛಂದಸ್ಸಿನಲ್ಲಿ ಮರಾಠಿ ಕವನ ಬರೆದವರು, ಮರಾಠಿ ಗದ್ಯದ ಲಯಕ್ಕೆ ಹೊಂದುವಂತೆ ಮುಕ್ತ ಛಂದದ ಅನೇಕ ಕವನ ಸೃಷ್ಟಿಸಿದರು. ಅಲ್ಲಲ್ಲಿ ಉದ್ದಗೀಟು ಹಾಕಿ, ಓದುಗರಿಗೆ ಹೊಸತನ ಸೂಚಿಸಿದರು. ಬೇಂದ್ರೆ ನವಕಾವ್ಯದ ಈ ರೀತಿ, ಕನ್ನಡದಲ್ಲೂ ಕಾರ್ಯ ಮಾಡಿದೆ. ಸತ್ಯ ಹಾಗೂ ದೇವ ಭಾವದ ಅನ್ವೇಷಣೆ ಈ ಕವನಗಳ ಹೃದಯ. ಜನರು ವಿವೇಕಿಗಳಾಗಬೇಕು ಎಂಬುದೇ ಅವರ ಅಪೇಕ್ಷೆ.

''ಅಗದಷ್ಟು ಇರ್ತದ ಆಳಾ
ಬೋಧ ಅಂದ್ರ ತಾಳಾ ಮೇಳಾ
ಆಮೋದಾ, ಪ್ರಮೋದಾ
ನಾದದ ನವನೀತಾ

- ಕವನ ೭೬-''ನಾ ಇರುವೆ ಹತ್ತಿ!''

ಕಾವ್ಯ, ಅನುಭಾವ, ಅವಧೂತ ಪ್ರವೃತ್ತಿಯ ನಿಲುವು ಒಂದೇ. ಅವರೆಲ್ಲಾ ''ರಸೋ ವೈ ಸಃ'' ತತ್ತ್ವವನ್ನು ಪ್ರತ್ಯಕ್ಷ ಅನುಭವಿಸಿದವರು. ಇದರಲ್ಲಿಯೂ ಶ್ರೇಷ್ಠ ಮತ್ತು ಕನಿಷ್ಠ ಸ್ಥಿತಿಗತಿಗಳಿವೆ. ತಪ್ಪು ಮಾರ್ಗಕ್ಕೆ ಸಿಕ್ಕು ಅಂತರ್ಪಿಶಾಚಿಯಾಗಿ ನರಳಿದವರೂ ಉಂಟು.

''ಅಕ್ಷರತ್ವಾತ್, ವರೇಣ್ಯಯತ್ವಾತ್, ಧೂತತ್ವಾತ್, ಸಕಲ ಕಿಲ್ಬಿಷೈಃ

ತತ್ತ್ವಮಸ್ಯಾದಿ ಜ್ಞಾನತ್ವಾತ್ ಅವಧೂತ ಇತಿ ಸ್ಮೃತಃ''

ಅವಿನಾಶಿಗಳು, ಯೋಗಿವರೇಣ್ಯರು, ಧೂತಪಾಪರು (ಪಾಪ ರಹಿತರು) ತತ್ತ್ವಮಸ್ಯಾದಿ ಮಹಾವಾಕ್ಯಗಳ ಅಖಂಡ ಜ್ಞಾನ ಸಂಪನ್ನರು ಆಗಿದ್ದವರೇ ಅವಧೂತರು ಎಂದು ವ್ಯಾಖ್ಯೆ. ತಮ್ಮ ಜೀವನವನ್ನು ಪಾವನಗೊಳಿಸಲು, ಕಾವ್ಯ ಉತ್+ಯೋಗ ಸಾಧನೆಯನ್ನು ಮಾಡಿ, ಆತ್ಮ ಸಾಕ್ಷಾತ್ಕಾರ ಪಡೆಯುವುದು ಬೇಂದ್ರೆಯವರ ಗುರಿಯಾಗಿತ್ತು. ಕಾವ್ಯ ಸೃಷ್ಟಿ ಸುಲಭ ಎಂದು ಎಂದೂ ಅವರು ಭಾವಿಸಿರಲಿಲ್ಲ.

೧) ನಾನೇ ನನ್ನ ವಿಮಾನಾ
ನನಗೇ ನಾನೇ ಪ್ರಮಾಣಾ
ಇದಕ್ಕಿಂತ ಬೇರೆ ಅಭಿಮಾನಾ
ಉನ್ಮನದ ರೀತಿ.

೨) ರಸದಾಗ ರಸಾ ಬೆರೀತದ
ಭವಿಷ್ಯಭಾವ ಅರಳಸ್ತದ
ಇದು ಎಂದೂ ತೀರೋದಿಲ್ಲಾ
ಕಣ್ಣಿದ್ದವಗೆ ಕಾಣಸ್ತದ

೩) ವಿಷಾದ ಅಂಬೋದು ನೆರಳು
ಪ್ರಸಾದ ದೇವರ ಬೆರಳು
ಶ್ರವಣಕ್ಕ ಬಿದ್ದ ಓಂಕಾರಾ
ಕೇಕಿಯ ಮಧುರ ಸ್ವರಾ

- ಕವನ ೭೬ - ''ನಾ ಇರುವೆ ಹತ್ತಿ!''

೪) ಪತನಾ ಅಲ್ಲಾ ಪಾವನಾ
ಅವತರಣಾ
ಮಣ್ಣು ನೀರಿನ ಸಂಬಂಧ
ಅತ್ಯಂತ ಅಗಾಧಾ
''ಆಪೋಜ್ಯೋತಿ ರಸೋಮೃತಂ''

- ಕವನ ೭೭ - ''ಪೀಪಿ''

ಕವಿಗಳ ಬಗ್ಗೆ ದೊಡ್ಡ ಆಶೆ ಇಟ್ಟುಕೊಂಡವರು ಬೇಂದ್ರೆ. ಯಾವುದೇ ಮಾರ್ಗದ, ಪಂಥದ, ಮನೋಧರ್ಮದ ಕವಿ ಇರಲಿ, ಅವನ ಬಗ್ಗೆ ತುಚ್ಛ ಭಾವನೆ ತಾಳಲಿಲ್ಲ. ಅಂತೆಯೇ-

''ಕವಿಗಳು ಆಗಿ ಹೋಗ್ಯಾರ
ಇನ್ನೂ । ಆಗಾವರೂ ಇದ್ದಾರ
ಅವರವರ ಕವಿತೆ। ಹೊಚ್ಚ ಹೊಸಾವು
ಇರ್ತಾವ। ಇರಬೇಕು। ನಿತ್ಯನೂತನಾ''

''ಬೀಜಗಳನ್ನು ಬಿತ್ತತಾನ ಕವಿ
ಸಾಕ್ಷಾತ್ಕಾರದ ಹಾದಿ ತೋರಸ್ತಾನ
ಒಂದಾಗಿ ಬೆರೆತು''

- ಕವನ ೭೮ - ''ಕವಿ''

೧೯೭೮ರಲ್ಲಿ ಬೇಂದ್ರೆಯವರು ದಶಪದಿ ಎಂಬ ಹೊಸ ಛಂದಸ್ಸನ್ನು ಪ್ರಯೋಗಕ್ಕೆ ತಂದರು. ಈ ಛಂದಸ್ಸಿನ ಎಲ್ಲ ಕವನಗಳು ಆಗ ಪ್ರಕಟಗೊಂಡ ಅವರ ''ಚತುರೋಕ್ತಿ ಮತ್ತು ಇತರ ಕವನಗಳು'' ಎಂಬ ಸಂಗ್ರಹದಲ್ಲಿ ಇವೆ. ಅದರಲ್ಲಿ ೧೧ ಕವನಗಳನ್ನಾಯ್ದು ಬೇಂದ್ರೆಯವರು ಮರಾಠಿಯಲ್ಲಿ ಭಾವಾನುವಾದ ಮಾಡಿದ್ದರು. ಅವುಗಳನ್ನೇ ಮತ್ತೊಮ್ಮೆ ಮರಾಠಿಯಿಂದ ಕನ್ನಡಕ್ಕ ಭಾವಾನುವಾದ ಮಾಡಿದ್ದೇನೆ. ಅಭಿವ್ಯಕ್ತಿಯ ಅನುಭವಕ್ಕಾಗಿ-ಕವನ ೮೩ ರಿಂದ ೯೩.

೧೯೭೯ ರಿಂದ ೧೯೮೧ ರ ವರೆಗಿನ ಏಳು ಕವನಗಳಲ್ಲಿ ಬೇಂದ್ರೆ ಕಾವ್ಯದ ಹೊಸತನ ಕಾಣಬಹುದು. ಕವಿಗೆ ಬೇಕಾಗುವ ಹದಿನಾರು ಪ್ರಜ್ಞೆಗಳ ಉಲ್ಲೇಖವಿದೆ (ಕವನ-೯೪). ಸ್ವಾತಿಮುತ್ತಿನಂತೆ ತನ್ನ ಕಾವ್ಯ ರೂಪತಾಳಿದ್ದರ ಬಗ್ಗೆ ಕೃತಜ್ಞತೆ ಇದೆ (ಕವನ-೯೫). ಕಾವ್ಯ ರಚನೆ ಒಂದು ಗುರುಪ್ರಸಾದ ಎಂಬ ಭಾವ ಇದೆ (ಕವನ-೯೬). ಬೇಂದ್ರೆಯವರಿಗೆ ಸಂಖ್ಯೆ ವಿಶ್ವಭಾಷೆ.

ಅದಕ್ಕೂ ತಮಗೂ ನಿಕಟ ಸಂಬಂಧವಿರುವ ೩೧-೧-೧೮೯೬ (ಬೇಂದ್ರೆ ಜನ್ಮದಿನ), ೨೯, ೧೧, ೨; ೨-೨-೧೯೭೯ (ಮೊಮ್ಮಗಳ ಜನ್ಮ ದಿನ) ಹಾಗೂ ೭೪೧೦ ಇದರ ವಿವರ ಕೊಟ್ಟಿದ್ದಾರೆ. ಇದು ಸ್ಪಷ್ಟವಾದ ಗದ್ಯ. ಆದರೆ ಇದರಲ್ಲಿರುವುದು ಕಾವ್ಯ ಎಂಬ ಹೃದಯಸ್ಥ ಭಾವ (ಕವನ-೯೭). ಕವನ ೯೮ರಲ್ಲಿ ೧ ರಿಂದ ೩, ೧೦, ೧೭, ೨೭, ೨೮ ಹಾಗೂ ೫೫ ರ ಚಿಂತನವಿದೆ. ೯೯ನೆಯ ಕವನದಲ್ಲಿ ೧೦, ೧೦೦೦, ೨೮, ೧೦೨೮; ೫೯, ೪, ೨೫, ೩೭, ೬೬ ರ, ಚಿಂತನವಿದೆ.

ಕೊನೆಯ ಕವನ ''ನಾವು ಅಲ್ಲಾ ಪಶು!'' ನಾವು ಪಶು, ಶಿವ ಪಶುಪತಿ ಎಂದು ಭಕ್ತಿಭಂಡಾರಿ ಬಸವಣ್ಣನವರು ಸಾರಿದ್ದರು. ಬೇಂದ್ರೆಯವರ ಅನುಭಾವ - ''ನಾವು ಅಲ್ಲಾ ಪಶು। ದೇವರ ಶಿಶು ನಾವು! ಔದುಂಬರದತ್ತನ ಹಾಡು। ಚೈತನ್ಯಪೂರ್ಣ ಅಂತರ್ವಾಣಿ!'' ಎಂದು ಸಾರಿದೆ. ಇದು ಒಂದು ರೀತಿಯ ವಿಶಿಷ್ಟ ಬೆಳವಣಿಗೆ. ಬೇಂದ್ರೆ ಅಂಬಿಕೆಯ ತನಯ! ಅವರಿಗೆ ದತ್ತ ದೈವತದ ಅನುಭಾವ ಬಾಲ್ಯದಿಂದಲೂ ಬೆಳೆಸುತ್ತ ಹೋದದ್ದು ವಿಶೇಷ. ಆದುದರಿಂದ ಅವರಿಗೆ ಅವರ ಜೀವನ ಮಹಾಕಾವ್ಯ 'ಔದುಂಬರಗಾಥೆ' ಆದದ್ದರಲ್ಲಿ ಸಂತೃಪ್ತಿ ಇತ್ತು. ಬಾಳಿನಲ್ಲಿ ಸಂತೃಪ್ತಿಯೇ ಮುಖ್ಯ. ಬೇಂದ್ರೆಕಾವ್ಯ ಅಭ್ಯಾಸದಿಂದ ಅನೇಕ ಸಹೃದಯಿ ರಸಿಕರಿಗೆ ಸಂತೃಪ್ತಿ ಆಗಿದೆ. ಅದು ನನ್ನ ಭಾಗ್ಯ. ಈ ಭಾವಾನುವಾದ ಕಾರ್ಯ ೭-೧೧-೨೦೦೬ ರಿಂದ ೭-೧೨-೨೦೦೬ ರ ಒಂದೇ ತಿಂಗಳ ಅವಧಿಯಲ್ಲಿ, ನನ್ನ ಅಳಿಯ ಮಹೇಶ ದೇವಧರ ಹಾಗೂ ಮಗಳು ವೈಖರಿಯ ಸುರತದ ನಿವಾಸದಲ್ಲಿ ಮಹಾನಗರದ ಪರಿಸರದಲ್ಲಿ ಆದದ್ದು ಯೋಗಾಯೋಗ! ಅವಳ ಮನೆಯ ಸಂಖ್ಯೆ-೨೮! ಈ ಕಾರ್ಯವೆಂದರೆ ಪಿತೃಋಣ ಸ್ಮರಣೆಯ ಕಾರ್ಯ. ಇದು ಕನ್ನಡ ವಾಚಕರಿಗೆ ಆನಂದ ಕೊಟ್ಟೀತು ಎಂಬ ಭಾವ ನನ್ನದು.

''ಬೇಂದ್ರೆ ಕುಟೀರ,'' ಹುಬ್ಬಳ್ಳಿ

೨-೨-೨೦೦೭

ವರಕವಿ ಡಾ. ದ. ರಾ. ಬೇಂದ್ರೆ ೧೧೧ನೇ ವಾರ್ಷಿಕ ಜನ್ಮ ದಿನ

- ''ಸಂ. ವಾ. ದ.''

ಡಾ॥ ವಾಮನ ಬೇಂದ್ರೆ,

ಸಹ ನಿರ್ದೇಶಕರು,

ಬೇಂದ್ರೆ ಸಂಶೋಧನ ಸಂಸ್ಥೆ

: ಕೃತಜ್ಞತೆ :

ಮರಾಠಿ ಕವನಗಳನ್ನು ಕನ್ನಡಕ್ಕೆ ಅನುವಾದಿಸಿ ಅವುಗಳನ್ನು ಕ್ರಮಬದ್ಧವಾಗಿ ಹೊಂದಿಸಿ ಪ್ರಕಟಣೆಗೆ ಸಿದ್ಧ ಮಾಡಿದ ಸಂಸ್ಥೆಯ ಸಹ ನಿರ್ದೇಶಕರಾದ ಡಾ॥ ವಾಮನ ಬೇಂದ್ರೆಯವರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು-ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಡಿಟಿಪಿಯನ್ನು ದಕ್ಷತೆಯಿಂದ ನೆರವೇರಿಸಿದ ಶ್ರೀ ಈರಣ್ಣ ನೂಲ್ವಿ ಇವರಿಗೆ, ಮುಖಪುಟವನ್ನು ಅತ್ಯಂತ ಅರ್ಥಗರ್ಭಿತವಾಗಿ ರಚಿಸಿದ ಶ್ರೀ ರವೀಂದ್ರ ಶಿರೋಳ್ಕರ್ ಹಾಗೂ ಇದನ್ನು ಸುಂದರವಾಗಿ ಮುದ್ರಿಸಿದ ಶ್ರೀ ಶಾಂತಕುಮಾರ್ ಇವರನ್ನು ಅಭಿನಂದಿಸುತ್ತೇನೆ.

- ಪ್ರಕಾಶಕರು

ಮುನ್ನುಡಿ

ಒಂದು ಭಾಷೆಯಲ್ಲಿ (ಕನ್ನಡ) ಮೇರು ಶಿಖರವನ್ನು ಮುಟ್ಟಿದ ಸಾಹಿತ್ಯವನ್ನು ರಚಿಸಿದ ಬೇಂದ್ರೆಯಂಥ ಮಹಾಕವಿ, ಇನ್ನೊಂದು (ಮರಾಠಿ) ಭಾಷೆಯಲ್ಲಿಯೂ ಗಣನೀಯ ಗಾತ್ರದಲ್ಲಿ ಕಾವ್ಯ ರಚನೆಯನ್ನು ಮಾಡಿರುವಾಗ, ಎರಡೂ ಭಾಷೆಯಲ್ಲಿ ರಚಿಸಿರುವ ಸಾಹಿತ್ಯವನ್ನು ಉಲ್ಲೇಖಿಸಿ ಅರ್ಥೈಸುವ ಮೂಲಕ, ಆ ಸಾಹಿತ್ಯದ ಸ್ಥಾನವನ್ನು ಅವರು ಪ್ರಧಾನವಾಗಿ ಬರೆದಿರುವ ಭಾಷೆಯಲ್ಲಿ ಯಾವ ಎತ್ತರವನ್ನು ಪಡೆಯಬಲ್ಲದು ಎಂದು ಮೌಲ್ಯಮಾಪನ ಮಾಡುವ ಅವಶ್ಯಕತೆಯಿದೆ. ಆದರೆ ಅನೇಕ ಬೇಂದ್ರೆ ಪಂಡಿತರಿಗೆ, ಬೇಂದ್ರೆಯವರು ಮರಾಠಿ ಭಾಷೆಯಲ್ಲಿ (ಬೇಂದ್ರೆಯವರ ಮನೆಯ ಭಾಷೆ ಮರಾಠಿಯಾಗಿತ್ತು) ರಚಿಸಿರುವ ಸಾಹಿತ್ಯದ ಪರಿಚಯವಿರಲಿಕ್ಕಿಲ್ಲ ಎಂದೆನಿಸುತ್ತದೆ. ಈ ಕಾರಣದಿಂದ ಪ್ರಚಲಿತವಾಗಿ ಲಭ್ಯವಿರುವ ಬೇಂದ್ರೆ ಕಾವ್ಯದ ವಿಮರ್ಶೆಗಳು ಅವರ ಮರಾಠಿ ಕಾವ್ಯದ ಅಭ್ಯಾಸದ ಕೊರತೆಯನ್ನು ಹೊಂದಿವೆ ಎಂಬ ಅಂಶ ಗಮನಾರ್ಹ. ಈ ಅಭಿಮತವನ್ನು ವ್ಯಕ್ತಪಡಿಸುವಾಗ ನನ್ನ ಪ್ರತಿಪಾದನೆಯೇನೆಂದರೆ, ಬೇಂದ್ರೆಯವರ ಮರಾಠಿ ಕಾವ್ಯವು ಅವರ ಕನ್ನಡ ಕಾವ್ಯದ ವಿರಾಟ್ ರಚನೆಯ ಅರ್ಥೈಕೆಗೆ ಹೊಸ ಬೆಳಕನ್ನು ಚೆಲ್ಲುತ್ತದೆ ಎಂಬುದು. ಅಂತೆಯೇ ಬೇಂದ್ರೆಯವರ ಮರಾಠಿ ಕಾವ್ಯಕ್ಕೆ ಕನ್ನಡ ಕಾವ್ಯದ ಪ್ರೇರಣೆ ಇದ್ದೇ ಇರುತ್ತದೆ. ಈ ಅಂಶಗಳ ಅಧ್ಯಯನಕ್ಕೆ ಬೇಂದ್ರೆಯವರ ಮರಾಠಿ ಕಾವ್ಯದ ಉತ್ತಮ ಕನ್ನಡ ಭಾಷಾಂತರದ ಅವಶ್ಯಕತೆ ಇರುತ್ತದೆ. ಈ ಕಾರ್ಯವನ್ನು ಯಶಸ್ವಿಯಾಗಿ ಮಾಡಲು ಮರಾಠಿ ಹಾಗೂ ಕನ್ನಡ ಭಾಷೆಗಳೆರಡರಲ್ಲೂ ಉತ್ತಮ ಪ್ರಭುತ್ವವನ್ನು ಪಡೆದಿರುವುದರೊಡನೆ, ಕನ್ನಡದಲ್ಲಿ ಕಾವ್ಯ ರಚನಾ ಸಾಮರ್ಥ್ಯವನ್ನೂ ಹಾಗೂ ಬೇಂದ್ರೆಯವರ ಜೀವನ-ಸಾಹಿತ್ಯಗಳ ನಿಕಟ ಪರಿಚಯವನ್ನೂ ಉಳ್ಳವರ ಅವಶ್ಯಕತೆಯಿತ್ತು. ಈ ಕಾರ್ಯವನ್ನು ಕೈಗೊಳ್ಳಲು ಈ ಎಲ್ಲ ಅರ್ಹತೆಗಳನ್ನು ಪಡೆದವರೆಂದರೆ, ದ. ರಾ. ಬೇಂದ್ರೆಯವರ ಪುತ್ರರೂ, ಕವಿಗಳೂ ಆದ ಡಾ।। ವಾಮನ ಬೇಂದ್ರೆಯವರಿಗಿಂತ ಬೇರಾರು ಯೋಗ್ಯರು? ಡಾ।। ವಾಮನ ಬೇಂದ್ರೆಯವರು ತಮ್ಮ ಧರ್ಮಪತ್ನಿ ಹಾಗೂ ಮರಾಠಿ-ಸಂಸ್ಕೃತಗಳ ಪರಿಣತಿಯನ್ನು ಹೊಂದಿದ್ದ ವಿಶಾಖಾ ಬೇಂದ್ರೆಯವರಿಂದ ಪ್ರೇರಣೆ ಹಾಗೂ ಸ್ಫೂರ್ತಿಯನ್ನು ಪಡೆದು, ತಮ್ಮ ತಂದೆಯವರ ಸಮಗ್ರ ಮರಾಠಿ ಕಾವ್ಯವನ್ನು ಕನ್ನಡಕ್ಕೆ ಭಾವಾನುವಾದ ಮಾಡಿದ್ದಾರೆ. ಈ ಕಾರ್ಯವು ಬೇಂದ್ರೆ ವಿಮರ್ಶಾ ಸಾಹಿತ್ಯದ ಇತಿಹಾಸದಲ್ಲಷ್ಟೇ ಅಲ್ಲ, ಆಧುನಿಕ ಕನ್ನಡ ಕಾವ್ಯದ ಇತಿಹಾಸದಲ್ಲೂ

ಒಂದು ಮಹತ್ವದ ಮೈಲುಗಲ್ಲು ಎಂದು ಹೇಳಲೇ ಬೇಕು. ಈ ಕೃತಿಯು ಬೇಂದ್ರೆಯವರು ಮರಾಠಿಯಲ್ಲಿ ರಚಿಸಿರುವ ಒಂದು ನೂರು ಕವನಗಳ ಭಾವಾನುವಾದವನ್ನು ಒಳಗೊಂಡು, "ಹೃದಯ ಗೀತ" ಎಂಬ ಶೀರ್ಷಿಕೆಯಲ್ಲಿ ಪ್ರಕಟಗೊಂಡಿದೆ.

ಈ ಎಲ್ಲ ಅಂಶಗಳನ್ನು ಮೀರಿ ಗಮನಿಸಬೇಕಾದ ಇನ್ನೂ ಕೆಲವು ಸಂಗತಿಗಳಿವೆ. ಅವೆಂದರೆ, ಇಲ್ಲಿಯ ಕವನಗಳು ಬೇಂದ್ರೆಯವರ ಮೂಲ ಕನ್ನಡ ಕವನಗಳನ್ನು ಅರ್ಥ ಮಾಡಿಕೊಂಡು, ಅವುಗಳ ರಸಾಸ್ವಾದನೆಗೆ ಅನುವು ಮಾಡಿಕೊಡುವುದರೊಡನೆ, ಈ ಕವನಗಳು ಭಾವಾನುವಾದಗಳಷ್ಟೇ ಆಗಿರದೆ, ಸ್ವತಂತ್ರ ಕವನಗಳಾಗಿಯೂ ತಮ್ಮ ಸ್ಥಾನವನ್ನು ಪಡೆಯುವ ಅರ್ಹತೆಯುಳ್ಳವುಗಳಾಗಿವೆ ಎಂದು ಹೇಳಲೇಬೇಕು. ಒಂದು ಅರ್ಥದಲ್ಲಿ ಯಾವುದೇ ಒಳ್ಳೆಯ ಭಾಷಾಂತರವು ಸ್ವತಂತ್ರ ರಚನೆಯಂತೆಯೇ ರೂಪುಗೊಳ್ಳುವ ಭಾವಾನುವಾದವಾದಾಗಲೇ ಅದನ್ನು ಯಶಸ್ವಿ ಅನುವಾದವೆಂದು ಹೇಳಬಹುದು. ಈ ದೃಷ್ಟಿಯಿಂದ ವಾಮನ ಬೇಂದ್ರೆ, ರಚನೆಗಳು ವರಕವಿ ದ. ರಾ. ಬೇಂದ್ರೆಯವರೇ ರಚಿಸಿದಂತೆ ಮೂಡಿ ಬಂದಿವೆ. ಒಟ್ಟಾರೆ, ಈ ಕವನಗಳು ದ. ರಾ. ಬೇಂದ್ರೆಯವರ ಕನ್ನಡ ಕಾವ್ಯ ನಿಧಿಯನ್ನು ಅರ್ಥ ಮಾಡಿಕೊಳ್ಳಲು ಹಾಗೂ ಆಸ್ವಾದಿಸಲು ಸಹಾಯಕವಾಗಿವೆ. ಏಕೆಂದರೆ, ಈ ಕವನಗಳು ಬೇಂದ್ರೆ ಕನ್ನಡ ಕವನಗಳ ತಾತ್ವಿಕತೆ ಹಾಗೂ ಶೈಲಿಗೆ ಸಮಾನಾಂತರವಾಗಿವೆ. ಈ ಸಂಗ್ರಹದಲ್ಲಿಯ ಕವನಗಳಲ್ಲಿ ಕೆಲವು ವಿಭಿನ್ನತೆಗಳನ್ನು ನಾವು ಗುರುತಿಸಬಹುದು. ಅವೆಂದರೆ, ಕೆಲವು ಕವನಗಳು ವೈದಿಕ ಮಂತ್ರಗಳ ಸತ್ತ್ವ ಹಾಗೂ ಗತ್ತನ್ನು ಹೊಂದಿದವುಗಳಾಗಿದ್ದರೆ, ಮತ್ತೆ ಕೆಲವು ಪ್ರಜ್ಞಾಪೂರ್ವಕವಾಗಿ ಅವರ ಕಾವ್ಯೋದ್ಯೋಗ ತತ್ತ್ವವನ್ನು ಹಾಗೂ ಸಂಖ್ಯಾಶಾಸ್ತ್ರದ ಅಂತರದರ್ಶನವನ್ನು ಪ್ರತಿಬಿಂಬಿಸುವಂತಿವೆ. ಇನ್ನು ಕೆಲವು ಕವನಗಳು ನೇರವಾಗಿ ಹಾಗೂ ಆತ್ಮೀಯವಾಗಿ ಬೇಂದ್ರೆ ಕುಟುಂಬದ ಸದಸ್ಯರನ್ನು ಕುರಿತಾದುವುಗಳಾಗಿವೆ. ಅದರಲ್ಲೂ ಅವರ ಮೊಮ್ಮಕ್ಕಳು ಹಾಗೂ ಮರಿಮಗಳನ್ನು ಕುರಿತೇ ರಚಿತವಾಗಿವೆ. ಅದು ಏನೇ ಇರಲಿ ಒಟ್ಟಾರೆ ನೋಡಿದಾಗ ಬೇಂದ್ರೆ ಕನ್ನಡ ಮಹಾಕಾವ್ಯದಲ್ಲಿ ಹಾಸುಹೊಕ್ಕಾಗಿರುವ ಗುಣ ಇಲ್ಲೆಲ್ಲಾ ಎದ್ದು ಕಾಣುತ್ತದೆ. ಬೇಂದ್ರೆಯವರು ಪ್ರತಿಪಾದಿಸುತ್ತಾ ಬಂದ ಅಧ್ಯಾತ್ಮಿಕ ಮಾನವತಾವಾದ, ಅಂದರೆ ದೇವ ಹಾಗೂ ಮಾನವ ಇವುಗಳ ಸಮನ್ವಯತೆ, ಅದೇ ಒಲವಿನ ಸಿದ್ಧಾಂತ ಹಾಗೂ ಅದೇ ಪದಗಳ ಮೋಡಿ, ಬೇಂದ್ರೆಯವರ ಮರಾಠಿ ಕಾವ್ಯದಲ್ಲೂ ಅಂತರ್ಗತವಾಗಿ ಮೂಡಿ ಬಂದಿದೆ ಎಂದು ಹೇಳಬಹುದಾಗಿದೆ.

ಈವರೆಗೆ ಅಲಭ್ಯವಾಗಿದ್ದ ವರಕವಿ ದ. ರಾ. ಬೇಂದ್ರೆಯವರ ಮರಾಠಿ ಕವನಗಳ ಕನ್ನಡ ಭಾವಾನುವಾದವನ್ನು ಮಾಡಿ, ಅದನ್ನು ಪ್ರಕಟಿಸುವ ಮಹತ್ಕಾರ್ಯವನ್ನು ಮಾಡಿದ ಡಾ॥ ವಾಮನ ಬೇಂದ್ರೆಯವರಿಗೆ ಎಲ್ಲ ಕನ್ನಡಿಗರೂ ಕೃತಜ್ಞರಾಗಿರಬೇಕು. ಅಂತೆಯೇ ಈ ಕೃತಿಯ ಪ್ರಕಾಶನದ ಕಾರ್ಯದ ಹೊಣೆಗಾರಿಕೆಯನ್ನು ವಹಿಸಿಕೊಂಡು ಇದನ್ನು ಅತ್ಯಂತ ಆಕರ್ಷಕವಾಗಿ ಉತ್ಪಾದಿಸಿರುವ ಬೇಂದ್ರೆ ಸಂಶೋಧನ ಸಂಸ್ಥೆಯನ್ನೂ ನಾವು ಅಭಿನಂದಿಸಲೇಬೇಕು.

೫-೧-೨೦೦೭ — ಕೆ. ರಾಘವೇಂದ್ರರಾವ್

ಪ್ರಕಾಶಕರ ಪ್ರಸ್ತಾವನೆ

ವರಕವಿ ಡಾ|| ದ. ರಾ. ಬೇಂದ್ರೆಯವರು ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕಾಣಿಕೆಗಳನ್ನು ನೀಡಿರುವಂತೆಯೇ ಮರಾಠಿ ಸಾಹಿತ್ಯಕ್ಕೂ ಅನುಪಮ ಕೊಡುಗೆಯನ್ನು ಕೊಟ್ಟಿರುವುದು ಗಮನಾರ್ಹ ವಿಷಯ. ಆದರೆ ಬೇಂದ್ರೆಯವರು ಮರಾಠಿ ಸಾಹಿತ್ಯಕ್ಕೆ ನೀಡಿದ ಕೊಡುಗೆಯನ್ನು ಕನ್ನಡ ಸಾಹಿತಿಗಳು ಹಾಗೂ ವಿಮರ್ಶಕರು ಅಧ್ಯಯನ ಮಾಡಲು, ಈ ಸಾಹಿತ್ಯದ ಕನ್ನಡ ಅನುವಾದದ ಕೊರತೆ ಇತ್ತೆಂದೇ ಹೇಳಬೇಕು. ಈ ಕೊರತೆಯನ್ನು ವರಕವಿ ಬೇಂದ್ರೆಯವರ ಕವಿ-ಪುತ್ರ ಡಾ|| ವಾಮನ ಬೆಂದ್ರೆಯವರು ನೀಗಿಸಿರುವುದಕ್ಕೆ ಅವರನ್ನು ಕನ್ನಡ ರಸಿಕ ವೃಂದ ಅಭಿನಂದಿಸಬೇಕು. ''ಹೃದಯ ಗೀತ'' ಸಂಕಲನವು ಅಂಬಿಕಾತನಯದತ್ತರ ಮರಾಠಿ ಸಮಗ್ರ ಕಾವ್ಯದ ಕನ್ನಡ ಭಾವಾನುವಾದ ಕೃತಿಯಾಗಿದ್ದು, ಇದನ್ನು ''ಪಿತೃಋಣ'' ಎಂದು ತಾವು ಪರಿಗಣಿಸಿರುವುದಾಗಿ ವಾಮನ ಬೇಂದ್ರೆಯವರು ಹೇಳಿರುವುದು ಔಚಿತ್ಯಪೂರ್ಣವಾಗಿದೆ. ಈ ಮರಾಠಿ ಕವನಗಳ ಕನ್ನಡ ಅನುವಾದವು, ದ. ರಾ. ಬೇಂದ್ರೆಯವರೇ ಕನ್ನಡದಲ್ಲಿ ರಚಿಸಿದಷ್ಟು ಪರಿಣಾಮಕಾರಿಯಾಗಿ ನಿರ್ವಹಣೆಯಾಗಿದ್ದು ಈ ಮಹತ್ಕಾರ್ಯವನ್ನು ಮಾಡಿದ ವಾಮನ ಬೇಂದ್ರೆವರನ್ನು ವಿಶೇಷವಾಗಿ ಅಭಿನಂದಿಸಬೇಕು. ''ಹೃದಯ ಗೀತ'' ಅನುವಾದ ಸಾಹಿತ್ಯಕ್ಕೆ ಒಂದು ಅಪೂರ್ವ ಕಾಣಿಕೆಯಾಗಿದೆ.

''ಹೃದಯ ಗೀತ'' ಸಂಕಲನದಲ್ಲಿಯ ಕವನಗಳನ್ನು ಕುರಿತು ಕೆಲ ಅನಿಸಿಕೆಗಳನ್ನು ವ್ಯಕ್ತಪಡಿಸುವ ಮುನ್ನ, ದ. ರಾ. ಬೇಂದ್ರೆಯವರ ಮರಾಠಿ ಭಾಷೆ ಹಾಗೂ ಸಾಹಿತ್ಯ ಪ್ರೌಢಿಮೆಯ ಬಗ್ಗೆ ಕೆಲ ಮಾತುಗಳನ್ನು ಹೇಳುವ ಅವಶ್ಯಕತೆಯಿದೆ. ಬೇಂದ್ರೆಯವರು ಮರಾಠಿ ಭಾಷೆ-ಸಾಹಿತ್ಯಗಳಲ್ಲಿ ಹೊಂದಿದ್ದ ಅಗಾಧ ಪಾಂಡಿತ್ಯದ ಕಲ್ಪನೆ ಪಡೆಯಲು ಇದು ಸಹಕಾರಿಯಾಗುತ್ತದೆ.

ಗೋವಾದಲ್ಲಿ ನೆಲೆಸಿದ್ದ ಮರಾಠಿ ಸಾಹಿತ್ಯ ದಿಗ್ಗಜಗಳಲ್ಲಿ ಒಬ್ಬರಾದ ಕವಿ ಬಿ. ಬಿ. ಬೋರಕರ ಕಾಳಿದಾಸನ 'ಮೇಘದೂತ' ಕೃತಿಯನ್ನು ಮರಾಠಿಗೆ ಅನುವಾದ ಮಾಡಿದ ಕೀರ್ತಿಯನ್ನು ಪಡೆದವರು. ಇವರು ಬರೆದ 'ಪರತ ಆಲೇಲೆ ಪತ್ರ' (ಮರಳಿ ಬಂದ ಪತ್ರ) ಒಂದು ಅವಿಸ್ಮರಣೀಯ ಲೇಖನ. ಇದರ ಹಿನ್ನೆಲೆ ಹಾಗೂ ಮಹತ್ವ ಹೀಗಿದೆ : ಕವಿ ಬೋರಕರ ಇವರು ಬೇಂದ್ರೆಯವರಲ್ಲಿ ಒಂದು ವಿನಂತಿಯನ್ನು ಮಾಡಿಕೊಂಡಿದ್ದರು.

ಅದೆಂದರೆ ಮರಾಠಿ ಭಾಷೆಯ ಮೇರು ಕೃತಿ ಜ್ಞಾನೇಶ್ವರರ 'ಅಮೃತಾನುಭವ'ವನ್ನು ತಮಗೆ ತಿಳಿಸಿ ಹೇಳಬೇಕೆಂದು ಮಾಡಿಕೊಂಡ ಮನವಿ. ಅದಕ್ಕೆ ಬೇಂದ್ರೆ ಉತ್ತರಿಸಿದ್ದರು, 'ನೀವು ಮರಾಠಿಯ ಮಹಾನ್ ಪಂಡಿತರು, ಪ್ರಖ್ಯಾತ ಕವಿಗಳು, ನೀವು ನನ್ನಲ್ಲಿ ಈ ವಿನಂತಿಯನ್ನು ಮಾಡುವುದೇ?' ಎಂದು. ಅದಕ್ಕೆ ಬೋರಕರ ಕೊಟ್ಟಿದ್ದ ಉತ್ತರ- 'ನಾನು ಜ್ಞಾನೇಶ್ವರರ 'ಅಮೃತಾನುಭವ'ವನ್ನು ಓದಿದ್ದೇನೆ. ಆದರೆ ಅದು ಪೂರ್ಣ ತಿಳಿದಿಲ್ಲ. ಅದರ ಅಮೃತದ ಅನುಭವ ನನಗೆ ಇನ್ನೂ ದೊರೆತಿಲ್ಲ, ಅದನ್ನು ಪಡೆದವರು ನೀವು. ಅಂತೆಯೇ ನಿಮ್ಮಿಂದ ಆ ಅಮೃತವನ್ನು ಅಸ್ವಾದಿಸುವ ಬಯಕೆ ನನ್ನದಾಗಿದೆ' ಎಂದು. ಇದಕ್ಕೆ ಬೇಂದ್ರೆಯವರು ಒಪ್ಪಿದ್ದರು. ಇಬ್ಬರೂ ಎಲ್ಲಿ, ಯಾವಾಗ ಸೇರಬೇಕು ಎಂದು ನಿರ್ಣಯಿಸಬೇಕಾಗಿತ್ತು. ಅಷ್ಟರಲ್ಲೇ ಬೇಂದ್ರೆಯವರ ಆರೋಗ್ಯ ತೀವ್ರವಾಗಿ ಹದಗೆಟ್ಟ ಕಾರಣ ಅವರು ಮುಂಬೈಗೆ ಚಿಕಿತ್ಸೆಗಾಗಿ ಹೋಗಬೇಕಾಯಿತು. ಅದೇ ವೇಳೆಗೆ ಬೋರಕರ ಬೇಂದ್ರೆ ಹಾಗೂ ತಾವು ಸಮಾಗಮ ಆಗಬೇಕಾದ ವೇಳೆ ಹಾಗೂ ಸ್ಥಳವನ್ನು ಕುರಿತು ಬೇಂದ್ರೆಯವರ ಮುಂಬೈ ನಿವಾಸಕ್ಕೆ ಪತ್ರ ಬರೆದಿದ್ದರು. ಬೇಂದ್ರೆ ಅನಾರೋಗ್ಯ ಕುರಿತು ಅವರಿಗೆ ತಿಳಿದಿರಲಿಲ್ಲ. ಈ ಪತ್ರವು ಬೋರಕರ ಅವರಿಗೆ ಮರಳಿ ಹೋಯಿತು. ಅಷ್ಟರಲ್ಲೇ ಮುಂಬೈಯಲ್ಲಿ ದತ್ತಾತ್ರೇಯ ಬೇಂದ್ರೆ ಅಸ್ತಂಗತರಾಗಿದ್ದರು. ಈ ಈರ್ವರ ಭೇಟಿ ಆಗಲೇ ಇಲ್ಲ. ಈ ಪ್ರಸಂಗದ ಲೇಖವೇ ಬೋರಕರ 'ಪರತ ಆಲೇಲೆ ಪತ್ರ'. ಈ ಪ್ರಸಂಗವು ಬೇಂದ್ರೆಯವರು ಮರಾಠಿ ಸಾಹಿತ್ಯದಲ್ಲಿ ಪಡೆದಿದ್ದ ಅಗಾಧ ಜ್ಞಾನ ಹಾಗೂ ಅನುಭಾವವನ್ನು ಪರಿಚಯಿಸುತ್ತದೆ.

ಮರಾಠಿ ಕಾವ್ಯ ರಚನೆಯಲ್ಲಿ ಬೇಂದ್ರೆ, ಮರಾಠಿ ಸಂತರಿಗಿಂತ ಒಂದು ಹೆಜ್ಜೆ ಮುಂದೆ ಹೋಗಿದ್ದರು ಎಂಬ ಅಭಿಪ್ರಾಯವೂ ಇದೆ. ಸೊಲ್ಲಾಪುರದ ಡಿ.ಎ.ವಿ. ಕಾಲೇಜಿನಲ್ಲಿ ಮರಾಠಿ ವಿಭಾಗದ ಮುಖ್ಯಸ್ಥರೂ ಹಾಗೂ ಪ್ರಾಧ್ಯಾಪಕರಾದ ಡಾ|| ವಿ. ಮ. ಕುಲಕರ್ಣಿ ''ಕವಿ ಬೇಂದ್ರೆ ಒಂದು ಅಮರಜ್ಯೋತಿ'' ಎಂದು ಬಣ್ಣಿಸಿದ್ದರು. ಬೇಂದ್ರೆಯವರನ್ನು ಪುಣೆ ವಿಶ್ವವಿದ್ಯಾಲಯ, ನಾಗಪೂರ ಆಕಾಶವಾಣಿ, ಮರಾಠಿಯ ಸುಪ್ರಸಿದ್ಧ ಪತ್ರಿಕೆ 'ಕೇಸರಿ' ಹಾಗೂ ಕೌಶಿಕ ವ್ಯಾಖ್ಯಾನಮಾಲೆ ಮುಂತಾದ ಸಂಸ್ಥೆಗಳು ಮರಾಠಿಯಲ್ಲಿ ವಿಶೇಷ ಭಾಷಣಗಳನ್ನು ಮಾಡಲು ಆಮಂತ್ರಿಸಿದ್ದರು. ಕರ್ನಾಟಕದ ಮೈಸೂರು ವಿಶ್ವವಿದ್ಯಾಲಯವೂ ''ಮರಾಠಿ ಸಾಹಿತ್ಯ'' ಕುರಿತು ವಿಶೇಷ ಉಪನ್ಯಾಸವನ್ನು ನೀಡಲು ಬೇಂದ್ರೆಯವರನ್ನು ಆಮಂತ್ರಿಸಿತ್ತು. ಇದು ಒಂದು ಕಡೆಯಾದರೂ, ಮಹಾರಾಷ್ಟ್ರದ ಮುಂಬೈ, ಪುಣೆ, ಸೊಲ್ಲಾಪುರ ಮುಂತಾದ ಅನೇಕ ಕಡೆ ಬೇಂದ್ರೆಯವರನ್ನು ಸಾರ್ವಜನಿಕ ಸಂಸ್ಥೆಗಳು ಮರಾಠಿಯಲ್ಲಿ ವಿಶೇಷ ಉಪನ್ಯಾಸಗಳನ್ನು ನೀಡಲು ಆಮಂತ್ರಿಸಿದ್ದರು. ಪಂಡಿತರಂತೆ ಪಾಮರರೂ ಬೇಂದ್ರೆ ಅವರ ಮರಾಠಿ ಭಾಷಣಗಳನ್ನು ತುಂಬು ಹೃದಯದಿಂದ ಆಸ್ವಾದಿಸಿ, ಆನಂದ ಪಟ್ಟಿದ್ದರು ಎಂಬುದು ಐತಿಹಾಸಿಕ ಸತ್ಯ. ಅಂತೆಯೇ ಬೇಂದ್ರೆಯವರ ಮರಾಠಿ ಕಾವ್ಯ ಸಂಪತ್ತು ಕನ್ನಡದಲ್ಲಿ ಬರುವ ಅವಶ್ಯಕತೆಯಿತ್ತು. ಈ ಕೊರತೆಯನ್ನು ವಾಮನ ಬೇಂದ್ರೆ ನೀಗಿಸಿದ್ದಾರೆ ಎಂದೇ ಹೇಳಬೇಕು.

ಇನ್ನು ''ಹೃದಯ ಗೀತ'' ಕೃತಿಯನ್ನು ಕುರಿತು ಕೆಲ ಮಾತು ಹೇಳುವ ಅವಶ್ಯಕತೆ ಇದೆ. ಬೇಂದ್ರೆಯವರು ಮರಾಠಿ ಕವನಗಳನ್ನು ಪುಣೆ, ಸೊಲ್ಲಾಪೂರ ಹಾಗೂ ಧಾರವಾಡಗಳಲ್ಲಿ ರಚಿಸಿದ್ದರು. ಆದರೆ ವಿಶೇಷವಾದ ಸಂಗತಿಯೆಂದರೆ, ಈ ಕೃತಿಯಲ್ಲಿ ಭಾವಾನುವಾದ ಹೊಂದಿರುವ ಕವನಗಳಲ್ಲಿ ಬಹುಪಾಲು ಕವನಗಳನ್ನು ಅವರು ಧಾರವಾಡದಲ್ಲಿ ೧೯೫೪-೧೯೬೭ರ ಅವಧಿಯಲ್ಲಿ ರಚಿಸಿದ್ದರು ಎನ್ನುವುದು. ಇದಕ್ಕೆ ವಿಶೇಷ ಕಾರಣಗಳಿರಲೂ ಸಾಕು. ಆದರೆ ಬೇಂದ್ರೆಯವರನ್ನು ನಿಕಟವಾಗಿ ಬಲ್ಲವರು ಒಂದು ಮಾತನ್ನು ಹೇಳಬಹುದು. ಅವರ ಕಾವ್ಯಸೃಷ್ಟಿಗೆ ಯಾವುದೇ ಭಾಷೆಯ ಬಂಧನವಿರಲಿಲ್ಲ. ಅವರ ಹೃದಯಾಂತರಾಳದ ಕವಿ ಅಂಬಿಕಾತನಯದತ್ತ ಯಾವ ಭಾಷೆಯಲ್ಲಿ ನುಡಿಸುತ್ತಿದ್ದನೋ, ಆ ಭಾಷೆಯಲ್ಲಿ ಲಿಪಿಕಾರ ಬೇಂದ್ರೆ ಬರೆದುಕೊಳ್ಳುತ್ತಿದ್ದರು. ಈ ಭಾವಋಷಿಯು, ತನ್ನಭಾವದ ಅಭಿವ್ಯಕ್ತಿಯನ್ನು ಅತಿ ಹೆಚ್ಚಾಗಿ ಕನ್ನಡದಲ್ಲಿ ಮಾಡಿದ್ದರೂ, ಮರಾಠಿ, ಸಂಸ್ಕೃತ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿಯೂ ಕೂಡ ಸಾಹಿತ್ಯ ರಚನೆ ಮಾಡಿದ್ದಾರೆ ಎನ್ನುವುದು ಗಮನಾರ್ಹ.

''ವಿಶ್ವದೊಳನುಡಿಯಾಗಿ ಕನ್ನಡಿಸುತಿಹನಿಲ್ಲಿ
ಅಂಬಿಕಾತನಯನಿವನು''

('ನಾನು' - ಗಂಗಾವತರಣ : ೫/ಪ್ರ.೧೯೫೧)

ಎಂಬ ಸೂತ್ರವನ್ನು ಅರಿಯುವುದು ಅವರ ಕಾವ್ಯೋದ್ಯೋಗವನ್ನು ಅರ್ಥೈಸುವಲ್ಲಿ ಸಹಕಾರಿಯಾಗುತ್ತದೆ. ಈ ರೀತಿಯಾದ 'ವಿಶ್ವದ ಒಳನುಡಿ'ಯು ಕನ್ನಡದಲ್ಲಿಯಂತೆ, ಮರಾಠಿಯಲ್ಲಿಯೂ ಕನ್ನಡಿಸಲ್ಪಡುತ್ತಿತ್ತು, ಅಂದರೆ, ಪ್ರತಿಬಿಂಬಿತವಾಗುತ್ತಿತ್ತು. ಅದಕ್ಕೇ ಅವರು ನುಡಿದಿದ್ದರು: 'ಕೇಳುವ ಸೂತ್ರ ಸರಿಯಿರಲಿ' ಎಂದು.

ಬೇಂದ್ರೆಯವರ 'ಇದು ನಭೋವಾಣಿ' ಕವನ, ಈ ಅರ್ಥಗ್ರಹಿಕೆಗೆ ಅತ್ಯಂತ ಸಹಕಾರಿ :

''ಓ! ಶ್ರೋತ್ರಿಯನೆ, ಶ್ರೋತಾರಾ, ಕೇಳು
ಇದು ನಭೋವಾಣಿ.
ನಾನು ಬಾಯಿ ; ನೀನು ಕಿವಿ
ಬಾನ ಕಡಲಲಿ ತೇಲಿಬಿಟ್ಟ ಈ ನುಡಿ ದೋಣಿ
ನಿನ್ನ ಹೃದಯದ ಬಂದರವ ಮುಟ್ಟೀತು
ನಿನ್ನ ಬುದ್ಧಿಯ ಮನೆಯ ಕಟ್ಟೀತು
ನೀನೆಲ್ಲೇ ಇರು. ಕೇಳುವ ಸೂತ್ರ ಸರಿ ಇರಲಿ
ಹೃದಯ ತೆರೆದಿರಲಿ.

೨
ಕನ್ನಡದ ಹಾಗೆ ಕೇಳಿಸಬಹುದು ಈ ಮಾತು
ಆದರೂ ಇದು ಮಾನವ್ಯ ಜೀವದಿಂ ಜೀವಕ್ಕೆ
ಕಟ್ಟಿದ ಸೇತು. ಬಾಂಧವ್ಯ ಜಾತ ಜೀವಾತು.
....
....
ಭಾವವೇ ಹೂತು, ಭಾವವೇ ನೂತು, ಮಾಲೆಯಾತು
ಬಂದಿಹುದು ತೆಕ್ಕೆಬೀಳಲು ಕೊರಳು ಕೊರಳಿಗೆ ಜೋತು
ಮನಸೋತು...........................
....
....
ಓ ಹೃದಯವಂತ! ಓ ಬುದ್ಧಿವಂತ, ಜೀವಂತ!
ಮೂಡಲವ ಪಡುವಲವ ಸುತ್ತಿಹಾಕಿ ಬರುತಿದೆ
ನಭೋವಾಣಿ, ಸಾರ್ವಭೌಮ ಮಧುರಾಣಿ, ಜೇನ ಹುಟ್ಟು
ಕಟ್ಟಲಿಂಬುಗೊಡು ನಿನ್ನ ಹೃದಯದ ಗೂಡು.
೪
....
....
ಬಿತ್ತರಿಸುವದೆತ್ತೆತ್ತೂ
ಮಾನವತೆಯ ಮಂತ್ರಾ.
....
೬
ದಶಮಾನದ ಶಕ್ತಿಯಾಗಿ
ಶತಮಾನದ ಹಾಡು
ಸಾವಿರದೀ ಪಾಡು
ಎಲ್ಲರ ಲಕ್ಷ್ಯವ ಸೆಳೆಯುವ ಈ ದೇವಕೋಟಿ
ಅಬ್ಜದ ಮಾನದಾಟ
ಬರುತಿದೆ ಹೊಸ ಹಾಡು, ಕೇಳಣ್ಣಾ ಕಿವಿಗೊಟ್ಟು
....
....
೧೦
....
....
ಹೃದಯದ ಬಯಕೆಯ ಹಿಂಗಿಸಿ,
ಭೂಮಿಯನ್ನು ಈ ಮಾತೇ ಆಲಂಗಿಸಿ,
ಬರುತಿದೇऽऽ ಬರುತಿದೇऽऽ ಬರುತಲಿದೆ''

– ''ಇದು ನಭೋವಾಣಿ'' – ಔದುಂಬರಗಾಥೆ : ದರ್ಶನ ಸಂ.ಪು.೨ ಕವನ ೫೭೦

ಬೇಂದ್ರೆಯವರ ಕವನಗಳೆಲ್ಲವು ನಿಜವಾಗಿಯೂ 'ನಭೋವಾಣಿ'. ಈ ದಿವ್ಯವಾಣಿಯನ್ನು ಪ್ರತಿ ಶ್ರೋತ್ರಿಯನೂ, ಶ್ರೋತಾರನೂ ಕೇಳಬೇಕು ಎಂಬುದು ಅವರ ಒಲವಿನ ನಲುಮೆಯ ಕರೆ. ಕವಿಯು ಬಾಯಾದರೆ ಶ್ರೋತಾರನು ಕಿವಿ. ಕವಿ ಬೇಂದ್ರೆ ಬಾನ ಕಡಲಲ್ಲಿ ತೇಲಿ ಬಿಟ್ಟ ಈ ನುಡಿ ಡೋಣಿ, ಪ್ರತಿ ಶ್ರೋತಾರನ ಹೃದಯದ ಬಂದರವನ್ನು ಮುಟ್ಟಬೇಕು. ಅವನ ಬುದ್ಧಿಯಲ್ಲಿ ಮನೆ ಕಟ್ಟಬೇಕು. ಶ್ರೋತಾರನ ಹೃದಯ ಯಾವಾಗಲೂ ತೆರೆದಿರಬೇಕೆಂದೂ, ಹಾಗೂ ಕೇಳುವ ಸೂತ್ರ ಸರಿ ಇರಬೇಕೆಂದು ಅವರು ಬಯಸುತ್ತಾರೆ, ಅತಿ ಮುಖ್ಯವಾದ ಅಂಶವೆಂದರೆ -''ಕನ್ನಡದ ಹಾಗೆ ಕೇಳಿಸಬಹುದು ಈ ಮಾತು, ಆದರೆ, ಮಾನವ್ಯ ಜೀವದಿಂ ಜೀವಕ್ಕೆ ಕಟ್ಟಿದ ಸೇತುವೆ ಅದು. ಬಾಂಧವ್ಯ ಜಾತ ಜೀವಾತು''. ಇಲ್ಲಿ ನಾವು ಗಮನಿಸಬೇಕಾದ ಅತ್ಯಂತ ಮುಖ್ಯ ವಿಷಯವೆಂದರೆ, ಬೇಂದ್ರೆ ಮಾತು, ಕನ್ನಡವಿರಬಹುದು, ಮರಾಠಿ ಇರಬಹುದು, ಸಂಸ್ಕೃತವಿರಬಹುದು, ಅದು ಇಂಗ್ಲೀಷೂ ಆಗಿರಬಹುದು. ಆದರೆ ಈ ವಾಣಿಯು ಕವಿ ಹೃದಯದಿಂದ ರಸಿಕ ಶ್ರೋತಾರನ ಹೃದಯ ಬಂದರವನ್ನು ಮುಟ್ಟಲೆಂದೇ ಉದ್ಭವಗೊಂಡದ್ದು. ಅಂತೆಯೇ ಅವರ ಎಲ್ಲ ಗೀತಗಳೂ ''ಹೃದಯಗೀತ''ಗಳೇ ಎಂದು ಹೇಳಬೇಕಾಗುತ್ತದೆ. ಈ ದೃಷ್ಟಿಯಿಂದ ಬೇಂದ್ರೆಯವರ ಸಮಗ್ರ ಮರಾಠಿ ಕಾವ್ಯದ ಭಾವಾನುವಾದ ಸಂಕಲನಕ್ಕೆ ''ಹೃದಯ ಗೀತ'' ಎಂಬ ಹೆಸರು ಅನ್ವರ್ಥ ಎಂದೇ ಹೇಳಬೇಕು.

ಇನ್ನೊಂದು ಅತ್ಯಂತ ಮಹತ್ವದ ಅಂಶವೆಂದರೆ, ಬೇಂದ್ರೆ ಭಾವಋಷಿ, ಇವರ ಭಾವಗೀತವೇ ''ಹೃದಯಗೀತ''. ಅಂತೆಯೇ ಅವರು ಹೇಳಿರುವುದು:- ''ಭಾವವೇ ಹೂತು, ಭಾವವೇ ನೂತು, ಮಾಲೆಯಾತು, ಬಂದಿಹುದು ತೆಕ್ಕೆ ಬೀಳಲು ಕೊರಳು ಕೊರಳಿಗೆ ಜೋತು, ಮನಸೋತು''. ಬೇಂದ್ರೆ ಭಾವ ಮಾಲೆಯು ಮನಸೋತು, ಪ್ರತಿಯೊಬ್ಬರ ಕೊರಳಿಗೆ ಜೋತು ಬೀಳಲು ಸಿದ್ಧವಾಗಿದೆ. ಅವರ ಮನವಿಯೇನೆಂದರೆ, ಇವರ ನಭೋವಾಣಿ ಜೇನ ಹುಟ್ಟು ಕಟ್ಟಲಿಂಬುಗೊಂಡು ಪ್ರತಿಯೊಬ್ಬರ ಹೃದಯದ ಗೂಡನ್ನು ಸೇರಿದೆ. ಮಾನವತೆಯ ಮಂತ್ರವನ್ನು ಬಿತ್ತರಿಸುತ್ತಿದೆ. ಇದು ಬೇಂದ್ರೆ 'ಹೊಸ ಹಾಡು'.

ದ. ರಾ. ಬೇಂದ್ರೆಯವರ ಮಾನವೀಯತೆಯ ಸಿದ್ಧಾಂತವನ್ನು ಹೊತ್ತು ಬರುವ ಮರಾಠಿ ಕವನಗಳು, ಕವಿ-ಪುತ್ರ ವಾಮನ ಬೇಂದ್ರೆಯವರು ತೊಡಿಸಿರುವ ಕನ್ನಡದ ಉಡುಪು ತೊಟ್ಟು ''ಹೃದಯ ಗೀತ'' ಸಂಕಲನದ ರೂಪವನ್ನು ತಾಳಿದೆ ಎಂಬ ಇದರ ಅಂತರ್ಯವನ್ನು ಅರಿಯುವ ಅವಶ್ಯಕತೆಯಿದೆ.

''ಹೃದಯ ಗೀತ'' ಒಂದು ವಿಶಿಷ್ಟ ಕೃತಿ. ಈ ಸಂಕಲನದಲ್ಲಿ ನೂರು ಕವನಗಳನ್ನು ಸೇರ್ಪಡೆ ಮಾಡಲಾಗಿದೆ. ''ಹೃದಯ ಗೀತ''ದಿಂದ ಪ್ರಾರಂಭವಾಗಿ ''ನಾವು ಅಲ್ಲಾ ಪಶು'' ಕವನದಿಂದ ಇದು ಮುಕ್ತಾಯವಾಗುತ್ತದೆ. ವರಕವಿ ದ. ರಾ. ಬೇಂದ್ರೆ ಇವರು ಭಾವದ ಅಭಿವ್ಯಕ್ತಿಗೆ ಮರಾಠಿ ಭಾಷೆಯನ್ನು ಮಾಧ್ಯಮವಾಗಿ ಬಳಸಿದಾಗ ಅದು ಯಾವ ಯಾವ ಆಯಾಮಗಳನ್ನು ಉನ್ಮೀಲನಗೊಳಿಸುತ್ತದೆ ಎಂಬುದಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿದೆ ಎಂಬ

ಕಾರಣಕ್ಕೆ ಈ ಕವನಗಳ ಅಭ್ಯಾಸವು ಬಹಳ ಮುಖ್ಯವಾಗಿದೆ. ಒಂದು ದೃಷ್ಟಿಯಲ್ಲಿ ಬೇಂದ್ರೆ ಸಮಗ್ರ ಅಧ್ಯಯನವನ್ನು ಬೇಂದ್ರೆ ಸಮಗ್ರಕಾವ್ಯ ''ಔದುಂಬರಗಾಥೆ - ದ. ರಾ. ಬೇಂದ್ರೆ ಜೀವನ ಮಹಾಕಾವ್ಯ'' - ದ ೧೪೨೭ ಕವನಗಳ ಸಮಗ್ರ ಮರಾಠಿ ಕಾವ್ಯವನ್ನೊಳಗೊಂಡ ''ಹೃದಯ ಗೀತ'' ದ ೧೦೦ ಕವನಗಳ ಹಿನ್ನೆಲೆಯಲ್ಲಿ ಮಾಡುವ ಅವಶ್ಯಕತೆಯಿದೆ. ಈ ಅಧ್ಯಯನದ ವಿವರಗಳನ್ನು ಪ್ರಸ್ತಾಪಿಸುವ ಮೊದಲೇ ಈ ಅಧ್ಯಯನದ ಮೂಲ ಸೂತ್ರವನ್ನು ಗುರುತಿಸುವುದು ಮುಖ್ಯ. ಅದೆಂದರೆ ಬೇಂದ್ರೆ ''ಹೃದಯ ಗೀತ'' ವಾಸ್ತವವಾಗಿ ಅವರ 'ಜೀವನ ಮಹಾಕಾವ್ಯ'ವೇ ಆಗಿದೆ ಎನ್ನುವುದು. ಬೇಂದ್ರೆಯವರ ಕಾವ್ಯದ ಮೂಲ ನೆಲೆ :

''ಎನ್ನ ಪಾಡೆನಗಿರಲಿ
ಅದರ ಹಾಡನ್ನಷ್ಟೆ
ನೀಡುವೆನು ರಸಿಕ ನಿನಗೆ''

''ಬೆಂದು ಬೇಂದ್ರೆಯಾದ'' ಎಂಬ ಮಾತು ಅನ್ವರ್ಥವೇ ಸರಿ. ಈ ರೀತಿಯಾಗಿ ಜೀವನದಲ್ಲಿ ಬೆಂದ ಬೇಂದ್ರೆ, ವಿಶ್ವಕ್ಕೆ ಕೊಟ್ಟಿದ್ದು ಅವರ ಜೀವನಾಮೃತವನ್ನು, ಹಾಡಿನ ರೂಪದಲ್ಲಿ. ಈ 'ದತ್ತಾತ್ರೇಯ' ಶಿವನ ಹಾಗೆ ವಿಷನುಂಗಿ, ಅದನ್ನು ತನ್ನ ಕಂಠದಲ್ಲಿ ಶೇಖರಿಸಿ, ಜಗಕ್ಕೆ ಅಮೃತವನಿತ್ತ ಹಾಗೆ ಇದೆ. ಬೇಂದ್ರೆ ಔದುಂಬರಗಾಥೆ ಹಾಗೂ ''ಹೃದಯ ಗೀತ''ದಲ್ಲಿ ಅಡಕವಾಗಿರುವ ಕವನಗಳಲ್ಲಿಯ ವಸ್ತುವಿನ ಒಂದು ಸ್ಥೂಲ ವರ್ಗೀಕರಣವನ್ನು ಇಲ್ಲಿ ಪರಿಚಯಿಸ ಬಯಸುತ್ತೇನೆ. ಸ್ಥಳಾಭಾವದಿಂದ ಈ ವರ್ಗೀಕರಣವನ್ನು ವಿಸ್ತಾರವಾಗಿ ವಿವರಿಸಲು ಆತಂಕವಿದ್ದರೂ, ಇದಕ್ಕೆ ಕೆಲವೇ ಉದಾಹರಣೆಗಳನ್ನು ನೀಡುವ ಯತ್ನ ಮಾಡುವೆ. ''ಹೃದಯ ಗೀತ'' ಸಂಕಲನದಲ್ಲಿ ಕಾವ್ಯೋದ್ಯೋಗ (ಕಾವ್ಯ+ಉತ್+ಯೋಗ), ಜೀವನ ಸಿದ್ಧಾಂತ, ಸಾಂಖ್ಯಶಾಸ್ತ್ರ ದರ್ಶನ, ಸಾಮಾಜಿಕ ಅಭಿವ್ಯಕ್ತಿ, ನಾಡಗೀತೆ, ಕೌಟುಂಬಿಕ ಗೀತೆ, ಮರಣೋತ್ತರ ಸಖೀಗೀತ, ಇವು ಪ್ರಮುಖ ವಿಭಾಗಗಳು. ಇಲ್ಲಿಯ ಕೌಟುಂಬಿಕ ಗೀತೆಗಳಲ್ಲಿ ಬೇಂದ್ರೆಯವರು ಎಲ್ಲ ಮೊಮ್ಮಕ್ಕಳು ಹಾಗೂ ತಮ್ಮ ಮರಿಮಗಳನ್ನು ಕುರಿತು ಕವನಗಳನ್ನು ರಚಿಸಿದ್ದು ಇದ್ದರೂ, ಇವೆಲ್ಲ ವೈಯಕ್ತಿಕ ಅನುಭವಗಳು ಸಾರ್ವತ್ರೀಕರಣಗೊಂಡು ಕಾವ್ಯವಾಗುವ ಪ್ರಕ್ರಿಯೆಯಲ್ಲಿ ಅನುಭಾವದ ಮಟ್ಟಕ್ಕೆ ಏರುತ್ತವೆ. ಮರಣೋತ್ತರ ಸಖೀಗೀತ ಕವನಗಳು ದ. ರಾ. ಬೇಂದ್ರೆಯವರ ಸಖಿ 'ಲಕ್ಷ್ಮೀಬಾಯಿ' ಮರಣ ಹೊಂದಿದ ನಂತರ, ಆ ದುಃಖವನ್ನೇ ಹಾಡಾಗಿಸಿ ಬರೆದವೇ ಮರಣೋತ್ತರ ಸಖೀಗೀತ. ಈ ಎಲ್ಲವೂ ಕೌಟುಂಬಿಕ ಗೀತಗಳಾಗಿದ್ದು, ಅವು ಕವಿಯ ಹೃದಯಾಂತರಾಳದಿಂದ ಉದ್ಭವಗೊಂಡು ಹರಿದು ಬಂದ ಅಮೃತಾನುಭವ ಎಂದೇ ಹೇಳಬೇಕು. ಈ ಸಂಕಲನದಲ್ಲಿ ಸಂಖ್ಯಾದರ್ಶನವೂ ಇದೆ. ಬೇಂದ್ರೆಯವರ ಚಿಂತನ ಪ್ರಕ್ರಿಯೆಯಲ್ಲಿ ಸಂಖ್ಯಾ ದರ್ಶನವು ಅತ್ಯಂತ ಪ್ರಮುಖ. ಏಕೆಂದರೆ ಅವರು ಅಂತಿಮವಾಗಿ ಪಡೆದ ಜೀವನ ದರ್ಶನವು ಸಂಖ್ಯೆಗಳ ಮೂಲಕವೇ ಅವರು ತಮ್ಮ ಕೊನೆ ಉಸಿರು ಎಳೆಯುವ ಮುನ್ನ ದೀಪಾವಳಿಗಾಗಿ ನೀಡಿದ ಸಂದೇಶ ಸಂಖ್ಯೆಯಲ್ಲಿತ್ತು. ಅದು ೮೮೧ ಹಾಗೂ ೪೪೧; ಅಂದರೆ ಹೃದಯ ವಿವೇಕ. ಹೀಗಾಗಿ ''ಹೃದಯ ಗೀತ'' ಸಂಕಲನದಲ್ಲಿ ಸಂಖ್ಯಾ ಆಧಾರಿತ ಕವನಗಳೂ ಬಂದಿವೆ.

ಮರಾಠಿಯಲ್ಲಿ ಕವನ ರಚಿಸುವಾಗಲೂ ಕೂಡ ಸಂಖ್ಯಾ ಆಧಾರಿತ ಕವನಗಳು ಮೂಡಿ ಬಂದಿರುವುದು ಗಮನಾರ್ಹ. ಇವಲ್ಲದೆ ಸಮಾಜದ ಡೊಂಕುಗಳನ್ನು ಬಿಂಬಿಸುವ ವ್ಯಂಗ್ಯೋಕ್ತಿಗಳು ಹಾಗೂ ಸಾಮಾಜಿಕ ದರ್ಶನದ ಕವನಗಳೂ ಇಲ್ಲಿವೆ. ಸಾಮಾಜಿಕ ಪುನರ್ರಚನೆಗೆ ಹಾಗೂ ಶೋಷಣಾರಹಿತ ಸಮಾಜ ರಚನೆಗೆ ಪೂರಕ ಕವನಗಳೂ ಇವೆ. ಇವಲ್ಲದೆ ನಾಡಿಗೆ ಸಂಬಂಧಿಸಿದ ಕವನಗಳೂ ಇವೆ.

ಈ ವರ್ಗೀಕರಣವನ್ನು ಇಲ್ಲಿ ಸೂಚಿಸುವ ಉದ್ದೇಶವೆಂದರೆ, ''ಹೃದಯ ಗೀತ'' ಸಂಕಲನದ ಆಂತರ್ಯದ ಸಮಗ್ರ ದರ್ಶನ ರಸಿಕರಿಗೆ ಲಭಿಸಲಿ ಎಂದು.

''ಹೃದಯ ಗೀತ''ದಲ್ಲಿಯ ಕವನಗಳ ವೈಚಾರಿಕತಯನ್ನು ಅರ್ಥಮಾಡಿಕೊಳ್ಳಲು ಈ ಸಂಕಲನದಲ್ಲಿಯ ಕವನಗಳನ್ನು ಸಪ್ತ ನೆಲೆಗಳಲ್ಲಿ ವಿಂಗಡಿಸಬೇಕಾಗುತ್ತದೆ. ಅವೆಂದರೆ ಮರಣೋತ್ತರ ಸಖೀಗೀತ, ಕೌಟುಂಬಿಕ ಅಭಿವ್ಯಕ್ತಿ, ನಾಡಗೀತೆ, ಸಾಮಾಜಿಕ ಅಭಿವ್ಯಕ್ತಿ, ಜೀವನ ಸಿದ್ಧಾಂತ, ಸಂಖ್ಯಾ ಸಿದ್ಧಾಂತ ದರ್ಶನ ಹಾಗೂ ಕಾವ್ಯೋದ್ಯೋಗ. ಈ ಒಂದೊಂದು ನೆಲೆಯ ದರ್ಶನವನ್ನು ಕೆಲವು ಕವನಗಳನ್ನು ಆಧರಿಸಿ, ಉದಹರಿಸ ಬಯಸುತ್ತೇನೆ. ಈ ಕಾರ್ಯದಲ್ಲಿ ತೊಡಗುವ ಮೊದಲು ಬೇಂದ್ರೆ ಮರಾಠಿ ಕವನಗಳನ್ನು ರಚಿಸುವಾಗ ಅಂತರ್ಗತವಾಗಿ ಒಡಮೂಡಿದ ಒಂದು ಮಹತ್ವದ ಅಂಶ ಈ ಕೆಳಗಿನಂತಿದೆ :

''ಅಂಬಿಕೆ'' ನನ್ನ ತಾಯಿ
ಬಿತ್ತಿದಳು ಕನ್ನಡ ಭಾಷೆಯ ತಂತ್ರಾ
ತಾತಾ ರಾಮಚಂದ್ರಾ
ಶಕ್ತಿದಾನ ಮಾಡಿದ ರಾಮ ಮಂತ್ರ''

- ಕವನ ೫೫ : ''ನೆನಪಾತು ಆಮ್ಯಾಲೆ''

ಈ ಕವನ ಸಿದ್ಧಪಡಿಸುವುದೇನೆಂದರೆ, ಬೇಂದ್ರೆ ''ನೆನಪಾತು ಆಮೆಲೆ'' ಎಂಬ ಈ ಕವನದಲ್ಲಿ ''ಅಂಬಿಕೆ ನನ್ನ ತಾಯಿ ಬಿತ್ತಿದಳು ಕನ್ನಡ ಭಾಷೆಯ ತಂತ್ರಾ'' ಎಂದು ಮರಾಠಿ ಕವನದಲ್ಲಿ ಮರಾಠಿಗರಿಗೆ ಹೇಳಿರುವುದು. ಇದೇ ರೀತಿಯಾಗಿ ಅವರು ''ಅಂಬಿಕಾತನಯದತ್ತ'' ಕವನದಲ್ಲಿ ಕನ್ನಡದಲ್ಲಿ ಈ ರೀತಿಯಾಗಿ ಹೇಳಿದ್ದಾರೆ :

''ನಿನ್ನ ಹೆಸರಿನಲ್ಲಿ ನಾನು ಬರೆವುದೇನು ಸೋಜಿಗ
ತಿಳಿಯಲಾರದೀ ಜಗ''.

ಬೇಂದ್ರೆ ''ಅಂಬಿಕಾತನಯದತ್ತ'' ಕಾವ್ಯನಾಮದಲ್ಲಿ ತಾವು ಕೈಗೊಂಡ ಕಾವ್ಯ ಸೃಷ್ಟಿಯು ತನ್ನ ತಾಯಿ 'ಅಂಬಿಕೆ' ತನಗೆ ಇತ್ತುದನ್ನು, ತಾನು ಜಗತ್ತಿಗೆ ಈಯುತ್ತಿರುವ ಸೋಜಿಗವನ್ನು ಜಗತ್ತು ಅರಿಯಲಾರದು ಎಂದಿದ್ದಾರೆ.

ಈ ಸಂದರ್ಭದಲ್ಲಿ ಇನ್ನೊಂದು ಘಟನೆಯನ್ನು ನೆನೆಯುವುದು ಅತ್ಯವಶ್ಯ. ಮುಂಬೈಯಲ್ಲಿ

ನಡೆದ ಒಂದು ಸಭೆಯಲ್ಲಿ ಬೇಂದ್ರೆಯವರು ಮರಾಠಿಯಲ್ಲಿ ಉಪನ್ಯಾಸ ಮಾಡಲು ಆಹ್ವಾನಿತರಾಗಿದ್ದರು. ಆ ಸಂದರ್ಭದಲ್ಲಿ ಅವರನ್ನು ಪರಿಚಯಿಸಿದ ಒಬ್ಬ ಮರಾಠಿ ಪಂಡಿತ ಹೇಳಿದ್ದ ''ಬೇಂದ್ರೆ ಕನ್ನಡ ಸಾಹಿತ್ಯದ ಮಹಾಸಾಧಕರು. ಅವರು ಮರಾಠಿಯಲ್ಲಿ ಮಾತನಾಡಲಿದ್ದಾರೆ. ಅದನ್ನು ಸುಧಾರಿಸಿ ಅರ್ಥ ಮಾಡಿಕೊಳ್ಳಲು ನಾನು ಸಭಿಕರಲ್ಲಿ ವಿನಂತಿಸುತ್ತೇನೆ'' ಎಂದು. ಅದಕ್ಕೆ ಬೇಂದ್ರೆ ಖಾರವಾಗಿಯೇ ಉತ್ತರಿಸಿದ್ದರು. ''ನಾನು ನನ್ನ ಮರಾಠಿಯನ್ನು ಮುಂಬೈ ಬಾಜಾರಿನಲ್ಲಿ ಕಲಿತಿಲ್ಲ. ನನ್ನ ತಾಯಿಯ ತೊಡೆಯ ಮೇಲೆ ಕಲಿತಿದ್ದೇನೆ. ಇದಕ್ಕಿಂತ ಶುದ್ಧ ಮರಾಠಿ ಸಾಧ್ಯವೇ?'' ಎಂದು. ಬೇಂದ್ರೆ ''ಕನ್ನಡ ಭಾಷಾತಂತ್ರ''ವನ್ನು ''ಮರಾಠಿ ಭಾಷಾಮರ್ಮ''ವನ್ನು ತಮ್ಮ ತಾಯಿಇಂದಲೇ ಕಲಿತಿದ್ದರು ಎಂಬ ಅಭಿಮಾನ ಪಡುತ್ತಿದ್ದರು. ಈ ಭಾಷೆಗಳ ಬಗ್ಗೆ ಅವರ ಆತ್ಮ ವಿಶ್ವಾಸ ಬಹಳ ಪ್ರಬಲವಾಗಿತ್ತು. ಪ್ರಾಸಂಗಿಕವಾಗಿ ಈ ಮಾತುಗಳನ್ನು ಹೇಳಿ, ಇನ್ನು ಬೇಂದ್ರೆ ಮರಾಠಿ ಕಾವ್ಯದ ಸಪ್ತ ನೆಲೆಗಳ ವಿವೇಚನೆಯಲ್ಲಿ ತೊಡಗುತ್ತೇನೆ.

೧. ಮರಣೋತ್ತರ ಸಖೀಗೀತ :

ದ. ರಾ. ಬೇಂದ್ರೆಯವರ ಬಾಳ ಸಖಿ ಲಕ್ಷ್ಮೀಬಾಯಿ ಬೇಂದ್ರೆ ೧೭-೮-೧೯೬೬ ರಂದು ಹುಬ್ಬಳ್ಳಿಯ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದ್ದರು. ಅವರ ಅಗಲುವಿಕೆಯನ್ನು ನೆನೆದು ೧೮-೮-೧೯೬೬ ರಂದು ಬರೆದ ಕವನ ''ಕಾಲಿನ ಸೇವೆ ಮುಗಿದಿತ್ತು''. ತದನಂತರ ೧೯ ಹಾಗೂ ೨೯ ರಂದು ''ಸಖಿ'' ಹಾಗೂ ''ಕನಡ್ಯಾಗಿನ ಪ್ರತಿಬಿಂಬಾ'' ಈ ಕವನಗಳನ್ನು ಮರಾಠಿಯಲ್ಲಿ ರಚಿಸಿದ್ದರು ಎನ್ನುವುದು ಗಮನಾರ್ಹ. ಇದೇ ವೇಳೆಯಲ್ಲಿ ನಾವು ತಿಳಿದುಕೊಳ್ಳಬೇಕಾದ ಇನ್ನೊಂದು ಮಹತ್ವದ ವಿಷಯವೆಂದರೆ, ಬೇಂದ್ರೆಯವರು ತಮ್ಮನ್ನಗಲಿದ ಬಾಳ ಸಖಿಯುನ್ನು ಕುರಿತು ಕನ್ನಡದಲ್ಲೂ ಕವನಗಳನ್ನು ಬರೆದಿದ್ದರು. ಅವೆಂದರೆ, ''ತಾನಾದಳು ತಾಯಿ'' (೨೦-೮-೧೯೬೬), ''ಹೋದ ಬುಧವಾರ ಬರಽಽಽಽಲೊಲ್ದು'' (೨೨-೮-೧೯೬೬), ''ಸಿಹೀ ಮುಟ್ಟಬೇಕೋ'' (೨೯-೮-೧೯೬೬), ''ಅಮವಾಸಿ ದಾಟಿತ್ತು'' (೨-೯-೧೯೬೬), ''ಮತ್ತೆ ಬಂತು ಶ್ರಾವಣ'' (೧೧-೧-೧೯೬೯). ''ಶ್ರೀ ಲಕ್ಷ್ಮಿಗೆ-ಶ್ರೀ ನಾರಾಯಣದತ್ತ ಅಂದ'' (ಪ್ರಕಟಣೆ : ೧೯೮೨) - ಈ ಎಲ್ಲ ಕವನಗಳನ್ನು ತಮ್ಮ ಸಖಿಯ ಮರಣದ ನಂತರ ಅವರನ್ನು ಕುರಿತು ಬರೆದಿದ್ದರು. ಈ ಕಾವ್ಯೋತ್ಪತ್ತಿಯನ್ನು ನೋಡಿದಾಗ ಬೇಂದ್ರೆ ಭಾವಾಭಿವ್ಯಕ್ತಿಗೆ ಭಾಷೆಗಿಂತಲೂ ಭಾವ ಪ್ರಧಾನವಾಗಿತ್ತು. ಭಾಷೆ ನಿಮಿತ್ಯವಾಗಿತ್ತು. ಅದೊಂದು ಮಾಧ್ಯಮ ಮಾತ್ರ. ಈ ಎಲ್ಲವೂ ಮಹತ್ವದ ಭಾವಗೀತೆಗಳಾಗಿ ಅಭಿವ್ಯಕ್ತಗೊಂಡಿವೆ. ''ಹೃದಯ ಗೀತ'' ಸಂಕಲನದ ಕವನಗಳಲ್ಲಿ ಕೆಲ ಅವತರಣಿಕೆಗಳು ಹೀಗಿವೆ :

''ಸಖನಿಗೆ ಬಿಟ್ಟು ಇಲ್ಲಾ ಸಖೀ
ಆಗ್ಯಾಳ ಆಕಿ ಅಂತರ್ಮುಖಿ''

ಎಂದು ಪಲ್ಲವಿಯಿಂದ ಪ್ರಾರಂಭವಾಗುವ ಕವನ ಮುಂದುವರಿಯುತ್ತ -

"ಸಹೃದಯಳು ನೀನು ಸಖೀ
ಮುತ್ತೈದೆ ನೀನು ಸುಖಿ
ಬಾಡಿದೆ ಏಕೆ ನಿನ್ನ ಮುಖಾ?
ಉಳಿದೆ ನಾ ಇಲ್ಲೇ, ನಿನ್ನ ಸಖಾ.

- ಕವನ ೬೦ - 'ಸಖೀ'

ಎಂಬ ನುಡಿಯೊಡನೆ ಮುಕ್ತಾಯಗೊಳ್ಳುತ್ತದೆ.

ಈ ನುಡಿಗಳ ಆಂತರ್ಯ ಅತ್ಯಂತ ಮಾರ್ಮಿಕ. ಬೇಂದ್ರೆಯವರ ಸಖಿ ಇಹಲೋಕ ತ್ಯಜಿಸಿದ್ದರೂ ಆಕಿ "ಅಂತರ್ಮುಖಿ"ಯಾಗಿ ಸದಾ ತಮ್ಮ ಹೃದಯದಲ್ಲಿ ನೆಲೆಸಿದ್ದಾಳೆಂಬ ಭಾವವು ಅತ್ಯಂತ ದಿವ್ಯವಾದುದು. ಅವರು "ಸಖಿ"ಗೆ "ಸಹೃದಯಳು" ಎಂಬ ಸ್ಥಾನ ನೀಡಿದ್ದರು. ಆಕೆ "ಮುತ್ತೈದೆ"ಯಾಗಿ ನಿಧನ ಹೊಂದಿದ "ಸುಖಿ" ಎಂದು ಅವರು ಭಾವಿಸಿದ್ದರು. ಭಾರತೀಯ ಸಂಪ್ರದಾಯದಲ್ಲಿ ಮುತ್ತೈದೆ ಇದ್ದಾಗ ನಿಧನ ಹೊಂದುವುದನ್ನು ಸೌಭಾಗ್ಯ ಎಂದು ಪರಿಗಣಿಸುವ ಪರಿಪಾಠ ಇರುವುದರ ಪ್ರತಿಬಿಂಬ ಇಲ್ಲಿದೆ.

೨) ಕೌಟುಂಬಿಕ ಗೀತ :

ಇನ್ನು ಎರಡನೆಯ ನೆಲೆ-ಕೌಟುಂಬಿಕ ಗೀತ. ಈ ಸಂಕಲನದಲ್ಲಿ ಬೇಂದ್ರೆ ೭ ಮೊಮ್ಮಕ್ಕಳು ಹಾಗೂ ಒಬ್ಬ ಮರಿಮಗಳನ್ನು ಕುರಿತು ೧೨ ಕವನಗಳನ್ನು ರಚಿಸಿದ್ದಾರೆ. ಇವು ಕವನ ಸಂಖ್ಯೆ ೪೨ ರಿಂದ ೫೩ ರವರೆಗೆ ಇವೆ. ಇವುಗಳಲ್ಲಿ "ಬಂತಪ್ಪಾ ಪ್ರತಿಮಾ ಕುದುರಿ" ಕವನ ಉಲ್ಲೇಖನೀಯ. ಈ ಮರಾಠಿ ಕವನವನ್ನು ಮರಾಠಿ ಪಠ್ಯಪುಸ್ತಕಗಳಲ್ಲಿ ಸೇರ್ಪಡೆ ಮಾಡಲಾಗಿದೆ. ಇದು ಕಾವ್ಯ ಮೀಮಾಂಸೆಗೆ ಒಂದು ಅಪ್ರತಿಮ ಉದಾಹರಣೆಯೆಂದೇ ಹೇಳಬೇಕು. "ಪ್ರತಿಮಾ" ನಿರೂಪಣೆಗೆ ಇದೊಂದು ಅನುಪಮ ಕವನ. ಇಲ್ಲಿ "ಪ್ರತಿಮಾ ಕುದುರಿ" ಸಂಚರಿಸದ ಲೋಕವಿಲ್ಲ, ಅಡ್ಡಾಡದ ಸ್ಥಳವಿಲ್ಲ. ಕವಿಯ ಕಲ್ಪನಾ ಸಾಮರ್ಥ್ಯ ಅಗಾಧವಾಗಿದೆ.

"ಬಂತಪ್ಪ ಪ್ರತಿಮಾ ಕುದುರಿ
ಹೋಗ್ಬ್ಯಾಡ್ರಿ ನೀವೆಲ್ಲ ಹೆದರಿ
....
"ಚಂದ್ರಲೋಕಕ್ಕೆ ಹೋತಲ್ಲಾ ಹಾರಿ
ಮೈಯಾಗ ಸೇರ್ಯಾಳ "ಮಾರಿ"
ಲಗಾಮಕ್ಕss ಕೈಹಾಕಿ । ಕಡಿವಾಣ ಜಗ್ಗರಿ
ಮಾಡತಿರಾ ನೀವು ಸವಾರಿ?"

ಬೇಂದ್ರೆಯವರ 'ಹಕ್ಕಿ' ಮಂಗಳಲೋಕಕ್ಕೆ ಹಾರಿದ ಹಾಗೆ, ಇವರ "ಪ್ರತಿಮಾ ಕುದರಿ" ಚಂದ್ರಲೋಕಕ್ಕೆ ಹಾರುತ್ತದೆ, ಈ ಕುದರಿಯ ಮೈಯಾಗ "ಮಾರಿ"ನೇ ಹೊಕ್ಕದ ಅಂದ ಮೇಲೆ ಇದನ್ನು ಯಾರು ಸವಾರಿ ಮಾಡಬಲ್ಲರು? ಬೇಂದ್ರೆಯವರ 'ಪ್ರತಿಮಾ' ಯಾರ ಕೈಗೂ ಸಿಕ್ಕದ "ಕುದರಿ" ಎಂದು ಹೇಳಬಹುದಾಗಿದೆ.

೩) ನಾದಗೀತ :

ಈ ಕವನ ಸಂಕಲನದಲ್ಲಿಯ ಮೂರನೆಯ ನೆಲೆ "ನಾದಗೀತ". ಈ ವಿಭಾಗದಲ್ಲಿ "ಮಹಾರಾಷ್ಟ್ರದ ಸಂತರಿಗೆ ವಂತನೆ" (ಕವನ-೭), "ಎಚ್ಚರಿಕೆ (ಕವನ-೮) ಹಾಗೂ "ಹೇ ಚಾಮುಂಡರಾಜೇ ಕರವಿಯಲೆ" (ಕವನ-೯). ಇವನ್ನು ಗುರುತಿಸಬಹುದು. ಬೇಂದ್ರೆಯವರು ಮಹಾರಾಷ್ಟ್ರದ ಎಲ್ಲ ಸಂತರಿಗೆ ಗೌರವ ನಮನಗಳನ್ನು ಸಲ್ಲಿಸುತ್ತಾರೆ. ಈ ಭಾಗದಲ್ಲಿ "ಎಚ್ಚರಿಕೆ" ಕವನ ಅಧ್ಯಯನೀಯ. ಮಹಾರಾಷ್ಟ್ರದ ಸ್ಥಿತಿಯನ್ನು ಅತ್ಯಂತ ವಿಸ್ತಾರವಾಗಿ ಈ ಕವನ ಬಣ್ಣಿಸುತ್ತದೆ. ಈ ಕವನದ ವೈಶಿಷ್ಟ್ಯವೆಂದರೆ, ಇಲ್ಲಿ ಬಳಸಲಾಗಿರುವ ಅಂತರ್ಗತ ವ್ಯಂಗ್ಯ.

"ತಲೆ ಎತ್ತಿ ನಿಂತ ಈ ಮಹಾರಾಷ್ಟ್ರದಾಗ
ರಾಮದಾಸರು ನಿಂತೇ ಇದ್ದಾರೆ
ಒಂದು ಘಳಿಗೆ ಕೂಡ್ಲಿಕ್ಕೆ ಅವಕಾಶನ
ಇಲ್ಲಾ ಸಂತರಿಗೆ
ಹೀಗಿದ್ದೂ ದೊಡ್ಡ ದೊಡ್ಡ ಕನುಸು ಕಾಣ್ತಾರ"

ಹೀಗೆಯೇ "ಇಟ್ಟಂಗಿ ಮೇಲೆ ನಿಂತಽ ಇದ್ದಾನ ವಿಠ್ಠಲಾ" ಹಾಗೂ "ಶಿವಾಜಿ ಮಹಾರಾಜರ ಕುದುರಿ ನಿಂತಽ ಅದೆ," ಎಂದು ಈ ಧಾಟಿಯನ್ನು ಮುಂದುವರಿಸುತ್ತಾರೆ. ಈ ಯಾರನ್ನೂ ಒಂದು ಘಳಿಗೇನೂ ಕೂಡಲಿಕ್ಕೆ ಕೊಟ್ಟಿಲ್ಲ.

"ತಲೆ ಎತ್ತಿ ನಿಂತ ಈ ಮಹಾರಾಷ್ಟ್ರದಾಗ
ಜಗಳ, ಗುದ್ದಾಟ, ಸದಾ ಜಾಗೃತ
ಎಲ್ಲಾರೂ ಸಾಯಲಿಕ್ಕೆ ಗಡಿಬಿಡಿ ನಡಿಸ್ಯಾರ
ಬಾಳೋ ತಾಳ್ಮೆ ಒಬ್ಬರಲ್ಲೂ ಇಲ್ಲಾ"

ಮಹಾರಾಷ್ಟ್ರದಲ್ಲಿ ಸದಾ ಜಾಗೃತವಾಗಿರೋದು, ಜಗಳಾ ಗುದ್ದಾಟ ಮಾತ್ರ; ಬಾಳೋ ತಾಳ್ಮೆ ಅನ್ನೋದೇ ಅಭಾವ; ಸಾಯಲಿಕ್ಕೆ ಗಡಿಬಿಡಿ ಮಾಡ್ತಾರೆ. ಈ ಟೀಕೆಯು ವಾಸ್ತವಿಕ ಸ್ಥಿತಿಯ ಪ್ರತಿಬಿಂಬವಾಗಿದೆ. ಈ ರೀತಿಯಾಗಿ ಮಹಾರಾಷ್ಟ್ರದಲ್ಲಿಯ ಅಂತರ್ಗತ ದೋಷಗಳನ್ನು ಮರಾಠಿ ಕವನದಲ್ಲೇ ಬರೆಯಬೇಕಾದರೆ ಬೇಂದ್ರೆಯವರು ಎಷ್ಟು ವಸ್ತುನಿಷ್ಠರಾಗಿದ್ದರು ಎಂದು ತೋರುತ್ತದೆ. ಯಾವಾಗಲೂ "ತಲೆ ಎತ್ತಿದ

ಮಹಾರಾಷ್ಟ್ರದಾಗ'' ತಲೆ ತಗ್ಗಿಸುವಂತೆ ಮಾಡುವ ಸ್ಥಿತಿ ಹೇಗಿದೆ ಎಂದು ನಿರೂಪಿಸುತ್ತಾರೆ. ಈ ಕವನವನ್ನು ಈ ರೀತಿಯಾಗಿ ಮುಕ್ತಾಯಗೊಳಿಸುತ್ತಾರೆ :

''ಜಗತ್ತಿನ ಮೈ ತುಂಬ ಮೆತ್ಯದ ಲೋಭ
ತಳವೂರಿ ನಿಂತದ ಕ್ರೋಧ
ಕಾಮುಕ್ಕಂತೂ ಸರ್ವಾಧಿಕಾರ
ಇದು ಇಂದಿನ ಲೋಕರಾಜ್ಯದ ಪರಿ''

ಭಾರತೀಯ ''ಲೋಕರಾಜ್ಯ''ದ ಸ್ಥಿತಿಯನ್ನು ಬಣ್ಣಿಸಿ, ''ಎಚ್ಚರಿಕೆ''ಯನ್ನು ನೀಡುತ್ತಾರೆ. ಕಾಮ, ಕ್ರೋಧ, ಲೋಭಗಳು ತುಂಬಿರುವಾಗ ಯಾವು ರೀತಿಯಾಗಿ ಪ್ರಜಾಸತ್ತೆ ನೆಲೆಯೂರಲು ಸಾಧ್ಯ ಎಂಬ ಸಾಮಾನ್ಯವಾದ ಎಚ್ಚರಿಕೆಯಿಂದ ಈ ನಾಡಗೀತೆ ಮುಕ್ತಾಗೊಳ್ಳುತ್ತದೆ.

ಈ ವಿಭಾಗದಲ್ಲಿಯ ''ಹೇ ಚಾವುಂಡರಾಜೇ ಕರವಿಯಲೆ'' ಕವನದಲ್ಲಿ ಕನ್ನಡ ಹಾಗೂ ಮರಾಠಿಯ ಸಂಬಂಧ ಕುರಿತು ಪ್ರತಿಪಾದಿಸಿರುವುದು ಪ್ರಮುಖವಾದ ಅಂಶ.

''ಹೇ ಚಾವುಂಡರಾಜೇ ಕರವಿಯಲೆ''
ಎಂಬುದು ಮರಾಠಿ ಭಾಷೆಯ ಪ್ರಥಮ ವಾಕ್ಯ
ಚಾವುಂಡರಾಜನ ಕೀರ್ತಿಯೇ ಹೀಗೆ
ಕನ್ನಡ, ಮರಾಠಿ ಭಾಷೆಯ ಸುಳಿ
ಇದು ಶಾಶ್ವತ ಸತ್ಯ.

ಕನ್ನಡ ಹಾಗೂ ಮರಾಠಿ ಭಾಷೆಗಳ ಶಾಶ್ವತ ಸಂಬಂಧ ಹಾಗೂ ಸಾಮರಸ್ಯವನ್ನು ಪ್ರತಿಪಾದಿಸುವ ಈ ಸಂದೇಶ ಗಮನಾರ್ಹ.

೪) ಸಾಮಾಜಿಕ ಅಭಿವ್ಯಕ್ತಿ :

ಈ ಕವನಗಳ ನಾಲ್ಕನೆಯ ನೆಲೆ ಸಾಮಾಜಿಕ ಅಭಿವ್ಯಕ್ತಿ. ಬೇಂದ್ರೆಯವರು ೧೯೧೮ ರಲ್ಲಿ ರಚಿಸಿದ ಮರಾಠಿ ಕವನಗಳಲ್ಲಿ ಇವರ ಸಾಮಾಜಿಕ ಪ್ರಜ್ಞೆಯು ಅಭಿವ್ಯಕ್ತಗೊಂಡಿವೆ. ಇವೆಂದರೆ ''ವಧುವಿನ ಆಯ್ಕೆ'' (ಕವನ-೩), ''ಕಿಡಿ'' (ಕವನ-೪), ''ಚಿನ್ನ'' (ಕವನ-೫). ಈ ಕವನಗಳು ಆಗ ವಧುವಿನ ಆಯ್ಕೆಯ ವಿಧಿವಿಧಾನಗಳನ್ನು ಕುರಿತು, ಬಾಲ ವಿಧವೆಯ ಸ್ಥಿತಿ-ಗತಿ ಕುರಿತು ಹಾಗೂ ವರದಕ್ಷಿಣೆಯ ಸಾವು ಕುರಿತಾಗಿವೆ. ಈ ವಿಭಾಗದಲ್ಲಿ ಗಮನಿಸಬೇಕಾದ ಇನ್ನಿತರ ಕವನಗಳೆಂದರೆ ''ನೋಡಿರಿ ಬಡ ಮಕ್ಕಳ ಬಾಳು'' (ಕವನ-೬), ''ಶಾಂತಿ ಮತ್ತು ಶಕ್ತಿ'' (ಕವನ-೨೧), ''ಯಾರಂತಾರ?'' (ಕವನ-೨೨).

''ತಿನ್ನಲು ಸಿಗದೇ ಅನ್ನದ ಅಗಳು
ಹೃದಯ ತುಂಬಿದೆ ಸುಖದಾ ಅರಳು
ಮಮತೆ, ಮಾಯೆ, ಸರಳೇ ಸರಳು''

''ಯುದ್ಧದ ಕರೆ ಬರೆ ಮುಂದಾದವರು
ದೇಶದ ಒಲವಿನ ಸೆಲೆಯಾದವರು
ಈ ಹಸಿಯಿಂದಲೆ ಹಸಿರಾದವರು''

....

''ಬಡತನವೆಂಬುದು ಕಾಲನ ಜಾಲ
ಎಂದೂ ಮುಗಿಯದ ಹನುಮನ ಬಾಲ
ಸಂಹರಿಸಲೆಂದೇ ಹಾಡಿದೆ ಈ ಹಾಡ''

''ನೋಡಿರಿ ಬಡ ಮಕ್ಕಳ ಬಾಳು'' ಕವನದಲ್ಲಿಯ ಪಲ್ಲವಿಯಲ್ಲಿ ''ಎಲ್ಲೆಲ್ಲೂ ವಿಶ್ವದ ಈ ಗೋಳು'' ಎಂದಿದೆ. ವಿಶ್ವವ್ಯಾಪಿಯಾದ ಬಡಮಕ್ಕಳ ಗೋಳನ್ನು ಚಿತ್ರಿಸುವ ಈ ಕವನದಲ್ಲಿ ಬೇಂದ್ರೆಯವರು ಬಡವರ ಹೃದಯವಂತಿಕೆಯನ್ನು ಒಂದೆಡೆ ಶ್ಲಾಘಿಸಿದರೆ, ಇನ್ನೊಂದೆಡೆ ಅವರ ದೇಶ ಪ್ರೇಮವನ್ನು ಮೆಚ್ಚಿಕೊಳ್ಳುತ್ತಾರೆ. ಯುದ್ಧದ ಕರೆ ಬಂದರೆ ಆ ಕರೆಗೆ ಓ ಗೊಡುವವರೇ ಬಡವರ ಮಕ್ಕಳು ಎಂಬ ಸತ್ಯವನ್ನು ಬಿಂಬಿಸುತ್ತಾರೆ. ಬಡತನವೆಂಬ ಕಾಲನ ಜಾಲವು ಸಂಹಾರಗೊಳ್ಳಲೇ ಬೇಕೆಂಬುದು ಬೇಂದ್ರೆ ಇಂಗಿತ. ಈ ಗುರಿ ಸಾಧನೆಗೆಂದೇ ಅವರು ಹಾಡಿರುವುದಾಗಿ ಹೇಳಿದ್ದಾರೆ.

''ಶಾಂತಿ ಮತ್ತು ಶಕ್ತಿ'' (ಕವನ-೨೧) ಕವನವು ಗೊಮ್ಮಟ ಹಾಗೂ ಸ್ಟಾಲಿನ್ ಕುರಿತಂತೆ ಇದೆ. ಗೊಮ್ಮಟನನ್ನು ಶಾಂತಿಯ ಪ್ರತೀಕವಾಗಿ, ಸ್ಟಾಲಿನ್‌ನನ್ನು ಶಕ್ತಿಯ ಪ್ರತೀಕವಾಗಿ ಬೇಂದ್ರೆ ಬಣ್ಣಿಸಿದ್ದಾರೆ. ಸ್ಟಾಲಿನ್ ಬಡತನದ ಅಂತ್ಯಕ್ಕೆ ನಿಂತ ಶಕ್ತಿಯಾದ್ದರಿಂದ ಇವನ ಬಗ್ಗೆ ಬೇಂದ್ರೆ ಹೇಳುತ್ತಾರೆ :

''ಸ್ಟಾಲಿನ್ ಬಡವರ ಬಂಧು
ಇದನ್ನು ಮೊದಲು ಒಪ್ಪಿ ಬಂದು
ಆಗ ಮಾತ್ರ ಎಲ್ಲಾರೂ ಒಂದು
ಇಲ್ಲಾ ಅಂದ್ರೆ ಒಪ್ಪಸ್ತೇನಿ ಕೊಂದು''

- ಕವನ - ೨೧ - ''ಶಾಂತಿ ಮತ್ತು ಶಕ್ತಿ''

''ಶ್ರೀಮಂತಿಗೆ ಗೊನೆ ಬಂತಲ್ಲಾ
ಬಾಳಿಗಿಡ ಕಡೀ ಬೇಕಲ್ಲಾ
''ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ
ಮಾಧವನೀತನ್ ಪೆರನಲ್ಲಾ''
ಸ್ಟಾಲಿನ್ ಇಂದೂ ಇಹನಲ್ಲಾ''

- ಕವನ - ೨೨ ''ಯಾರು ಅಂತಾರ?''

ರಷ್ಯಾದಲ್ಲಿ ಬಂಡವಾಳಶಾಹಿ ವ್ಯವಸ್ಥೆಯನ್ನು ಅಂತ್ಯಗೊಳಿಸಿದ ಸ್ಟಾಲಿನ್ ಅಮರನೆಂಬುದನ್ನು ಬೇಂದ್ರೆ ಬಿಂಬಿಸುತ್ತಾರೆ. ಕನ್ನಡದಲ್ಲಿಯ ಅತ್ಯಂತ ಪ್ರಾಚೀನ ಶಾಸನ ಬೋಧಿಸುವಂತೆ, ಸ್ಟಾಲಿನ್ ಸಾಧುಗಳಿಗೆ ಸಾಧುವಾಗಿ, ಮಾಧುರ್ಯದಿಂದ ನಡೆದುಕೊಂಡು, 'ಕಲಿಯುಗ ವಿಪರೀತನ್' ಆಗಿ ವೈರಿಸಂಹಾರಕ್ಕೆ ಕಂಕಣತೊಟ್ಟ ಬಗೆಯನ್ನು ಬಣ್ಣಿಸುತ್ತಾರೆ. ಈ ಕವನವನ್ನು ಬೇಂದ್ರೆಯವರು ಸ್ಟಾಲಿನ್ ಮರಣವಾದ ದಿನ ಈ ಅಮರನ ನೆನಪಿಗೆಂದು ಬರೆದ ಕವನ ''ಯಾರು ಅಂತಾರ?.'' ಇದರ ಪ್ರಾರಂಭ ಹೀಗಿದೆ :

''ಯಾರು ಅಂತಾರ ಸ್ಟಾಲಿನ್ ಸತ್ತಾ?
ಪ್ರಾಣಾಶ್ವದ ವಾಯು ಹಾರಿದತ್ತಾ
ಹಾರಿದ। ಎಲ್ಲಾರ್ನೂ ನುಂಗಿ ಒಂದಾದಾ''

೫) ಜೀವನ ಸಿದ್ಧಾಂತ :

ಈ ಕವನ ಸಂಕಲನದ ಐದನೆಯ ನೆಲೆ ''ಜೀವನ ಸಿದ್ಧಾಂತ. ''ಆಗು ದೀಪ'' (ಕವನ-೬೨) ಹಾಗೂ ''ಕವಿ'' (ಕವನ-೭೮) ಇವು ಅವರ ಜೀವನ ಸಿದ್ಧಾಂತವನ್ನು ಬಿಂಬಿಸುತ್ತವೆ.

''ಆಗು ದೀಪ, ಬೇಕು ದೀಪ, ಬಾ ಸಮೀಪಾ
ಎಂಬ ಒಲವೇ ಜಗದ ಭೂಪಾ''
....
ಪಾತ್ರ ಪಾತ್ರ ಸ್ತುತ್ಯವಾಗಲು
ದೀಪ ದೀಪಕೆ ಕರೆವುದು''

ಈ ಕವನವು ಬೇಂದ್ರೆಯವರ ಒಲವಿನ ಸಿದ್ಧಾಂತವನ್ನು ಪ್ರತಿಪಾದಿಸುತ್ತದೆ. ಒಲವು ದೀಪದಂತೆ ದೀಪಗಳನ್ನು ಬೆಳಗುತ್ತಾ ಹೋಗಬೇಕು, ಆಗ ಒಲವೇ ಜಗದ ಭೂಪ ಆಗಲು ಸಾಧ್ಯ ಎಂಬ ಅಮರ ಸಂದೇಶ ಇಲ್ಲಿ ಅಡಕವಾಗಿದೆ.

''ಕವಿಗಳು ಆಗಿ ಹೋಗ್ಯಾರ
ಇನ್ನೂ। ಆಗವ್ರೂ ಇದ್ದಾರ।
ಅವರವರ ಕವಿತೆ। ಹೊಚ್ಚ ಹೊಸಾವು
ಇರ್ತಾವ। ಇರಬೇಕು। ನಿತ್ಯ ನೂತನಾ''
....
....
''ಬೀಜಗಳನ್ನ ಬಿತ್ತತಾನ ಕವಿ। ಬೆದೆಯರಿತು
ಸಾಕ್ಷಾತ್ಕಾರದ ಹಾದಿ ತೋರಸ್ತಾನ। ಒಂದಾಗಿ ಬೆರೆತು''

ಹೊಸ ಸಮಾಜದ ಆವಿರ್ಭಾವಕ್ಕೆ ಕವಿಗಳ ಪಾತ್ರವನ್ನು ಬಿಂಬಿಸುವ ಕವನ ಇದು. ಕವಿತೆಯು ಹೊಚ್ಚ ಹೊಸವಿರಬೇಕು, ನಿತ್ಯನೂತನಾ ಆಗಿರಬೇಕು. ಈ ರೀತಿಯ ಬೀಜಗಳನ್ನು ಬೆದೆಯರಿತು ಬಿತ್ತುವ ಕವಿ ಮಾತ್ರ ಹೊಸ ಸಮಾಜದ ಆವಿರ್ಭಾವಕ್ಕೆ ಕಾರಣಕರ್ತನಾಗಬಲ್ಲ ಎಂಬ ಜೀವನ ಸಿದ್ಧಾಂತ ಇಲ್ಲಿ ಪ್ರತಿಪಾದಿತವಾಗಿದೆ.

೬) ಸಂಖ್ಯಾ ಸಿದ್ಧಾಂತ ದರ್ಶನ :

ಈ ಕವನ ಸಂಕಲದಲ್ಲಿಯ ಆರನೆಯ ನೆಲೆ ಸಂಖ್ಯಾ ಸಿದ್ಧಾಂತ ದರ್ಶನ. ''ಓಂ ಭವತಿ ಭಿಕ್ಷಾಂದೇಹಿ'' (ಕವನ-೯೭), ''ಅಥಾ ತೋऽ ಆತ್ಮ ಜಿಜ್ಞಾಸಾ'' (ಕವನ-೯೮), ''ಸಂಖ್ಯಾ ಯೋಗ ನಿಷ್ಠೆ'' (ಕವನ-೯೯) ಈ ಮೂರು ಕವನಗಳು ಬೇಂದ್ರೆಯವರ ಸಂಖ್ಯಾ ಸಿದ್ಧಾಂತ ದರ್ಶನದ ಪ್ರತೀಕವಾಗಿವೆ.

''ಈ ಸಂಖ್ಯಾಯೋಗ'' ಸಂಕೇತಗಳಿಂದ ನನಗೆ
''ಹೃದಯಸ್ಥ'' ಶ್ರೀ ಗುರುದೇವ ಮಾರ್ಗ ಕಂಡಿದೆ
ಅಂಥ ''ಹದ'' ಬಂದವರಿಗೆ
ಕಾಣಬಹುದು ಈ ಮಾರ್ಗ''

- ಕವನ-೯೭-''ಓಂ ಭವತಿ ಭಿಕ್ಷಾಂದೇಹಿ''

೭) ಕಾವ್ಯೋದ್ಯೋಗ :

ಈ ಕವನ ಸಂಕಲನದಲ್ಲಯ ಏಳನೆಯ ನೆಲೆ ''ಕಾವ್ಯೋದ್ಯೋಗ''. ಬೇಂದ್ರೆಯವರಿಗೆ ಕಾವ್ಯವೇ ಉತ್ ಯೋಗವಾಗಿತ್ತು. ಅವರಿಗೆ ಜೀವನವೇ ಕಾವ್ಯ, ಕಾವ್ಯವೇ ಜೀವನ ಎಂಬ ದೃಷ್ಟಿಯಿಂದ ಅವರ ಕಾವ್ಯೋದ್ಯೋಗ ಮಹತ್ವವಾದ ಅಂಶ. ಈ ಸಂಕಲನದಲ್ಲಿ ಮುದ್ರಿಕೆಯುಳ್ಳ ಎರಡು ಕವನಗಳಿವೆ.

''ಕಂಡಿತು ಆರ್ಷ ದೃಷ್ಟಿ
ಕವಿಯದು ಅಲ್ಲ ಸೃಷ್ಟಿ
''ಅಂಬಿಕಾತನಯದತ್ತ'' ವೃಷ್ಟಿ
ಸಮರಸವೇ ಸಮಷ್ಟಿ''

-ಕವನ-೪೨-''ಬಂತಪ್ಪಾ ಪ್ರತಿಮಾ ಕುದುರಿ!''

ಬೇಂದ್ರೆಯವರು ಕನ್ನಡದಲ್ಲಿ ರಚಿಸಿದ ''ಕೊನೆಯ ಹಾಡು'' (ನನ್ನ ಹಾಡು) ಕವನದ ಈ ಕೆಳಗಿನ ನುಡಿ ಅವರ ಕಾವ್ಯೋದ್ಯೋಗದ ಕುರುಹಾಗಿದೆ.

''ರಸವೆ ಜನನ
ವಿರಸ ಮರಣ
ಸಮರಸವೇ ಜೀವನ''

ಇದುವೇ ಬೇಂದ್ರೆಯವರ ಆರ್ಷ ದೃಷ್ಟಿ, ಅಂಬಿಕಾತನಯದತ್ತನ ವೃಷ್ಟಿ

"ಇದು ನನಗೆ ನಾಥಾ-ದತ್ತಾ ಕೊಟ್ಟ ಗಾಥಾ
ಇದು ಅಲ್ಲ ಕಥಾ। ಶುದ್ಧ ಭಾವಗೀತಾ
"ಅಂಬಿಕಾತನಯದತ್ತ"
ಉನ್ಮನದಲ್ಲಿ ಸಂಪ್ರೀತಾ
ನೆನಪಾದದ್ದು ಅನಂತಾ"

- ಕವನ - ೫೫ - "ನೆನಪಾತು ಆಮ್ಯಾಲೆ"

ದತ್ತಾತ್ರೇಯ ರಾಮಚಂದ್ರ ಬೇಂದ್ರೆ ತಮ್ಮ ಸಮಗ್ರ ಜೀವನವನ್ನು "ಔದುಂಬರಗಾಥೆ" ಎಂದು ಬಣ್ಣಿಸಿದ್ದರು. ಅಂತೆಯೇ ಅವರ ಸಮಗ್ರ ಕಾವ್ಯವನ್ನು "ಔದುಂಬರಗಾಥೆ : ವರಕವಿ ಡಾ।। ದ. ರಾ. ಬೇಂದ್ರೆ ಜೀವನ ಮಹಾಕಾವ್ಯ" ಎಂದು ಆರು ಬೃಹತ್ ಸಂಪುಟಗಳಲ್ಲಿ ಪ್ರಕಟಗೊಳಿಸಿರುವುದು. ಕನ್ನಡದಲ್ಲಿ ಅವರು ತಮ್ಮ ಜೀವನವನ್ನು ಔದುಂಬರಗಾಥೆ ಎಂಬುದಾಗಿ ಬಣ್ಣಿಸಿರುವುದನ್ನು ಈ ನುಡಿ ಬಿಂಬಿಸುತ್ತದೆ.

"ಅಂಬಿಕಾತನಯ ಕಟ್ಟಿದಾ ಗಾಥಾ
ವಿಶ್ವನಾಥಾ! ವಿಶ್ವರೂಪಾ!"

- ಕವನ : "ಅಗಾಧ ಗಾಥಾ"

ಇದನ್ನೆ ಇವರು ಮರಾಠಿಯಲ್ಲಿ "ಇದು ನನಗೆ ನಾಥಾ-ದತ್ತಾ ಕೊಟ್ಟ ಗಾಥಾ, ಇದು ಅಲ್ಲ ಕಥಾ!" ಎನ್ನುತ್ತಾರೆ. ಬೇಂದ್ರೆಯವರ ಕಾವ್ಯವು "ಶುದ್ಧ ಭಾವಗೀತಾ" ಬೇಂದ್ರೆ ಭಾವಋಷಿ. ಇವರು ಉನ್ಮನದಲ್ಲಿ ಸಂಪ್ರೀತರಾಗಿ, ಅವತರಣಗೊಳಿಸದ ಕಾವ್ಯ ಕೊನೆಯಿಲ್ಲ ಅನಂತಾ, ಅದಕ್ಕೆ ಅದು ಅಮರ.

"ಬೇಂದ್ರೆ ಕುಟೀರ," ಹುಬ್ಬಳ್ಳಿ
೨-೨-೨೦೦೭
ವರಕವಿ ಡಾ. ದ. ರಾ. ಬೇಂದ್ರೆ ೧೧೧ನೇ ವಾರ್ಷಿಕ ಜನ್ಮ ದಿನ

ಡಾ।। ಕೆ. ಎಸ್. ಶರ್ಮಾ,
ನಿರ್ದೇಶಕರು,
ಬೇಂದ್ರೆ ಸಂಶೋಧನ ಸಂಸ್ಥೆ,

೧ ಹೃದಯ ಗೀತ

೧
ಸಖನ ಶೋಧ ಸಖೀಗಾಗಿ
ಸಖಿಯು ಅವನ ಮುಂದೆ ಹೋಗಿ
ಗಗನ ತುಂಬಾ ಸುತ್ತಾಡಿ ಏನು
ಹೃದಯ ಗೀತ ಇಹುದು
೨
ಋತುಮಾನವು ಒಂದು ತಾಲ
ಚಂದ್ರ, ಪೃಥ್ವಿ ಅದರ ತೋಲ
ಛಂದ ಬಂಧದಲ್ಲಿ ಪ್ರೇಮ
ಮೂರ್ತಿಯಾತು ಮೀರಿ ನೇಮ
೩
ಎರಡೂ ಒಂದು ಆಗದೆ
ಒಂದಕ್ಕೆ ಇಲ್ಲ ಉದಯವು
ಗಗನದಲ್ಲಿ ಗೂಡು ಬೇಕು
ಅಲ್ಲಿ ಇರಲಿ ಜೀವವು
೪
ಅಜೀವ ಜೀವ ಪಡೆವುದು
ಹರ್ಷ ಚಿಮ್ಮಿ ನೆಗೆವುದು
ಆರು ಕಣ್ಣು ಕೂಡಿದಲ್ಲಿ
ಇಂದ್ರವನದಾನಂದವು
೫
ನೃತ್ಯ ಗೀತ ವಾದ್ಯ ಕೂಡಿ
ಆತು ಶ್ರಾವ್ಯ ಸಂಗೀತವು
ಜೀವಂತಿಕೆ ಸಹಜ ಸಾಧ್ಯ
ನಾಳೆ ಬಾಳಿನ ಸೂತ್ರವು

೬

ವರ್ತಮಾನದಲ್ಲಿ ಇರಲಿ
ಅಮೃತರುಚಿಯ ಕೂಜನಾ
ಗೂಡಿನಲ್ಲಿ ಜೀವ ಅರಳಿ
ಗಗನವಾಯಿತು ಪಾವನಾ

ರಚನೆ : ೧೯೬೬

ಭಾವ : ಸಖಿ-ಸಖಿ ಭಾವದ ಗೀತ. ಮೂಲ ಶೀರ್ಷಿಕೆ : ಗಗನದಾಗ ಗೂಡು

ವಿಶೇಷ : ನುಡಿ - ೪ : ಆರು ಕಣ್ಣು ಕೂಡಿದಲ್ಲಿ=ತಂದೆಯ ೨ ಕಣ್ಣು+ತಾಯಿಯ ೨ ಕಣ್ಣು+ಮಗುವಿನ ೨ ಕಣ್ಣು ಕೂಡಿದಾಗ, ಅಲ್ಲಿ ಇಂದ್ರನ ವನದ ಆನಂದ ಕಾಣಬಹುದು. ಇದು ಸಂತಾನದ ಮಹತಿ.

೨ ಭಾವಗೀತ ಸುನೀತ

ಅಂಕಡೊಂಕ ರೀತಿಯಲ್ಲಿ ಭಾವನದಿ ಹರಿಯಲಿ
ಪ್ರಾಣ-ದೇವಗೆ ಬಂಧವೇಕೇ? ಸ್ವಚ್ಛಂದ ಗಾಳಿ ಸುಳಿಯಲಿ
ಚಿಲಿಪಿಲಿ ಮಾಡುವ ಕವಿಗಳೆಲ್ಲಾ ಮುಕ್ತಛಂದ ಹಾಡಲಿ
ಶ್ರಾವಣದ ಮಳೆ! ಸಹ್ಯಾದ್ರಿಶಿಖರ ಸ್ನಾನ ಮಾಡಲಿ.

ನರ್ತಕಿಗೆ ವೈಯ್ಯಾರವಿರಲು, ನರ್ತನಕ್ಕೆ ಅಡೆತಡೆ ಏನು?
ಭಾಷಣ ಸ್ವಾತಂತ್ರ್ಯವಿರದಿರೆ, ಬಲ್ಲವರು ಬಾಯಿ ತೆಗೆವರೇನು?
ಬಿದಿರು ಖಂಬದ ಮೇಲೆ, ಬಳ್ಳಿ ಹಬ್ಬಿ ಬಿಡಲೇನು?
ಚಿಗಿಯುವುದೇ ಬಳ್ಳಿ? ಕೊರಡು ಮಾಡೀತೇನು?

ಶಕ್ತಿ ಕೂತಳು ತಪಕೆ, ಶಿವಧ್ಯಾನದೊಳು ಮಗ್ನ
ದ್ವೈತ ಭಕ್ತಿಯು ಭಗ್ನ, ಅದ್ವೈತ ಮಾಡಿತ್ತು ಲಗ್ನ
ಸುರೂಚಿಯ ನಡತೆ, ಸುನೀತಿಯ ಬಗೆ ಬಲುಹು
ಉತ್ತಮನ ಸೌಂದರ್ಯಕ್ಕೆ ಹಿಡಿದ ಕನ್ನಡಿ ಹರಳು!

ಭಾವ ರತ್ನಗಳ ಹೊಳಪು ವಿಚಾರ ಕುಂದಣದಲ್ಲಿ
ಕಳಾಸ ಹೊಂದದೆ ಅವು, ಅದರ ಸ್ಥಾನವದೆಲ್ಲಿ?

ರಚನೆ : ೧೯೧೮

ಭಾವ : ಭಾವ ಮತ್ತು ಬುದ್ಧಿಯ ಸಾಮರಸ್ಯ ಕುರಿತು.

ಶಬ್ದಾರ್ಥ : ಕಳಾಸ=ಬಡಿಗತನದ ಶಬ್ದ. ಕಟ್ಟಿಗೆಯ ಎರಡು ಭಾಗ ಭದ್ರವಾಗಿ ಕೂಡಿಸುವ ಸ್ಥಳ.

೩ ವಧುವಿನ ಆಯ್ಕೆ

ಭಾಗ : ೧

೧
ಮೂಗು, ಕಣ್ಣು, ಕಿವಿ
ಅದರದರ ಸ್ಥಾನದಲ್ಲಿ
ನಡೆ, ನುಡಿ ಮತ್ತು ಬಣ್ಣಾ
'ವಿಶೇಷ' ಅಂತ ಏನೂ ಇರಲಿಲ್ಲಾ!

೨
ಎತ್ತರ, ತೂಕ ಹಾಗೂ ಅಳತೆ
'ನ್ಯೂ ಪುನಾ' ರೀತಿಯೆ ಮೈತಾಳಿತ್ತು
ನಿಃಶ್ವಾಪ ಅಥವಾ ದುಃಶ್ವಾಪ
ಅಂತೂ ಏನೂ ಇರಲಿಲ್ಲಾ.

೩
ಬ್ಯಾಂಕಬುಕ್ಕಿನ ಲೆಕ್ಕ ಮುಖ್ಯ ಅರ್ಥ
ಉಳಿದದ್ದೆಲ್ಲಾ ತೀರಾ ವ್ಯರ್ಥ
ಕೊಡೋದು, ಕೊಂಬೋದು ಬರೀ ಸ್ವಾರ್ಥ
'ವಿಶೇಷ' ಅಂತ ಏನೂ ಇರಲಿಲ್ಲಾ.

೪
ಶಾಂತ, ಸೌಮ್ಯ , ಭೀಮ
ಮರ್ಯಾದೆ ಕಾಪಾಡೋದು ನಿಃಸೀಮ
ಶುದ್ಧ, ಆದಿಮ ಹಾಗೂ ಅಗ್ರದ ಮಾತು
ಅಂತ ಏನೂ ಇರಲಿಲ್ಲಾ.

ಭಾಗ - ೨

೧
ಹೇಳಕಿ, ಕೇಳಕಿ ಮಾತು ಎಲ್ಲಾ
ಸರ್ಕಾರಿ ಸುತ್ತೋಲೆ ಪ್ರಕಾರ
ಹ್ಯಾಂಗೂ ಹೊರಳಾಡಸೋ ಹಿಕಮತ್ತು
'ವಿಶೇಷ' ಅಂತ ಏನೂ ಇರಲಿಲ್ಲಾ.

೨

ತಂದಿ ಮತ್ತ ತಾಯಿ ರಸಾ ಕಲಿಸಿ
ಮಾಡಿದ ಮುದ್ದೀಯೊಳಗ ಕಸಾಕೂಡಿದ
ದೋಷಾ-ಸಬಲೆ ; ಗುಣಾ-ಅಬಲೆ !
ಅಂತೂ ಏನೂ ಇರಲಿಲ್ಲಾ.

೩

ಫೋಟೋ, ಫರಾಳ, ಡೌಲು, ಶೃಂಗಾರ
ಮಂತ್ರ, ತಂತ್ರ ಎಲ್ಲಾಽ ನಾಟಕೀಯ
ಸುಳ್ಳು ಸುಳ್ಳಽ ಒಂದು ಮಂಗಲಾಷ್ಟಕ, ಅಕ್ಕೀಕಾಳು !
ಏನೇನೂ 'ವಿಶೇಷ' ಇರಲಿಲ್ಲಾ.

೪

ಬ್ಯಾಸರಿಕಿ ಕಣ್ಣು ಮುಚ್ಚಿಸಿದವು
ಸಾತ್ವಿಕತೆ ಅಂಬೋದಽ ಲೋಪ
ತೂಗಾಡೋ ಬಾಳೀ ಗೊನಿಗೆ ಇರುವ
ಕಾಂತಿನೂ ಇರಲಿಲ್ಲಾ 'ವಿಶೇಷ'

ಭಾಗ - ೩ !

೧

ಎಲ್ಲಾ ಢೋಂಗೀ ಸೋಗಲಾಡಿತನಾ !
ಸೆರಗು ಬೀಸೋದೇನು ? ಹುಬ್ಬು ಹಾರಿಸೋದೇನು ?
ಆಪ್ತ್ಯದ ಹಸಿ ಇಲ್ಲದ, ಮಾತೇನು ?
ಇಂಥಾದರಾಗ 'ವಿಶೇಷ' ಏನು ?

೨

ರೂಢಿಗೆ ಅನುಸರಿಸಿ ನಾಕು ಮಾತು
ಅದರಾಗ ರುಚಿಗೆ-ಗಾದೀಮಾತು
ಸಿನೇಮಾ ಪ್ರಸಂಗದ ನೆನಪಿನ ಮಾತು
ಇವು 'ವಿಶೇಷ' ಅನಬೇಕೇನು ?

೩

ವಿದ್ಯಾಭ್ಯಾಸಕ್ಕ ಸರ್ಟಿಫೀಕೇಟು
ಆತ್ಮವಿಶ್ವಾಸನಽ ಇಲ್ಲಾ, 'ಡೆಸ್ಪಿನೀ ಫೇಟು'
ಆಡಂಬರಕ್ಕಽ ಹೆಚ್ಚಿನ ರೇಟು
ಇವಽ 'ವಿಶೇಷ' ! ಮತ್ತಿನ್ನೇನು ?

೪
ಶಾಂತ ಜೀವನ ಮರತs ಬಿಡೋದು
ಜನ್ಮಾಂತರದ ಪಾಪ ನೆನಸಿಕೊಂಬೋದು
ಅಭಿರುಚಿ ಅಂಬೋದು ಉಪ್ಪಿನಷ್ಟೂ ಇಲ್ಲಾ
'ವಿಶೇಷ' ಅಂತ ಹೇಳಲಿ ಏನು ?

ಭಾಗ - ೪ :

೧
ಹೇಳಲಿಕ್ಕೆ ಅಷ್ಟs ಬೀಗತನಾ
ಸುತ್ತೂಮುತ್ತೂ ಬಿಗೀತನಾ
ಬಿಡುಗಡೆಯ ಮುಹೂರ್ತ ಕಾಯೋದು
ಮತ್ತೇನು 'ವಿಶೇಷ' ಮಣ್ಣು!

೨
ಖೊಟ್ಟಿ ಸವಿಮಾತಿನ ಬೆನ್ನು-
ಹತ್ತಿದರ ಮುಗದs ಹೋತು
ಕಾರಸ್ಥಾನ ತಿಳಿಯೋದು ಕಷ್ಟ
ಪ್ರಯತ್ನ ಮಾಡೋದs 'ವಿಶೇಷ'

೩
ಕಣ್ಣು, ವಾತ್ಸಲ್ಯಕ್ಕ ತೊಟ್ಟಿಲಾ ಆಗಬೇಕು
ತುಟಿ, ಜೇನು ಸವರಿದ ರುಚಿ ಕೊಡಬೇಕು
ಹೃದಯ, ಸಂಜೀವನ ಶಕ್ತಿ ತಾಳಿರಬೇಕು
ಇದಕ್ಕ ಅಂತಾರಪ್ಪಾ 'ವಿಶೇಷ'

೪
ಏನು ವಿಶೇಷ ? ಏನು ವಿಶೇಷ ?
ನೂರು ಸಲಾ ಹಣಬಡಕೊಂಬೋದು
ಮಮತಾಮಯಿ, ತಾಯಿ ಎಂದ ಕಣ್ಣು
ತೆಗೀತಾಳೋ ? ಅಂತ ದಾರಿ ಕಾಯೋದು
ಈ ಪುಣ್ಯಾ ಪಡಕೊಂಡು ಬಂದದ್ದs 'ವಿಶೇಷ'.

ರಚನೆ : ೧೯೧೮

ಭಾವ : ೧೯೧೮ರ ಪೂರ್ವದಲ್ಲಿ ಪುಣೆಯಲ್ಲಿ ವಧುಪರೀಕ್ಷೆ ಹೇಗೆ ನಡೆಯುತ್ತಿದ್ದವು ಎಂಬುದನ್ನು ಕುರಿತು.

ಶಬ್ದಾರ್ಥ : ಸೋಗಲಾಡಿತನಾ=ಸುಳ್ಳು ಸುಳ್ಳು ಅಭಿನಯ.

೪ ಕಿಡಿ

೧

ಒಬ್ಬಳಿದ್ದಳು ಬಾಲವಿಧವೆ, ಅವಳ ಹೆಸರು ಪ್ರೇಮಾ!
ಎಂಥಾ ಹೆಸರಿಗೆ, ಎಂಥಾ ಸ್ಥಿತಿಗತಿ, ರಾಮಾ! ರಾಮಾ!

೨

ಹುಚ್ಚ ಎಮ್ಮಿ ಮೂಸಿನೋಡ್ತಿತ್ತು ಸತ್ತ ಹೆಣಾ
ಬಂಜೆಗೆ ಹಾಲು ಹ್ಯಾಂಗಪ್ಪಾ ಗೌಳಿಗಾ! ದಣೇಬ್ಯಾಡಣ್ಣಾ

೩

ಹಿಂದುಸ್ತಾನದಾಗ ಬೆಳಿಗೆ ಇಲ್ಲಾ ಕೊರತಿ, ಈಗ ಬರಗಾಲ ಭರತಿ
ಮುವತ್ತುಮೂರು ಕೋಟಿ ಬದಕೋದು ಹ್ಯಾಂಗ ? ಇದಽ ಇಂದಿನ ಚಿಂತಿ.

೪

ಬಂಗಾಲ ಪ್ರಾಂತ ಕಂಗಾಲ ಆತು, ಎಲ್ಲಿ ಇದ್ದೀರಿ ನೀವು ?
ಮರಣದ ಅಂಜಿಕಿಗೆ ಮೋಕ್ಷನಽ ಇಲ್ಲಾ, ಹೋರಾಡಬೇಕು ನಾವು.

೫

'ನಾಯಿಗೆ ಹಾಲಿಲ್ಲಾ' ಅಂತಾಳ, ದಯಾಮಯಿ ಮ್ಯಾಡಂ ಬಾಯಿ
ನೂರಾರು ಜನರು ಇಲ್ಲೆ ದಿನಾ ಸಾಯ್ತಾರ, ಬದುಕಿಸೋ ಅವರಿಲ್ಲಾ ತಾಯಿ.

೬

ದುಡಿದೂ ದುಡಿದೂ ತಿನತಾರ ಸೆಗಣಿ, ಇಲ್ಲಿಯ ಈ ಜನಾ
ನೋಡಿಯೂ ನೋಡದಽ ಇರ್ತಾರಲ್ಲಾ! ಇದು ಶುದ್ಧ ಕತ್ತೀತನಾ.

೭

ಮೈ ಬಣ್ಣಾ ನೋಡಿ ಜನರನ್ನ ಗುರುತಿಸೋ ಕಣ್ಣು ಇರೋ ತನಕಾ
ಅಸುರ ದಾನವರು ಇದ್ದಽ ಇರ್ತಾರ, ನಾವಽ ಇವರಿಗೆಲ್ಲಾ ಜನಕಾ.

೮

ಒಂದೇ ನೆಲಾ, ಒಂದೇ ಜಲಾ, ಒಂದೇ ಗಾಳಿಯ ಬಲಾ
ಜನರನ್ನಷ್ಟಽ ಬಿಡಿಬಿಡಿ ಮಾಡಿ, ವೈರ ಬಿತ್ತಿದವರು ಯಾರಲಾ?

೯

ಹೊಲಾ ಅದ, ಬೀಜಾ ಅವ, ಬಿತ್ತಾವರೂ ಇದ್ದಾರಲ್ಲಾ
ಪ್ರಾಣ ಅದ, ಹಸಿವಿ ಅದ, ತಲೀ ಹಿಡತಾ ತಪ್ಪ್ಯದಲ್ಲಾ!

೧೦

ದುರ್ಬೀಣ ಹಚ್ಚಿ ದೂರ ದೂರ ಏನು ನೋಡ್ತಿರಿ?
ಕಾಲಿನ ಹತ್ತರಽ ಬಂದದ ಪಾಪದ ನೆರಿ.

ರಚನೆ : ೧೯೧೮

ಭಾವ : ಮರುಕದ ಭಾವಗೀತ. ಹಿಂದುಸ್ಥಾನದ ಸ್ಥಿತಿಗತಿ ಕುರಿತು.

೫ ಚಿನ್ನಾ !

ಚಿನ್ನಾ ! ನೀ ಶೀಲವತಿ, ಗುಣವತಿ ಆಗಿರುವಿ ವಿದ್ಯಾವತಿ
ಪ್ರೇಮದ ಬೆಲೆ ಅರಿತರೂ, ನಿನಗೆ ಸಿಕ್ಕದ್ದು - ಊರ್ದ್ವಗತಿ
ಗುಣಗಳಿದ್ದೂ ಕಂಡಿತು ಕೊರತೆ, ಸಂದಿತ್ತು ವರದಕ್ಷಿಣಾಽ
ಕಾಮ ಮೆತ್ತಿದ ಮನಕೆ, ಕಾಣಲಿಲ್ಲಾ ನಿನ್ನ ವಧುಲಕ್ಷಣಾಽ

ಲಗ್ನದ ಪ್ಯಾಟಿಯೊಳಗ, ಧಾರಣಿಗಳಿಗಿದೆ ಏರಾಟಾಽ
ಹೃದಯಕ್ಕ ಬೆಲೀನಽ ಇಲ್ಲಾ, ಸತ್ತದ್ದೇ ಶ್ರೇಷ್ಠ ಚೀರಾಟಾಽ
ಕೈ ಹಿಡಿದವನೇ ಯಮಾ ! ಅವನಿಂದ ಪಡೆಯೋದು ಏನು ?
ಸಖ್ಯ, ಸ್ನೇಹ ಎಲ್ಲಾ, ಆರಿದ ದೀಪಾ, ಕಣ್ಣು ಕತ್ತಲಿ, ಮತ್ತೇನು ?

ಏರಿದ ಜ್ವರಾ ಇಳೀಲೇ ಇಲ್ಲಾ, ಚಿತೆ ಆಗಿತ್ತು ನಿನ್ನ ಹೆಣಾ
ಚಿನ್ನಾ ! ಎಂಬ ಹೆಸರಿಗೆ ಶಿಕ್ಷೆ, ಅಗ್ನಿಪರೀಕ್ಷೆಯ ಋಣಾ
ಹುಚ್ಚು ನಾಯಿ ಆಗಿತ್ತು ನನ್ನ ಬಾಯಿ, ಎಲ್ಲಿ ಹುಡುಕಲಿ ಪ್ರೇಮಾ
ವರದಕ್ಷಿಣೆಯ ಸಾವು ಇಂದೂ ಅದ. ಅದಕ್ಕ ಇಲ್ಲಾ ನೇಮಾ.

ಕುಟುಂಬದ ಹುರಿ ಸುಟ್ಟು ಹೋಗಿ, ಅಪೂಟಽ ಇಲ್ಲಾ ದಯಾ ಮಾಯಾ
ಕೈ ಹಿಡಿದು ಒಮ್ಮೆ ಹೇಳಿಬಿಡು ಯಮಗ, ಸಾಕು ಈ ಸ್ತ್ರೀ ವಿಕ್ರಯಾ.

ರಚನೆ : ೧೯೧೮

ಭಾವ : ವರದಕ್ಷಿಣೆಯ ಸಾವಿನಿಂದ ನೊಂದು ಬರೆದ ಕವನ. ಈ ಸಮಸ್ಯೆ ೧೯೧೮ಕ್ಕೂ ಇತ್ತು, ಇಂದೂ ಇದೆ. ಪರಿಹಾರ?

೬ ನೋಡಿರಿ ಬಡಮಕ್ಕಳ ಬಾಳು

ನೋಡಿರಿ, ನೋಡಿರಿ, ಬಡಮಕ್ಕಳ ಬಾಳು
ಎಲ್ಲೆಲ್ಲೂ ವಿಶ್ವದ ಈ ಗೋಳು ॥ ಪಲ್ಲವಿ ॥
೧
ಕಣ್ಣೀರಿನಿಂದಲೆ ಗಾಯ ಒರಿಸುವರು
ಎಂಥ ಕಷ್ಟಕೂ ನಗುಮುಖ ಇವರು
ಪ್ರೇಮದಿ ಉಬ್ಬುವರು ॥ ನೋಡಿರಿ...............
೨
ತಿನ್ನಲು ಸಿಗದೆ ಅನ್ನದ ಅಗಳು
ಹೃದಯ ತುಂಬಿದೆ ಸುಖದಾ ಅರಳು
ಮಮತೆ, ಮಾಯೆ, ಸರಳೇ ಸರಳು ॥ ನೋಡಿರಿ...............
೩
ಯುದ್ಧದ ಕರೆ ಬರೆ, ಮುಂದಾದವರು
ದೇಶದ ಒಲವಿನ ಸೆಲೆಯಾದವರು
ಈ ಹಸಿಯಿಂದಲೆ ಹಸಿರಾದವರು ॥ ನೋಡಿರಿ...............
೪
ನಿರ್ಜಲವಾಗಿ ತುಟಿ ಒಣಗಿವೆ
ಆದರೂ ಅನುಕಂಪದ ಇರವೆ
ಜೀವಕೆ ಜೀವಾ ಕೊಡುವಾ ಒಲವೆ ॥ ನೋಡಿರಿ...............
೫
ಚುಟುಕುಬುಕುಟಿನಾ ಈ ಸಂಸಾರಾ
ಸಾಗಿಸಿ ತೋರುವ ಘನ ಗಂಭೀರಾ
ಪ್ರಳಯ ಬೆಂಕಿಗೆ ಬಲಿಯಾದವರಾ ॥ ನೋಡಿರಿ...............
೬
ಬಡತನವೆಂಬುದು ಕಾಲನ ಜಾಲಾ
ಎಂದೂ ಮುಗಿಯದ ಹನುಮನ ಬಾಲಾ
ಸಂಹರಿಸಲೆಂದೇ ಹಾಡಿದ ಈ ಹಾಡಾ ॥ ನೋಡಿರಿ...............

ರಚನೆ : ೧೯೪೩

ಭಾವ : ಭಾರತಕ್ಕೂ ಬಡತನಕ್ಕೂ ಹಳೆಯ ಹಂಬಂಧ. ಈ ಪರಿಸ್ಥಿತಿಯನ್ನು ಕುರಿತು.

ಶಬ್ದಾರ್ಥ : ಚುಟುಕುಬುಕುಟಿನಾ=ಅತ್ಯಂತ ಚಿಕ್ಕ ಪ್ರಮಾಣದ

೭ ಮಹಾರಾಷ್ಟ್ರದ ಸಂತರಿಗೆ ವಂದನೆ

೧
ಮೂರ್ತ ಸ್ವರೂಪವು ಅದ್ಭುತ ಗೂಢಾ
ವಿಶಾಲವೃಕ್ಷವು ಅರಳಿತ್ತು ನೋಡಾ
ಜೀವದ ಭಾವಕ್ಕೆ ಸಾಕ್ಷಿಯಾಗಿತ್ತು.
೨
ನಿವೃತ್ತಿನಾಥ ಮೌನಿ, ಜ್ಞಾನದೇವ ಜ್ಞಾನಿ
ಸಾಮರಸ್ಯಕ್ಕೆ ಸೋಪಾನದೇವಾ
ಮುಕ್ತಾಬಾಯಿಯ ಕ್ರಮ-ಮುಕ್ತಿಯ ಗಾನಾ.
೩
ಪುಂಡಲೀಕ, ಭಕ್ತಿಯಿಂದ ಕೈಮುಗಿದಾ
ವಿಠ್ಠಲನು ಇಟ್ಟಂಗಿ ಆಧರಿಸಿದಾ
ವಿಠ್ಠಲನ ಶಿರದಲ್ಲಿ ಶಿವನಿಗೂ ಸ್ಥಾನಾ
೪
ನಾಮದ ಸ್ತವನಾ, ನಾಟ್ಯವೂ ಗಹನಾ
ತುಕಾರಾಮನ ತಲ್ಲೀನತೆಯ ಗಾನಾ
ರಾಮದಾಸರ 'ದಾಸಬೋಧ' ಅಖಂಡ ಧ್ಯಾನಾ.
೫
ಮಹಾರಾಷ್ಟ್ರದ ಈ ಮೂರ್ತಿಗಳು
ಚಿತ್-ಆಕಾಶದ ಬೆಳಕು !
ಅಮೃತ ಅಮೃತ ಲಹರಿ ನಿಜಕ್ಕೂ.
೬
ಈ ಬೆಳಕೇ ಜ್ಯೋತಿರ್ಲಿಂಗ
ಪ್ರಕಟವಾಗುವವು ಅಷ್ಟಾಂಗ
ಅವರಿಗೆ ಅರ್ಪಿಸುವೆ ಸಾಷ್ಟಾಂಗ.

ಭಾವ : ಮಹಾರಾಷ್ಟ್ರದ ಸಂತರ ಕಾವ್ಯದ ಹಿರಿಮೆ ನೆನೆದು ಸಲ್ಲಿಸಿದ ವಂದನೆ.

ವಿಶೇಷ : ಸಾಷ್ಟಾಂಗ ನಮಸ್ಕಾರ=ಎದೆ, ಶಿರಸ್ಸು, ದೃಷ್ಟಿ (ಕಣ್ಣು), ಮನಸ್ಸು, (ಮೂಗು) ಮಾತು (ತುಟಿ), ಪಾದಗಳು, ಕೈಗಳು, ಮೊಳಕಾಲುಗಳನ್ನು ನೆಲಕ್ಕೆ ಸ್ಪರ್ಶಿಸಿ ಮಾಡುವ ನಮಸ್ಕಾರ ಪದ್ಧತಿ. ಗುರುಗಳಿಗೆ, ಹಿರಿಯರಿಗೆ, ಸಾಧು ಸತ್ಪುರುಷರಿಗೆ ಮಾತ್ರ ಈ ರೀತಿಯಲ್ಲಿ ನಮಸ್ಕರಿಸುವುದು ಭಾರತೀಯ ಸಂಸ್ಕೃತಿಯ ಸಂಪ್ರದಾಯ.

೮ ಎಚ್ಚರಿಕೆ

೧

ಎಲ್ಲಿದ್ದೀರ್ಯಪ್ಪಾ, ಎಲ್ಲಿದ್ದೀರಿ ?
ಸುಂಸುಮ್ನS ಗುದ್ದ್ಯಾಡ್ತೀರಿ
ಒಬ್ಬರೆದೀಮ್ಯಾಲೆ ಇನ್ನೊಬ್ಬರು ಕೂಡ್ತೀರಿ
ಐಕ್ಯ ಅಂದ್ರ ಕಲಸುಮೇಲೋಗರ ಅಲ್ಲಾ
ಯಾರಿಗ್ಯಾರು ಕೇಳ್ಯಾರ ?

೨

ಹರಿಕಥಾ ನಿರೂಪಣೆ-ಬಾಯ್ಬಡಕತನಾ ಅಲ್ಲಾ
ರಾಜಕಾರಣಾ ಬರೀ ಏರಾಟದ ಹಾಕ್ಯಾಟಾ ಅಲ್ಲಾ
ಝುಣಕಾ ಭಕ್ಕರಿ ತಿನ್ನಾವರ್ಯಲ್ಲಾ ಹರಿಜನರಲ್ಲಾ.

೩

ಜನತೆಯ ಮುಂದಾಳು ಬಿದ್ದಲ್ಲೇ ಗೊರಕಿ ಹೊಡೀತಾರ
ಮನಸಿನ ಮುಂದಾಳು ಕೂತಲ್ಲೇ ಬೊಗಳತಾರ
ಹಣದ ಮುಂದಾಳು ಇದ್ದಲ್ಲೇ ಫೂತ್ಕಾರ ಬಿಡ್ತಾರ
ತಲೆಎತ್ತಿ ನಿಂತ ಈ ಮಹಾರಾಷ್ಟ್ರದಾಗ !

೪

ತಲೆಎತ್ತಿ ನಿಂತ ಈ ಮಹಾರಾಷ್ಟ್ರದಾಗ-
ರಾಮದಾಸರು ನಿಂತೇ ಇದ್ದಾರ
ಒಂದ ಘಳಗಿ ಕೂಡಲಿಕ್ಕೆ ಅವಕಾಶನS
ಇಲ್ಲಾ ಸಂತರಿಗೆ !
ಹೀಗಿದ್ದೂ ದೊಡ್ಡದೊಡ್ಡ ಕನಸು ಕಾಣ್ತಾರ !

೫

ತಲೆಎತ್ತಿ ನಿಂತ ಈ ಮಹಾರಾಷ್ಟ್ರದಾಗ-
ಇಟ್ಟಂಗಿ ಮ್ಯಾಲೆ ನಿಂತS ಇದ್ದಾನ ವಿಠ್ಠಲಾ
ತಾಳ, ಮೃದಂಗದ ಭಜನಿ ಜೋರಿನಿಂದ ಸಾಗಿ
ನಾದದ ಜನಜಂಗುಳ್ಯಾಗ ಮುಳಗ್ಯಾನ.

೬

ತಲೆಎತ್ತಿ ನಿಂತ ಈ ಮಹಾರಾಷ್ಟ್ರದಾಗ-
ಶಿವಾಜಿ ಮಹಾರಾಜರ ಕುದುರಿ ನಿಂತS ಅದ
ದ್ವೈತದ ಖುರಪುಟದ ಧ್ವನಿ
ಇಬ್ಭಾಗ ಮಾಡ್ತನS ಅದ ಜನರನ್ನ

೭
ಸತ್ತಮ್ಯಾಲೇ ಸಂತರ ಸಮಾಧಿ
ಇದ್ದಾಗ ಪ್ರತಿನಿತ್ಯ ಸತ್ತ್ವಪರೀಕ್ಷೆ
ಸಮಾಧಿ ಮುಂದಿಟ್ಟ ಪ್ರಸಾದ ಹೊಡ್ಯಾವರೆಲ್ಲಾರೂ
ನಿಃಸತ್ತ್ವ ಖೋಡಿ ಈ ಜನಾ !
೮
ತಲೆಎತ್ತಿ ನಿಂತ ಈ ಮಹಾರಾಷ್ಟ್ರದಾಗ-
ಜಗಳಾ, ಗುದ್ದ್ಯಾಟಾ ಸದಾ ಜಾಗೃತ
ಎಲ್ಲಾರೂ ಸಾಯಲಿಕ್ಕೆ ಗಡಿಬಿಡಿ ನಡಸ್ಯಾರ
ಬಾಳೋ ತಾಳ್ಮೆ ಒಬ್ಬರಲ್ಲೂ ಇಲ್ಲಾ!
೯
ತಲೆಎತ್ತಿ ನಿಂತ ಈ ಮಹಾರಾಷ್ಟ್ರದಾಗ
ಎರಡು ಆಣೆಕ್ಕ ಸಿಗ್ತದ 'ಗೀತಾಯಿ'*
ಕುರುಕ್ಷೇತ್ರದ ಬಿರುಗಾಳ್ಯಾಗ
ಅರ್ಜುನನನ್ನ ನಾಪತ್ತೆ!
೧೦
ಇಲ್ಲೇ 'ಜ್ಞಾನೇಶ್ವರಿ' ಮುಗಿದಿತ್ತು
ಯಥಾರ್ಥದ ದೀಪ ಆರಿತ್ತು
ಅನಂತರ 'ಗೀತಾರಹಸ್ಯ'ನೂ ಡಬ್ಬು ಬಿತ್ತು
ಮಹಾರಾಷ್ಟ್ರದ ಮನೀಮನ್ಯಾಗ ಝುಗಳಾ !
೧೧
ಸತ್ತಾವರ ಬಾಯಿಗೆ ಹಿಡಿ ಮಣ್ಣು
ಅವರ ಹೆಸರಲೇ ಮೆರ್‍ಯಾವರು
ಆ ಶ್ರೇಯಗೀತಗಳನ್ನ ಹಾಡ್ತಾರ
ಇವರಿಬ್ಬರಾಗ ಹುತಾತ್ಮರು ಯಾರು?
೧೨
ಲೋಕಮಾನ್ಯರು ಶಂಖಾ ಊದಿ ಹೋದರು
ಮಹಾತ್ಮರೆಲ್ಲಾ ಕೊನೆಯ ನಮಸ್ಕಾರ ಮಾಡಿದರು
'ಸಾನೇ ಗುರೂಜೀ'ನೂ ಹ್ಯಾಂಗೋ ಸತ್ತರು
ಇವರೆಲ್ಲರೂ ಇದ್ದವರ ಭಾವದಾಗ, ಜೀವಂತ ಇದ್ದಾರ.

೧೩
ಶಬ್ದ ಶಬ್ದಕ್ಕಾಗಿ ಹಾಕ್ಯಾಟಾ, ತಿಕ್ಕಾಟಾ
ಇದರ ಮೂಲಕ ಭಾವನs ಬೊಕ್ಕಬರಲು
ಸತ್ಯವಂತರನ್ನs ಫಾಸಿಗೆ ಕೊಡಾವರು
ಯಾರು ಹೇಳರಿ ?

೧೪
ಭಾವಾ ಅಂಬೋದು ಪ್ಯಾಟೀ ಧಾರಣಿ ಅಲ್ಲಾ
ಭಾವದಾಗs ಉದ್ಭವಿಸೋದು ದೇವಾ !
ಅದರ ಪ್ರಕಟ ರೂಪಾ-ಅನುಭಾವಾ
ಮಹಾರಾಷ್ಟ್ರದ ತುಂಬಾ ಇದರದs ಪ್ರಭಾವಾ !

೧೫
ಏನs ಹೇಳರಿ, ತಲೆಎತ್ತಿ ನಿಂತ ಮಹಾರಾಷ್ಟ್ರದಾಗ
ಬೇಕಾದದ್ದು ಒಂದು ಬಿಟ್ಟು
ಎಲ್ಲಾ, ಎಲ್ಲಾ ಅದ.

೧೬
ಮನೀ ಮನ್ಯಾಗ ಉಪಾಸನೆಯ ಹಾವಳಿ
ಕೇಳಕೊಂಬೋ ಮಾತs ಇಲ್ಲದ ಚಾಳಿ
ಇದರ ಮೂಲಕ ಜನರಾಗ ಐಕ್ಯದ ಬಗ್ಗೆ
ಧ್ಯಾನಾ ಅಂಬೋದs ದಿವಾಳಿ ತೆಗೀತು !

೧೭
ವಿನೋಬಾ ಅಡ್ಡಾಡಿದ್ದs ಅಡಾಡಿದ್ದು - ಸಂಚಾರ
ಅದರ ಬಗ್ಗೆ ಮಾತಾಡಲೇಬಾರದು, ಇದು ಮುಖ್ಯವಿಚಾರ
ಭಾರತದ ತುಂಬಾ ಖ್ಯಾತಿ 'ಬಾಬಾ', 'ಬಾಬಾ' ಅಂತ
ವಾರಸದಾರರು ಯಾರು ? ಎಂಬುದೇ ಪ್ರಶ್ನೆ.

೧೮
ಇಂದ, ಭಜನೀ ಮ್ಯಾಳಗಳಿಗೆ ಕೊರತಿ ಇಲ್ಲಾ
ಸ್ವಜನರು ಸಿಗೋದs ಕಠಿಣ ಆಗ್ಯದ
ಬರಗಾಲ ಅಂದರೂ ಸರಿ.
ಸ್ವಧರ್ಮಕ್ಕs ಸುಕಾಲ ಅನ್ನಬಹುದು.

೧೯
ದಾನದ ಮಾತು ಎತ್ತಿದರ ಘಳಕಿ ಶೂನ್ಯ
'ಸರ್ವೋದಯ'ದ ಹೆಸರಿನಿಂದ ಸ್ವಾಹಾಕಾರಾ
ಶ್ರೀಮಂತರಾಗಲಿಕ್ಕೆ ತಡಾನs ಇಲ್ಲಾ
ಈ ಕಾರ್ಯಕ್ಕ ಗುರು ಯಾರು?
೨೦
ಎಲ್ಲ ಪ್ರಸಂಗಗಳಲ್ಲಿ ವಿಜ್ಞಾನ ಎತ್ತಿದ ಕೈ
ಭಾರತವನ್ನೇ ನುಂಗುವ ಆಮಿಷ ಅಂದರೂ ಸೈ
ಇದs ಜೀವಭಾವದ ಗೆಳೆತನದ ಲಕ್ಷಣ!
೨೧
ಜಗತ್ತಿನ ಮೈತುಂಬ ಮೆತ್ತ್ಯದ ಲೋಭ
ತಳಊರಿನಿಂತದ ಕ್ರೋಧ
ಕಾಮಕ್ಕಂತೂ ಸರ್ವಾಧಿಕಾರ
ಇದು ಇಂದಿನ 'ಲೋಕರಾಜ್ಯ'ದ ಪ್ರಕಾರ

ಭಾವ : ಮಹಾರಾಷ್ಟ್ರದ ಹಿರಿಮೆ ಹಾಗೂ ಇತಿಹಾಸ, ನಡೆನುಡಿಯಲ್ಲಿರುವ ಕೊರತೆಗಳನ್ನು ಕುರಿತು.

ಶಬ್ದಾರ್ಥ : ದಿವಾಳಿತೆಗಿ=ಇಲ್ಲದಂತಾಗು.

ವಿಶೇಷ : *ನುಡಿ-೯ : 'ಗೀತಾಯಿ'=ವಿನೋಬಾ ಭಾವೆಯವರ 'ಭಗವದ್ಗೀತೆ'ಯ ಸುಲಭ ಅನುವಾದ ಮಾಡಿದ ಪ್ರಖ್ಯಾತ ಕೃತಿ.

೯ 'ಹೇ ಚಾವುಂಡರಾಜೇ ಕರವಿಯಲೆ'

೧
'ಹೇ ಚಾವುಂಡರಾಜೇ ಕರವಿಯಲೆ'
ಎಂಬುದು ಮರಾಠಿ ಭಾಷೆಯ ಪ್ರಥಮ ವಾಕ್ಯ
ಚಾವುಂಡ ರಾಜನ ಕೀರ್ತಿಯೆ ಹೀಗೆ
ಕನ್ನಡ, ಮರಾಠಿ ಭಾಷೆಯ ಸುಳಿ
ಇದು ಶಾಶ್ವತ ಸತ್ಯ!
೨
ಪೂರ್ವಕಾಲದ ಪುಣ್ಯವೆ ರೂಪತಾಳಿ ನಿಂತದ್ದು
ಪ್ರಕಾಶದಷ್ಟು ಸ್ಪಷ್ಟ ಪ್ರಕಟವಾದದ್ದು
ಅಮರ ಕಲ್ಲಿನ ಮೂರ್ತಿ ನಿಂತದ್ದು!
ನಿಂತೇ ಇದೆ ಇಂದಿಗೂ.
೩
ಇದು ಶಿಲಾಯುಗದಷ್ಟು ಪ್ರಾಚೀನ ಶಿಲ್ಪವಲ್ಲ
ಶೀಲದ ದೃಷ್ಟಿಯಿಂದ ಅಲ್ಪನೂ ಅಲ್ಲ
ಅಖಂಡವಾಗಿ ನಿಂತೇ ಇದೆ - ಕಲ್ಪಾನುಕಲ್ಪ!
ಊರ್ಧ್ವಗಾಮಿ! ಶ್ರೇಯಸ್ಕರ!
೪
ಭವ್ಯ, ದಿವ್ಯ, ಸುಂದರ ಮೂರ್ತಿ
ಅಹಿಂಸೆಯ ಆಚರಣೆಯ ಕೀರ್ತಿ
ತ್ಯಾಗಕ್ಕೂ ಹೆಸರಾಗಿದೆ ಭರ್ತಿ!
'ಓಹಟ' ಇಲ್ಲದ ರೀತಿ!
೫
ಧರ್ಮವೇ ಫಲಿಸಿದ ಈ ಗೊಮ್ಮಟನು!
ಅರಳಿದೆ ಈ ಶಿಲೆ. ಮೆಚ್ಚಿದಾ ದಿಟನು!
ಭೂತೃಷ್ಣೆಗೆ ಹೇಸಿ ಎದ್ದು ನಿಂತಿಹೆ ನೀ
ಅದ್ಭುತನು! ಅಕಲ್ಪಿತನು!
೬
ಅನಾದಿ ಲೋಭದಿಂದ ಮುಕ್ತನಾದವನು ಶೇಷಾ
ಅಭೂತಪೂರ್ವವಾದದ್ದು ಇದು ನಿಃಶೇಷಾ
ಅಂತೆಯೆ ಅಪೂರ್ವ, ಅನನ್ಯ, ದಿವ್ಯ, ವಿಶೇಷಾ
ಲಬ್ಧಿಯ ಪ್ರೀತಿ!
೭
ಆದಿ ತೀರ್ಥಂಕರರ ಪ್ರಥಮ ಕಾಮಾ
ಅಂತರ್‌ಲಕ್ಷದ ಅವಿಚಲ ನೇಮಾ
ಅಮೂರ್ತದಿಂದ ಮೂರ್ತ ಪ್ರೇಮಾ
ಸತತ ಸನ್ಮುಖಾ!

೮
ಈ ಹಸನ್ಮುಖ ಅಭಿಮುಖ
ವಿರತಿಯೂ ಅವಿರತ ಸುಖ
ಶ್ರೇಯಾಂಸಿಯ ಇಕ್ಷುರಸದ ಆಸೆ
ವಿಶೇಷದ ಭಾಷೆ !
೯
ಅಪ್ರಮೇಯದ ಪ್ರತಿಮಾ ರೂಪಾ
ಪ್ರತಿಯೊಂದೂ ಪ್ರತೀಕಕ್ಕೆ ಸಮೀಪಾ
ಭಾವಲಿಂಗದ ಅನಾವರಣವೆ ದೀಪಾ
ಭೌಮದ ಈ ಕೃತಿ !
೧೦
ನೈಸರ್ಗಿಕ ಎನುವಂತಿದೆ ಈ ರೀತಿ
ಕಾರ್ಯೋರ್ತ್ತರ್ಗದ ಸಿದ್ಧತೆ ನೀತಿ
ಸರ್ವಾರ್ಥದ ವಿಸರ್ಗದ ಆಕೃತಿ
ಸಮಗ್ರ ದಿಗಂಬರ !
೧೧
ಅಭಿಷೇಕದಿಂದ ತೊಯ್ದಿಲ್ಲಾ
ಛಳಿ, ಮಳೆ, ಗಾಳಿಗೆ ನಡುಗಿಲ್ಲಾ
ಬೇಸಿಗೆಯ ತಾಪಕ್ಕೂ ಅಂಜಿಲ್ಲಾ
ಇದು ಇದರ ನಿತ್ಯವಸಂತಾ !
೧೨
ಬಹುಧಾನ್ಯ ಪುರದ ಈ ಬಾಹುಬಲಿ !
ಏಕಚಕ್ರಾಧಿಪತಿ ! ಸಹೋದರ
ಭರತ ಚಕ್ರವರ್ತಿಗೆ ಸ್ನೇಹದ ಆಗರ !
ಎಂದೆಂದಿಗೂ !

ಭಾವ : ಬಾಹುಬಲಿಗೆ ಆಗುವ ಮಸ್ತಕಾಭಿಷೇಕ ಪ್ರಸಂಗ ಕುರಿತು ಚಿಂತನ.

ವಿಶೇಷ : ಪೌದನಪುರಕ್ಕೆ 'ಬಹುಧಾನ್ಯಪುರಿ' ಎಂಬ ಇನ್ನೊಂದು ನಾಮ. ೧. ಶಕವರ್ಷ ೯೦೫ರ ಸುಮಾರು ರಾಚಮಲ್ಲ ಗಂಗದೊರೆಯ ಪ್ರಧಾನಿ ಚಾವುಂಡರಾಯನು, ಬಾಹುಬಲಿ ಮೂರ್ತಿ ನಿಲ್ಲಿಸಿದ್ದರ ಕೆಳಗೆ 'ಶ್ರೀ ಚಾವುಂಡರಾಜೇ ಕರವಿಯಲೆ' ಎಂಬ ಮರಾಠಿ ವಾಕ್ಯ ಕೆತ್ತಿಸಿದನು. ಇದು ಮರಾಠಿ ಭಾಷೆಯ ಪ್ರಥಮ ವಾಕ್ಯ ಎಂಬುದು ಗಮನಾರ್ಹ.

೨. ಕೋಸಲ ದೇಶದ ರಾಜ - 'ಗೊಮ್ಮಟ ಬಾಹುಬಲಿ'ಯಂತೆ ಇದ್ದನು ಎಂಬ ಲೇಖ ಗೋಮ್ಮಟೇಶ್ವರ ಸ್ಮರಣೆ ಸಂಪುಟ ಸಂ. ಡಾ॥ ಟಿ. ಜೆ. ಕಲಘಟಗಿ ಪ್ರಕಾಶಕರು-ಶ್ರವಣ ಬೆಳಗೊಳ ದಿಗಂಬರ ಜೈನ ಸಂಸ್ಥೆ-ಶ್ರವಣ ಬೆಳಗೊಳ ೧೯೮೧ರಲ್ಲಿ ಪ್ರಕಟಗೊಂಡಿದೆ. ಬಾಹುಬಲಿ ಎಂಬುದು ೧೭,೧೫೩ ಎಂಬ ಸಂಖ್ಯೆಗಳ ಸಂಕೇತ. ೧೭ ಎಂಬ ಸಂಖ್ಯೆ-ಚಂದ್ರನ ಅಮೃತ ಕಲೆ ಹಾಗೂ ಅಮರತ್ವವನ್ನು ಸೂಚಿಸುತ್ತದೆ. ಇದು ಬಾಹುಬಲಿ-ಗೊಮ್ಮಟಮೂರ್ತಿಯ ಅಮರ ಕೀರ್ತಿಯ ಪ್ರತೀಕವಾಗಿದೆ ಎಂದು ಬೇಂದ್ರೆ ವಿವರಿಸಿದ್ದಾರೆ.

೧೦ ಆದರೂ

೧

ನಾನು ಮತ್ತು ನೀನು
ಕೂಡಿಯೇ ಇದ್ವಿ, ಆದರೂ
ಯಾರೋ ಹಾಕಿದರು ಚೂರಿ
'ನಾನು' ಗ!

೨

ಇಬ್ಬಾಗ ಆತು
'ನಾನು' ಸುತ್ತಾಡತಾನ
ಎಲ್ಲೋ ಏನೋ
ತೂಗಾಡತಾನ
ತೊಗಲಬಾವಲಿ
ಹಾಂಗ.

೩

ಒಗಟಾ ಒಡೀತಾ ಇಲ್ಲಾ
ಹಣೇಬರಾ ಕಾಣತಾ ಇಲ್ಲಾ
ದೃಶ್ಯಾ ಎಲ್ಲಾನೂ ಅದೃಶ್ಯಾ
ಸ್ಮೃತಿ!

೪

ಸ್ವಲ್ಪ ಸ್ವಲ್ಪ ತಿಳೀತದ
ಹೊಳೀತದ, ಹೊಂದಿಕೆ ಆಗ್ತದ
ಗುಂಗು ಹಿಡಸ್ತದ
'ಬಾಕಿ' ಉಳದದ.

೫

ಉಳದದ್ದೂ ತೂಗಾಡ್ತದ
ನಿರಾಲಂಬ
ಯುಗ ಯುಗ ತೀರಿದರೂ
ಪೊಳ್ಳಿನ್ಯಾಗ ಪೊಳ್ಳು
ಆಕಾಶ ಇದ್ಹ್ಹಾಂಗ
'ತೆಪ್ಪಾ' ಆದ
ಆದರೂ ?

ಭಾವ : ಆತ್ಮಚಿಂತನದ ಕವನ.

೧೧ ಅರ್ಥ

೧

ಅರ್ಥದಾಗ ಅರ್ಥನಽ ಇಲ್ಲಾ
ಭಾವದಾಗ ತುಂಬ್ಯದ ಎಲ್ಲಾ
'ಧ್ವನಿ' ಯೊಳಗಽ ಅಡಗಿ ಇರ್ತದ
ಇಲ್ಲಾ ಅಂಬೋದೂ ಕೂಡ.

೨

ಟೆಕ್ಸ್ಟ್‌ಬುಕ್ಕಿನ್ಯಾಗ ಇಂಥಾ ನಿರುಪಯೋಗಿ-
ಪಠ್ಯ, ಅಂತ ಯಾಕ ಸೇರಸ್ತಾರೋ ?
ಬೇಕಾದವರು ಹುಡುಕ್ಯಾಡಿ ಓದಿಕೊಳ್ಳಲಿ,
ಎಡವೋದು ಏನೂ ತಪ್ಪೂದಿಲ್ಲಾ.

೩

ಇಂಥಾ ಅರ್ಥಾಮರ್ಥಾ ಯಾಕ ಬರೀಬೇಕು ?
ಇಂಥಾವನ್ನ ಶ್ಯಾಣ್ಯಾರು ಯಾಕ ಓದಬೇಕು ?
ಆಮ್ಯಾಲೆ ಚರ್ಚೆ, ಸಂಕಿರಣ, ಸುಟ್ಟುಸುಡಗಾಡು !

೪

ಈ ಅಭಿಪ್ರಾಯ ಖರೇ ಅದ
ವರ್ತಮಾನಪತ್ರದ ಅವಲೋಕನ ಹೇಳ್ತದ.
ಏನು ಖರೇನೋ ? ಎನು ಸುಳ್ಳೇನೋ ?
ಒಟ್ಟನ್ಯಾಗ ಸಾರ, ಹಿಂಗ ಇರಬಹುದು.

೫

ಸಾರಾಂಶದ ಸಾರವೂ ನಿಃಸಾರ
ಸಪ್ಪಗ, ಥಣ್ಣಗ, ಜೀವ ಇಲ್ಲದ್ಹಾಂಗ
ಚಹಾದ ಜೋಡಿ ಚಕ್ಕಲಿ ! ಅತಿ ಖಾರದ ರಾಡಿ
ನಾಲಿಗಿ ರುಚಿನಽ ಕೆಡಸ್ತದ.

೬

ಹಸಿವೆಯಂತೆ ಅನ್ನ
ಹೊಟ್ಟೆ ತುಂಬಿದಾಗ ಪ್ರಸನ್ನ
ರುಚಿ ಕಳೊಕಂಡರ ಮರಣಾಸನ್ನ
ರಸಾ-ಹಸಾ-ಆದಮ್ಯಾಲೆ, ಉಳಿಯೋದು ಇಷ್ಟಽ

ಭಾವ : ಪಠ್ಯಪುಸ್ತಕಗಳಲ್ಲಿಯ ವಿಷಯಗಳೆಲ್ಲ ಸಾಹಿತ್ಯ ಅಭಿರುಚಿಗೆ ಪೋಷಕ ಇರಬೇಕು. ವಿದ್ಯಾರ್ಥಿಗಳಲ್ಲಿ ಕಾವ್ಯದ ಹಸಿವು ಬೆಳೆಯಬೇಕು.

೧೨ ಕುಹೂ

೧
ಪೊಳ್ಳು ಇದ್ದಲ್ಲಿ ನಾದಾ ತುಂಬತದ
ತೆರವು ಇದ್ದಲ್ಲಿ ದೆವ್ವಾ ಸುತ್ತಾಡ್ತದ
ಶಬ್ದದಾಗ ಅರ್ಥ ಹುಡುಕಾಡೋ
ಶ್ರಮಾ ಆಗ್ತದ. ಭಾವಾ ತಿಳೀದಿದ್ದರ.
೨
ಹೃದಯದಾಗ ಧ್ಯಾನಾ ಅಡಗ್ತದ
ಅಂತರಿಕ್ಷಕ್ಕ ಭಾನಾ ಹಾರ್ತದ
ಸಂಗೀತದ ತಾನಾ ಮರೀತದ
ಕವಿ ತನ್ನ ಸತ್ತ್ವ ಕಳಕೊಂಡಾಗ.
೩
ಶಬ್ದಾ ಶಬ್ದದಾಗ ಬೆರೀತದ
ವಿಚಾರಾ ಅರ್ಥದಾಗ ಮುಳುಗ್ತದ
ಭಾವಾ, ಅರ್ಥಾ ಮಾಡಿಕೊಳ್ಳಿರೋ
ಅಂತ ಅಳ್ತದ ಮೌನವಾಗಿ.
೪
ಸ್ವಾತೀಮುತ್ತು-ಕವಿಯ ಮಾತು ಆದಾಗ
ನೀರಿನ ಗುಳ್ಳಿಗಳಿಗೆ ಯಾರು ಕೇಳ್ತಾರ ?
ಹುಟ್ಟತಾವ, ಒಡೀತಾವ, ತಮ್ಮಷ್ಟಕ್ಕS ತಾವS.
೫
ಆಳ ಆಳಕ್ಕ ಇಳೀಬೇಕು, ನಿಃಶಬ್ದ ಎಲ್ಲಾ
ಶಬ್ದ ಅನ್ನೋವು ಕೂಡಾ. ಅದರ ಬೆಲಿ ಕಟ್ಟಾವರಿಲ್ಲಾ.
ಮೌನದಾಗS ಛಂದಾ, ತಾಲಾ, ಎಲ್ಲಾನೂ ಇರ್ತದ
ಸತ್ಯಮಾತ್ರ, ಕಣ್ಣಿಗೆ ಕಾಣದ ಹಾಂಗS ಇರ್ತದ.
೬
ಕಣ್ಣಿಗೆ ಕಣ್ಣು ಕೂಡಿಸಿದಾಗ-ಅರ್ಥಾ ಒಕ್ಕಟ್ಟು
ಹೃದಯ ಹೃದಯಕ್ಕ ಮಿಂಚಿದಾಗ ಭಾವಾ ಎರಡು ಪಟ್ಟು
ಧ್ವನಿ, ಸಂಕೇತ, ಪ್ರತಿಮೆ, ಪ್ರತೀಕಾ ಇವುಗಳ
ಪಟ್ಟು, ಪೆಟ್ಟು ಬಲ್ಲವರೇ ಬಲ್ಲರು !

೭
ವಸಂತದ ಗಾಳಿ ಸುಳಿದಾಗ
ಬಂಜೆತನಾ ಉಳೀತದ ಹ್ಯಾಂಗ ?
ಬನಾಬನಾ ಕುಹೂ ಕಂಠಾ ಚಿಮ್ಮತದ
ಭಾವದ ಸುತ್ತ ಅರ್ಥಾ ಸುತ್ತಾಡ್ತದ !
೮
ಇದು ಜೀವಕ್ಕ ಜೀವಾ ಕೊಟ್ಟ ಗುಟುಕು
ಆಗ ಸ್ಫೋಟ ಆಗ್ತದ, ದಂಡೀ ಹುಡುಕು
ಆ ದಂಡಿ, ಈ ದಂಡಿ ಒಂದಾಗ್ತದ
ಇದS 'ರಸೋ ವೈ ಸಃ'

ಭಾವ : ಕಾವ್ಯ ಮೀಮಾಂಸೆಯ ಚಿಂತನ.

ಶಬ್ದಾರ್ಥ : ಭಾನಾ=ಹೊಳೆಯುವಿಕೆ, ಕಾಣುವಿಕೆ.

೧೩ ತಪ್ಪು

೧
ತಪ್ಪು ಮಾಡೋದರಾಗs ಇರ್ತದ ಗರ್ದಿಗಮ್ಮತ್ತು
ರಾಜಾ ಇರಲಿ, ಸುಲ್ತಾನ ಇರಲಿ, ಪ್ರಜಾ ಇರಲಿ
ಒಳ್ಳೇದು ಕೆಟ್ಟದ್ದು ನಿರ್ಣಯಿಸುವವರು
ವಾರಸದಾರರು ತಾನೆ ?
೨
ಹೊಂಚು, ಸಂಚು, ನಡೀತಾವs ಹಡಗಾ ಇದ್ದಲ್ಲೇ
ಮಿತಿ ಮೀರಿದಾಗ, ಹೆಣಾ ತೇಲತಾವ ಅಲ್ಲೇ
ಅವs ಮುಂದ ದೆವ್ವಾ ಆಗಿ, ಮಾತಾಡ್ತಾವ
ಗುಟ್ಟು ರಟ್ಟು ಮಾಡಿ.
೩
ಈಗ ಹೇಳಪ್ಪಾ, ರಸಿಕಾ !
ರಸಪ್ರಕ್ರಿಯೆಯ ಬಗ್ಗೆ
ನಿನ್ನ ಹೊಸಾ ಮತಾ
ಏನರೇ ಉಳದದ ಏನು
ನಿನ್ನ ಹತ್ತರ ಬಾಕಿ ?
೪
ಬರೇ ಕತ್ತಲ್ಯಾಗs ಸುತ್ತಾಡಾವರು ಕೆಲವರು
ಸ್ವಪ್ನಾ ನೋಡಿ, ಚೀರಾಡಾವರು ಹಲವರು
ನೆರಳಿನ ಒತ್ತು ಬಿದ್ದು ಸುಸ್ತಾದವರು
ಆದದ್ದು ಹೋದದ್ದು ಎಲ್ಲಾ ಮರೀತಾರ ಇವರು !
೫
ಒಗಟಾ ಒಡೀಲಿಕ್ಕೆ ಕಲೀರಿ
ಹಗಲ ಹೊತ್ತು ಸಂಸಾರ ಒಡೆಯೋದು ಬಿಡರಿ
ರಾತ್ರಿ ಹೊತ್ತು ಮನಿ ಒಡೆಯೋದೂ ಬಿಡರಿ
ಆಗ ಕಂಡೀರಿ ಸುಖದ ಸಂಪತ್ತು
ಇದು ಕೂಡಾ ಒಂದು ಹೊಸಾ
ಬಂದೀಖಾನೆಯ ಜಗತ್ತು!

೬
ನವಯುಗದ ಬೆಳಕು ಕಾಣಬೇಕಾದರ
ಅಲ್ಲಿಯ ಹಾಡು ಕೇಳಬೇಕಾದರ
ಬೆಳ್ಳೀ ತೆರೀಮ್ಯಾಲೆ ಚಿತ್ರಾ ನೋಡಬೇಕಾದರ
ನೀನss ನಿನ್ನ ಗವಿ ಸೇರಬೇಕು.
ನಾವು ತುಂಬೋದು ಪರಾತ್ಪರ ಕೊಟ್ಟ ನೀರು!
ಸಂಜೀಮುಂದ ಅಷ್ಟss ಸಂಭಾವಿತರಾಗಿರೋದು
ಮಹಾತಪ್ಪು.

ಭಾವ : ಕಾವ್ಯಾರ್ಥ ಚಿಂತನೆಯಲ್ಲಿ ಪ್ರಯತ್ನ ಅವಶ್ಯ. ಅದು ಮಾಡದಿರುವುದೇ ತಪ್ಪು.

೧೪ ಪಠ್ಯ ಪುಸ್ತಕ

೧
'ಭಾವಾರ್ಥ ದೀಪಿಕೆ' - ಜ್ಞಾನೇಶ್ವರರು
'ಭಗವದ್ಗೀತೆ' ಗೆ ಬರೆದ ಭಾಷ್ಯ !
ತಲೆಯ ಮೇಲೆ ಅದರ ಸ್ಥಾನಾ !
ಅರಣ್ಯ ಪಂಡಿತರು ಅದನ್ನ ಓದಿ
ಅಖಂಡವಾಗಿ ಅರಣ್ಯದಲ್ಲಿಯೇ ಸಂಚಾರ
ಓದಿದ್ದನ್ನೇ ಓದತಾರ, ವೃತ್ತಪತ್ರಿಕೆಯಂತೆ.
೨
ಇನ್ನು ಏಕನಾಥರ ಗತಿಯೂ ಏನು ?
ಅವರಿಗೆ 'ಸಾಥಿ' ಮಾಡುವವರು ಯಾರು ?
ಬಾಯಿ ತುಂಬಾ ಮಾತು, ಅಡ್ಡಾತಿಡ್ಡಾ
ಅಳತಿ ಸಿಕ್ಕಿಲ್ಲಾ ಯಾರಿಗೂ.
೩
ಕಾವ್ಯಶಾಸ್ತ್ರ ವಿನೋದವಾಗಿ ಕಾಣುತ್ತಾರೆ
ಅಜ್ಞಾನದ ಹೊಸ ಹೊಸ ಶೋಧ ಮಾಡುತ್ತಾರೆ
'ದಾಸಬೋಧ' ಡಬ್ಬು ಹಾಕಿದವರು
ಸಾಷ್ಟಾಂಗ ನಮಿಸಿದರೂ ಏನು ?
೪
ತುಕಾರಾಮರ ತೂಕಾ ಮಾಡುವ
ತಕ್ಕಡಿ ಎಲ್ಲ್ಯದ ?
ವಿಠ್ಠಲನೂ ತಿರುಗಿಸಬಿಟ್ಟನು ಮುಖವನ್ನು
ಭಕ್ತಿ ಎಂಬುದು ಬತ್ತಲೆ ನಿಂತುಬಿಟ್ಟಿತ್ತು
ಭಕ್ತರ ವೈವಿಧ್ಯ ಕಂಡು.

ಭಾವ : ಜ್ಞಾನೇಶ್ವರ, ಏಕನಾಥ, ರಾಮದಾಸ, ತುಕಾರಾಮ - ಮಹಾರಾಷ್ಟ್ರದ ಜ್ಞಾನೀ ಸತ್ಪುರುಷರು. ಅವರ ಗ್ರಂಥ ತಿಳಿಯಲು ಅಧ್ಯಾತ್ಮಿಕ ಸಾಧನೆ, ಅನುಭವ ಒಂದೇ ಮಾರ್ಗ.

೧೫ ಏಕೀಕರಣ

೧

ಬಾಂಧವ್ಯದ ಸೇತುವೆ ಕಟ್ಟಿರಿ
ಸ್ನೇಹದ ಕಲೆ ಮೈಗೂಡಿಸಿರಿ
ವಿರೋಧ ಹಬ್ಬಿಸಿ, ದ್ವೇಷ ಬೆಳೆಸಿ
ದೇಹಾ ಸೈನ್ಯ ಮಾಡದಿರಿ.

೨

ಪ್ರಕಾಶಕಿರಣ ತಾ ಪರಿವರ್ತನ ಹೊಂದಿ
ಮೋಹದ ಕತ್ತಲೆ ಹಬ್ಬಿತ್ತು
ಶಿವ-ಶಕ್ತಿಯ ವಿರಹವು ಆಗಿ
ದೈಹಿಕ ಭೆಟ್ಟಿ ತಪ್ಪಿತ್ತು.

೩

ವಿಧಿ ಘಟನೆ ಎನ್ನಲೆ, ಕಾಮ ಕರ್ಮವಿದು
ಭಾಷೆಯಲ್ಲಿ ರಸ ಉಳಿದಿಲ್ಲಾ
ಭಯವೇ ಭಕ್ತಿಯ ನುಂಗಿಬಿಟ್ಟರೆ
ಆಶೆಯ ಉಷೆ ಆಗುವದಿಲ್ಲಾ.

೪

ಸಾಹಿತ್ಯದ ಭಾವವೇ ತಿಳೀದS
ಅರ್ಥದ ಲೋಭ ಅಡನಾಡಿ
ದೃಷ್ಟಿಬಂಧ, ದೃಷ್ಟಾಂತವೂ ಬಂಧ
ಸಾದೃಶ್ಯವಾಯಿತು ಬೀಡಾಡಿ.

ಭಾವ : ಭಾಷಾ ಬಾಂಧವ್ಯಕ್ಕಿಂತ ಭಾವ ಬಾಂಧವ್ಯ ಶ್ರೇಷ್ಠ.

೧೬ ಅಭೇದದ ಗುಟ್ಟು

೧

ಭೇದವು ಬೆಳೆದು, ರಣರಂಗದ ತಾಂಡವ !
ಒಕ್ಕಟ್ಟಿಗೆ ಸ್ಥಳಾ ಎಲ್ಲಿ ಇದೆ ?
ಎದೆ ಹಾಲಿನಲ್ಲೇ ವಿಷವೂ ಬೆರೆತರೆ, ಮೊಲೆ-
ಕುಡಿವಗೆ ಜೀವಾ ಉಳಿಯುವುದೆ ?

೨

ಬಾಳಿರಿ, ಬಾಳಿಸಿರಿ ಜನಗಳೆ ನೀವು
ದುಃಖದ ಸ್ವಪ್ನವ ಕಾಣದಿರಿ
ಭೂ ವೃಂದಾವನ ನಂದನವಾಗಿ
ರಸನೃತ್ಯ ಕುಣದಾಡಿರಿ.

೩

ಮುರಲಿಯ ನಾದದ ಶ್ರವಣವೆ ಸಾಕು
ಸಂಗೀತದ ರತಿ ಬೆಳೆಯುವದು
ಶ್ರಾವಣದಲ್ಲಿಯೇ ಗೌರಿಯ ಹಬ್ಬಾ
ಗಿಡಗಂಟಿ ಬಳ್ಳಿ , ತಾ ತೂಗುವವು

೪

ರಸಾನುಭವದಾ ಶ್ರುತಿಯಾಗುವದೆ
ದರ್ಶನದೀಪ ಪ್ರತಿಭೆಯದು
ಛಂದದ ಅವಗುಂಠನ ಸರಿಯುವದೇ
ಚತುರವಾಣಿಯ ಬೆಳಕಿನದು !

ಭಾವ : ಕಾವ್ಯದಲ್ಲಿ ರಸಾನುಭವಕ್ಕೇ ಮಹತ್ತ್ವ

೧೭ ಇದೆ ಇಲ್ಲಾ, ವಿರೋಧ ಹೌದು

೧

ಇದೆ ಇಲ್ಲಾ, ವಿರೋಧ ಹೌದು
ದಿಕ್ಕೆಷ್ಟಿದ್ದರೂ ಒಂದೆ ಅದು.
ಸಮ ಸಮ ತ್ರಿಜ್ಯಕೆ, ವ್ಯಾಸಾ ಇದ್ದು
ಮಂಡಲ ಲೆಕ್ಕಾ ತಪ್ಪದು.

೨

ಉಪಮಾನಿಷ್ಠೆಯೆ ಕವಿಯದು ಇದ್ದರೂ
ಶಿವಸೀಮೆಯದು ಎರಡಲ್ಲಾ
ಈ ಕಡೆ, ಆ ಕಡೆ, ಎಲ್ಲೆಲ್ಲೂ ಇದೆ
'ಧ್ವನಿ' ಎಂಬುದೂ ಬರಡಲ್ಲ.

೩

ಪ್ರತಿಭೆಯ ಪ್ರಭೆ ಭ್ರಮೆಯಲಿ ಈಸಲು
ಸಮ-ವಿಷಮ ತೆರೆಗಳ ಆಟವದು
ಸಮಾನತೆಯ ಗುರಿ, ತಲಪುವ ಬಗೆ ತಾ
ವಿರೋಧವೆಲ್ಲವ ಮುಚ್ಚುವದು.

೪

ಅನುಸರಿಸಿರಿ ಮನ, ವಿಮಾನ ರೀತಿಯ
ಉತ್‌ಯಾನವೆ ವಿಶೇಷವು
ಪ್ರತ್ಯಕ್ಷಕ್ಕೆ ಪ್ರಮಾಣ ಬೇಕೆ?
ನಿರುಪಮ ಎಂಬುದೆ ಆಶೇಷವು.

ಭಾವ : ಕಾವ್ಯದಲ್ಲಿ 'ಧ್ವನಿ' ಮಾರ್ಗ ಶ್ರೇಷ್ಠ.

೧೮ ಎಂಥದೀ ಗಾಳಿ !

೧

ಅಣ್ಣ ತಮ್ಮಂದಿರ ಹಿಂದೆ
ಬಂಧು ಬಳಗದ ಹಿಂದೆ
ಜೀವ ಜೀವಗಳ ಹಿಂದೆ
ಗುಂಪು ಗುಂಪುಗಳ ಹಿಂದೆ
ಬೆನ್ನುಹತ್ತಿದೆ ಈ ದೆವ್ವಾ! ಕಾಳಿ !
ಎಂಥದೀ ಗಾಳಿ ?

೨

ದೈವ ರಚಿಸಿದ !
ಚಕ್ರವ್ಯೂಹದಾಗ ಸಿಕ್ಕವನನ್ನು
ನುಂಗಿ ನೀರು ಕುಡಿದಾಗ
ಧೈರ್ಯಾ ಹಳ್ಳಾಹಿಡಿದಾಗ
ಮೈ ಹೊಕ್ಕ ಗಾಳಿ-ವೈರದ ಗಾಳಿ !
ಎಂಥದೀ ಗಾಳಿ ?

೩

ಪ್ರಕಾಶವೂ ಕುರುಡಾದಲ್ಲಿ
ಎಚ್ಚರಕ್ಕೇ ಎಚ್ಚರ ಇಲ್ಲದಲ್ಲಿ
ಔದಾಸ್ಯ ಬೇರುಬಿಟ್ಟಲ್ಲಿ
ಬರಬೇಕೆಲ್ಲಿಂದ ವಿಕಾಸಾ ?
ಆಕಾಶ ತುಂಬಿದ-ಸುಂಟರಗಾಳಿ !
ಎಂಥದೀ ಗಾಳಿ ?

೪

ವಿಷವರ್ತುಲ ಹುಟ್ಟಿಸುವವರೇ
ತುರುಕುತ್ತಾರೆ ಬಾಯಲ್ಲಿ ಬೈಗಳಾ
ಬೈಸಿಕೊಂಡವನ ತಳಮಳಾ ಹೇಳಲಾಸಲ್ಲಾ!
ನುಂಗಲಾರಾ ! ಉಗಳಾಲಾರಾ !
ಮಾಲಿನ್ಯವೇ ಇದರ-ಚಾಳಿ !
ಎಂಥದೀ ಗಾಳಿ ?

೫
ಶಿವ ಹಾಗೂ ಅಶಿವ ಇವರ ಮತ್ಸರಾ
ದೆವ್ವಗಳ ಹೆಣಗಳು ಅಪರಂಪಾರಾ !
ಎಲ್ಲರದೂ ಒಂದೊಂದು ನಾಟಕಾ !
ಕಾರಸ್ಥಾನದ - ಅಸೂಯೆಯ ಗಾಳಿ
ಎಂಥದೀ ಗಾಳಿ ?
೬
ಮಿಂಚಿನಂತೆ ಗಾಳಿ ಮಿಂಚಬೇಕು
ದೀಪಾ ಆರಿಸದೆ ಸುಳದಾಡಬೇಕು
ಆತ್ಮಕ್ಕ ಹೊಸಾ ಚೈತನ್ಯ ತುಂಬಬೇಕು
ಇದಕ್ಕS ಅಂತಾರ ಪ್ರಾಣವಾಯು
ಇಂಥಾ ಗಾಳಿಗಾಗಿ ಸದಾ ಕಾಯು.
೭
ಅಂಥದರಲ್ಲಿ ಕಂಡೀತು ಹೊಸಾ ಭೂಮಿ
ಅಲ್ಲಿ ಜೀವಿಸುವವರು ನವಶ್ರದ್ಧಾಕಾಮಿ
ನವೋನವ ಸೃಷ್ಟಿಯ ಅಂತರಿಕ್ಷ ಆಗಾಮಿ
ಆ ದಿಕ್ಕಿನಲ್ಲಿ ಬೀಸಲಿ ಗಾಳಿ
ಇದು ಜೀವಕ್ಕ ಜೀವ ಕೊಡೋ ಗಾಳಿ !
ಇಂಥಾದರಾಗS ತಾಳಿ, ಬಾಳಿ.
೮
ಇಂಥಾ ಕಾವ್ಯ ರಚಿಸಿ ಏನು ಸಾಧಿಸಿದಿರಿ ? ಅಂತ ಕೇಳಾವ್ರು ಇದ್ದಾರ
ಅತ್ಯಂತ ಕ್ಲಿಷ್ಟ ನವಕಾವ್ಯ ಬರೆದು, ಬೆನ್ನು ಚಪ್ಪರಿಸಿಕೊಂಡವರೂ ಇದ್ದಾರ
ನವಕಾವ್ಯದ ಸಿಂದೀ ಕುಡಿದು, ಬಾಯಿಗೆ ಬಂದದ್ದು ಆಡಿದವರು ಇದ್ದಾರ
ಆಮ್ಯಾಲೆ 'ತಪ್ಪಾತರ‍್ಯಪ್ಪಾ' ಅಂತ ಕಾಲು ಹಿಡಿದವರೂ ಇದ್ದಾರ
'ರೀತಿರಾತ್ಮಾ ಕಾವ್ಯಸ್ಯ' ಅಂಬೋದೂ ಒಂದು ಮಾರ್ಗ ;
'ತುರೀಯ ನೆಲೆಯ ಅವತರಣ ಕಾವ್ಯ' ಬರಬೇಕು
ಅಂಥಾ ಗಾಳಿ ಬಯಸೋ ಜಾಣರೂ ಹುಟ್ಟಬೇಕು.

ಭಾವ : ಕಾವ್ಯ ಬೆಳೆದು ಬಂದ ಬಗೆಯನ್ನು ವಿಮರ್ಶಿಸುತ್ತ, ನವ ಮಾನವೀಯತೆಯ ಆವಿರ್ಭಾವಕ್ಕಾಗಿ 'ತುರೀಯ ನೆಲೆಯ ಅವತರಣ ಕಾವ್ಯ' ಬರಬೇಕೆಂದು ಬೇಂದ್ರೆ ಬಯಸಿದರು.

ಶಬ್ದಾರ್ಥ : ಔದಾಸ್ಯ=ಅಲಕ್ಷ್ಯಭಾವ, ಜಾಡ್ಯ .

೧೯ ದಿಗಂಬರ

೧
ಅಂಬರದಲ್ಲಿ ಆಕೃತಿ, ವಿಕೃತಿ
ವಿವಿಧಾಕೃತಿಗಳ ತೆರವು
ತಿರುವು ಮುರುವುಗಳ ಪ್ರಪಂಚ
ಸತ್ಯ ಸಂಶೋಧನೆಯ ಅರಿವು.
೨
ರವಿಯ ಸ್ಪಷ್ಟ ಪ್ರಕಾಶ ಕಿರಣ
ವಾಯುವಿನ ಪವಿತ್ರ ಆವರಣ
ಅಡ್ಡಿಯನು ಸರಿಸುವ ಗುಣಾ
ಆಕಾಶಕ್ಕಿರುವ ಮೈಗುಣಾ !
೩
ಪ್ರಕಾಶವೇ ಜೀವೋಚ್ಛ್ವಾಸ
ದಿವಸ ಅದರ ಮಂದಹಾಸ
ಗಾಳಿ ತರುವದು ಸುವಾಸ
ಎಲ್ಲೆಲ್ಲೂ ತುಂಬಿತ್ತು ಆಗಸ.
೪
ವೇಶಭೂಷಣ ಬೇಕೇಕೆ ?
ರೂಪ ಅಡಗಿಸುವ ದೋಷ ಸಾಕೆ ?
ತಮದ ಕತ್ತಲೆ ಸರಿಸುವ ಉಷಾ
ದಿಕ್ ಅಂಬರ ವಿಶೇಷಾ.
೫
ಆವರಣ ಎಂದರೆ ಮುಕ್ತಿ ಅಲ್ಲಾ
ವಾದ ಎಂಬುದು ಯುಕ್ತಿ ಅಲ್ಲಾ
ಭಗವಂತನಿಗೆ ತಲುಪದ್ದು ಭಕ್ತಿಯಲ್ಲಾ
ಸಾಕ್ಷಾತ್ ಎಂಬುದು ಏನು ?

೬

ನಾಚಿಗೆ ಎಂಬುದೇ ಮಗ್ಗಾ
ನೂಲಿನ ನೇಯ್ಗೆ ಜೀವದ ಸಗ್ಗಾ
ತ್ಯಾಗಾ ಹಾಗೂ ಭೋಗಾ ಎಂಬುದು
ಅಲ್ಲಾ ಕುರುಡರ ಕಗ್ಗಾ.

೭

ಚಳಿಗಾಲದಲ್ಲಿ ಉದುರಿದ ಎಲೆಗೆ ಚಿಗುರು
ಕೊರಡು ಕೊನರೀತು !
ವಸಂತ ಋತುವಿನ ಲಾವಣ್ಯ
ತಾ ಬತ್ತಲೆಯಾದೀತು !

೮

ಮೈ ತುಂಬ ಕಣ್ಣು ಅದರ ತುಂಬ ನಿಶಾ
ಬಂಧನ ಮುಕ್ತ ಪ್ರಕಟದಿಶಾ
ತಾಪ ಆರಿದಾಗ ಎಲ್ಲವೂ ಮುಕ್ತ ಸ್ಥಿತಿ
ದಿಗಂಬರ ಎಂಬುದು ದಿವ್ಯದೃಷ್ಟಿ!

ಭಾವ : ಖಲೀಲ್ ಜಿಬ್ರಾನ್ ಅವರ 'Clothes' ಕವನದ ಪ್ರೇರಣೆಯಿಂದ ಮೂಲದಲ್ಲಿ ಮರಾಠಿಯಲ್ಲಿ ಬರೆದದ್ದು

೨೦ ವಿಶ್ವಂಭರಾ !

ವಿಶ್ವಂಭರಾ ! ನೀ ಪುರುಷಾ !
ಸರ್ವವೇದದಲ್ಲಿ ಘೋಷಾ !
ವಿಠ್ಠಲಾ ನೀ ! ಜಗತ್ ಜೀವನಾ ನೀ !
ಯಾವುದರಲ್ಲಿ ಯಾವುದು ತುಂಬಿದೆ ?
ಯಾವುದು ಕೃತಿ ? ಯಾವುದು ಆಕೃತಿ ?

ಯಾವುದನ್ನು ವರ್ಣಿಸಲಿ ?
ಯಾವುದಕ್ಕೆ ಏನು ಹೆಸರು ಕೊಡಲಿ ?
ದೇವಾ ಎನ್ನಲೋ ? ಭಾವಾ ಎನ್ನಲೋ ?
ರೂಪಾ ಎಂಬುದು ಅಲಂಕಾರಾ !
ಪಾಂಡುರಂಗಾ ಎಂಬುದು ಭಾವನಾ !
ನಾನಾ ಪ್ರಕಾರಾ ! ಅನೇಕಾಕಾರಾ !
ರೂಢಾ ! ಸಂಕಲ್ಪಿತಾ !
ಕ್ರಮಾ ! ಭ್ರಮಾ !
ಕ್ರಿಯಾ ಯೋಗಾ ! ದಿವ್ಯ ಯೋಗಾ !

ಹೌದು ಎಂದು ಗೋಣು ಹಾಕಿದರೆ ಹೌದು
ಇಲ್ಲಾ ಎಂದರೆ ಇಲ್ಲಾ.
ಅಪ್ರಮಾಣಕ್ಕ ಪ್ರಮಾಣಾ ಯಾರು ?
ಸಂಕಲ್ಪಾ, ವಿಕಲ್ಪಾ! ಎಲ್ಲಾ ನೀ
ಪ್ರಳಯಾ ! ಸೃಷ್ಟಿ! ಎಲ್ಲಾ ನೀ

ನೀ ಮೌನಿ !
ನನ್ನ ಉಮ್ಮಳಿಕೆ ಕೇಳು ನೀ
ಭಯಾ ! ಅಭಯಾ ! ಎರಡೂ ನೀ
ನಾದ ರೂಪಕ್ಕಾಗಿ
ಎಷ್ಟು ಅಗಿದರೂ, ಅಗಾಧಾ !
ಎಷ್ಟು ಮೇಲೆ ಏರಿದರೂ, ಅಗಾಧಾ !
ನೀನೇ ಹ್ಲಾದಾ !

ನೀನು ವಿಶ್ವಂಭರಾ ! ದಿಗಂಭರಾ ! ಆಕಾಶಾ
ನಾನು ನಿನ್ನ ಹಕ್ಕಿ ! ನೀನಿದ್ದಲ್ಲಿ ತಲಪುವೆ ! ಪ್ರಕಾಶಾ.

ರಚನೆ : ೨-೪-೧೯೬೨

ಭಾವ : ವಿಠ್ಠಲ ಶಕ್ತಿಯ ಅಗಾಧ ಅನುಭವದ ಅಭಿವ್ಯಕ್ತಿ
ಶಬ್ದಾರ್ಥ : ಹ್ಲಾದ=ಆನಂದ.

೨೧ ಶಾಂತಿ ಮತ್ತು ಶಕ್ತಿ

೧

ಗೊಮ್ಮಟನಿಗೆ ಆಯಿತು ಇತ್ತ ಅಭಿಷೇಕ
ಸ್ಟ್ಯಾಲಿನ್ ಮರಣ ಅತ್ತ ವಿಶೇಷ
ಈ ಎರಡರಾಗ ಸಂಬಂಧ ಏನು ?
ತಗೊಂಡರ ಅದ ಬೋಧ.

೨

ಬೋಧ ಎಲ್ಲಾದರಾಗೂ ಇರ್ತದ
ಯಾ ಮಗಗ ಬೇಕಾಗ್ಯದ ?
ಬೋಧ-ಸಬ್‌ಜೆಕ್ಟಿವ್
ಇದೂ ಒಂದು ರೀತಿಯ ಬೈಗಳಾ

೩

ಇದು ಕೂಡ ಒಂದು ಬಗೆಯ ಭಾಸ
'ಭಾಸ' ಅಂದರ ಹೊಳೆಯುವಿಕೆ
ಅಜ್ಞಾನಿಗೆ ಜ್ಞಾನ-ಒಂದು ಭಾಸ
ಹಾಗಾದರ ಜ್ಞಾನ ಅಂದರೇನು ?

೪

ವಿಜ್ಞಾನವೇ ಜ್ಞಾನ
ವಿಜ್ಞಾನಿಗೆ ನಾಮವಿದೆಯೆ ?
ಇದೆ. ಅವನೇ ಸಾಯಂಟಿಸ್ಟ್!
ವಿಷಯದಲ್ಲಿ ಇರುವದಿಲ್ಲ ನಿಷ್ಠೆ!

೫

ಇದೂ ಒಂದು ಬಗೆಯ ಚಾಷ್ಟಿ
ವಿಷಯಜ್ಞಾನಿಗೆ ಜೀವ-ಸಾಕ್ಷಿ
ಹಿಂಗಂದಾಗೂ ಇದು ಏಕಪಕ್ಷ
ವಿಜ್ಞಾನ ಸರ್ವಕ್ಕೂ ಸಾಕ್ಷಿ
ಜೀವ ಜೀವವೂ ಏಕಾಕ್ಷಿ

೬

ಜೀವದನದಾಗS ಎಲ್ಲಾ ಹುಡುಕಬೇಕು
ದುಡುಕಬಾರದು; ವಿಚಾರ ಮಾಡಬೇಕು
ಸುದ್ದಿ ಅಂಬೋದು ಗಾಳಿಯ ಸುಳಿ
ಲೋಕ ಅದರದS ಬೊಂಬುಳಿ.

೭
ಸಂಪಾದನೆ ಮಾಡಬೇಕು ಜ್ಞಾನದ್ದು
ಜ್ಞಾನಿಯ ಕಣ್ಣು ಇದರಾಗS ಇದ್ದದ್ದು
ಇದರಿಂದ ಏನುಸಿದ್ಧ ಆಗ್ತದ ?
ಜ್ಞಾನಿ ಮರಣಕ್ಕೂ ಸಿದ್ಧ ಅಂತ ಆಗ್ತದ.
೮
ಸಾಧು ಸಂತರು ಸತ್ತಿಲ್ಲೇನು ?
ಕೀರ್ತಿ ರೂಪದಿಂದ ಉಳಿದಿಲ್ಲೇನು ?
ಸ್ಟ್ಯಾಲಿನ್‌ನದೂ ಇದS ಕಥಿ
ಅವನೂ ಅಜರಾಮರ ! ಅಲ್ಲೇನು ?
೯
ಹೌದರೀ ಆದರೂ ಅಂತರ ಅದ
ಗೊಮ್ಮಟನಿಗೂ, ಸ್ಟ್ಯಾಲಿನ್‌ಗೂ ಸಂಬಂಧ ಏನು ?
ಗೊಮ್ಮಟನದು ಶಾಂತಿಯ ಮಾರ್ಗ
ಇದೇ ಇಂದ ಬೇಕಾದ ಸ್ವರ್ಗ !
೧೦
ಅಂದ್ರ ಬಲಕ್ಕ, ಶಕ್ತಿಗೆ ಅರ್ಥ ಇಲ್ಲೇನು ?
ಸ್ಟ್ಯಾಲಿನ್‌ನದು ಕರ್ಮ ಸಿದ್ಧಾಂತ ಅಲ್ಲೇನು ?
ಅವನ ಮೂರ್ತಿ ಮಾರ್ಗದರ್ಶಕ ಅದ
ಬೋಧ ತಗೊಂಡರ ಇದರಾಗೂ ಅದ.
೧೧
ಕೊನೀಗೆ ಗೆಲ್ಲೋದು ಧರ್ಮ !
ಕಲ್ಲಿನ ಮೂರ್ತಿಗೂ ಏನು ಧರ್ಮ ?
ಅದರ ಮ್ಯಾಲೆ ಜಗತ್ತು ನಿಂತಿಲ್ಲೇನು ?
'ವಾರೆವಾ !' ನಿನ್ನ ಅರ್ಥಕ್ಕ ಒಂದು ಕೋಟಿ !
೧೨
ಕೋಟಿ ಮಾತು ಸಾಕು. ಮುವತ್ತು ಮೂರು ಕೋಟಿ !
ಆದರೂ, ಹೋದರೂ ಕೋಟಿಗೆ ಇಲ್ಲಾ ಕೊರತಿ
ನಿರ್ಣಯಕ್ಕ ಬರೋದು ಅವಶ್ಯ
ಗೊಮ್ಮಟಶಾಂತಿ ಆಗಲಿ ವಿಶೇಷ.

೧೩

ಸ್ಟ್ಯಾಲಿನ್ ಬಡವರ ಬಂಧು!
ಇದನ್ನ ಮೊದಲ ಒಪ್ಪರಿ ಬಂದು
ಆಗ ಮಾತ್ರ ಎಲ್ಲಾರೂ ಒಂದು
ಇಲ್ಲಾ ಅಂದ್ರ ಒಪ್ಪಸ್ತೇನಿ, ಕೊಂದು!

೧೪

ಇದಕ್ಕ ಅಂತಾರ ವಾದದ ವಿಜಯಾ
ಹಾಕ್ಯಾಟಾ, ಗುದ್ದಾಟಾದಿಂದ ಯಾರಿಗೆ ಜಯಾ?
ವಾದಕ್ಕ ಇರೂದಿಲ್ಲಾ ಕೊನಿ
ಮೌನಾ, ಬಾಳಿನ ಗೊನಿ!

ರಚನೆ : ೧೯೫೩

ಭಾವ : ಗೊಮ್ಮಟ ಹಾಗೂ ಸ್ಟ್ಯಾಲಿನ್ ವ್ಯಕ್ತಿತ್ವದ ಚಿಂತನ.

ಶಬ್ದಾರ್ಥ : ವಾರೆವಾ=ಬೆನ್ನು ಚಪ್ಪರಿಸುವ ಒಂದು ರೀತಿ.

೨೨ ಯಾರು ಅಂತಾರ ?

೧
ಯಾರು ಅಂತಾರ ಸ್ಟ್ಯಾಲಿನ್ ಸತ್ತಾ
ಪ್ರಾಣಾಶ್ವದ ವಾಯು ಹಾರಿದತ್ತಾ
ಹಾರಿದಾ ! ಎಲ್ಲಾರನ್ನೂ ನುಂಗಿ ಒಂದಾದಾ !

೨
ಬರಿಗೈಯಿಂದಾ ಹೋದದ್ದು ನಿಜಾ
ಶಾಂತಿಯ ಮಂತ್ರಾ ಕೊಟ್ಟಾ
ಅಂತೆ ಅಂವಾ ಜೀವಾ ಬಿಟ್ಟಾ
ಈಗ ಇರೋದು ಅವನದೆ ತೇಜಾ

೩
ಹಗಲೂ ರಾತ್ರಿ ಒಂದೆ ಕನಸು
'ಬಡವರ ಬಾಳು ನನ್ನ ಹಕ್ಕು'
ರೊಕ್ಕಾ ಕೊಡ್ರಿ ; ವಿಭೂತಿ ಕೊಡ್ತೇನಿ
'ಅಲಖ್ ನಿರಂಜನ್' ಅಂದಾ ನಕ್ಕು !

೪
ಶುಕ್ರ ನೀತಿಯ ಅಪೂರ್ವ ದೃಷ್ಟಿ
ತಮದಲ್ಲಿಯೂ ತಾರೆಗಳ ಸೃಷ್ಟಿ
ಇದಕ್ಕಾಗಿಯೆ ಸುತ್ತಾಟದ ದೀಕ್ಷೆ
'ಕಾರ್ಮಿಕ ಸುಖಾ' ಬೇಡಿದ ಭಿಕ್ಷೆ

೫
ರಾತ್ರಿಯ ಹುಳಗಳ ಕಿರ್ ನಾದಾ
'ಹಂ' ಗೊಡುತಿದೆ ಸಂವಾದಾ
ನಿಂತೀತೇನು 'ದ್ವಂದ್ವ ವಾದಾ'
ಇದು ಒಂದೇ ಆಮೋದಾ.

೬
ಎಲ್ಲ ಧ್ಯೇಯಗಳು ಮಣ್ಣುಮುಕ್ಕಿದವು
ಶಸ್ತ್ರಗಳೇ ಆದವು ಎಲ್ಲರ ಕೈ
ಕೈ ಹೋಗಿ, ಉಳಿದರೇನು ಮೈ ?
ಇದು ಹೆಣವೇ ಸೈ, ಸೈ, ಸೈ.

೭
ಪ್ರಾಣ ಗುಹೆಯ ಕತ್ತಲೆಯಲ್ಲಿ
ವಿಚಾರದ ಕಣ್ಣೇ ಮುಚ್ಚಿದಲ್ಲಿ
ಶ್ವಾಸವೂ ಅಲ್ಲೇ ಅಡಗುವುದಲ್ಲಾ
ಉಳಿಯುವದೇನು ? ಬೆಡಗೇ ಎಲ್ಲಾ!
೮
ಒಂದಕ್ಕೊಂದು ತಾಕಿಲ್ಲಾ
ಅಂಕುಡೊಂಕು ದಿಕ್ಕಿಲ್ಲಾ
'ಯದ್ವಾತದ್ವಾ' ಮಾತಾಡಿದರ
ಮುಂದ ಸಾಗೋದು ಬೇಕಿಲ್ಲಾ.
೯
ಪ್ರಚಂಡ ತರ್ಕ ಎಂಬುದೂ ಯುಕ್ತಿ
ನಾಶ ಮಾಡುತ್ತದೆ ಅದೇ ಅಶಕ್ತಿ
ಬೆಳೆದು ನಿಂತಾಗ 'ಡಿಕ್ಟೇಟರ್' ಭಕ್ತಿ
ಪ್ರಜಾರಾಜ್ಯಕ್ಕ ಮರಣವೆ ಮುಕ್ತಿ!
೧೦
'ಅಹಂ ಅಹಂ' ಎಂಬುದು ಬಾಯಿಯ ಬುರುಗು
ಕಟ್ಟಿಬಿಡುವುದು ಎಲ್ಲಾ ಹಾದಿ, ಸೆರಗು
ಸೆರಗು ಜಗ್ಗುವಂವಾ, ಎಲ್ಲಾ ಬಿಟ್ಟಾ
ಹಿಡಿಯಲೇ ಬೇಕು ಅವನಾ ಜುಟ್ಟಾ
೧೧
ಕುಟಿಲ ನೀತಿಯೇ ಆಪ್ತವ್ಯ
ಉಲ್ಕಾಪಾತವೇ ಶಕ್ತಿಯ ಅಸ್ತ
ಮಡಿಯುವುದೇ ನಿತ್ಯದ ಉದಯಾ ?
ಬಡತನದ ವಿಮೋಚನೆ ಅಲ್ಲಾ ದಯಾ.
೧೨
ಎಲಎಲಾ ! ಅಂಜಿಕೆ ಬೇಡಾ
ಕಟ್ಟರಿ ಕೊರಳಲಿ, ಕರಡೀ ಕೂದಲಾ !
ಎಂಥದೀ ದೇಶಾ ! ಎಂಥದೀ ಮಾತಲಾ
ಹಿಂದಡಿ ಇದ್ದರೆ, ಬರಬೇಡಾ.
೧೩
'ಮಾಡು ಮಡಿ' ಇದು ಮುಂದಡಿ
'ಸಬಕಾನ್‌ಶಸ್' ಎಂದರೆ ಇದೇ
ತೂಗಾಡಿಸು ಇದಕ್ಕೆ ನಿನ್ನ ತಲೆ
ಜಯ ಕಾಣುವೆ ಆಮೇಲೆ

೧೪
ಕೇಳಿದಿರಾ, ಗಿರಣಿಯ ಕರೆ?
ಎದ್ದೇಳಿರಿ, ಹಿಡಿಯಿರಿ ಶೇಂಗಾ ಬೆಲ್ಲಾ
ಉದ್ಯೋಗ ಸಿಕ್ಕೇಸಿಗುವುದು ನಿಮಗೆಲ್ಲಾ
ಇದು ಬೇಡಾದರೆ ಸ್ಟ್ಯಾಲಿನ್ ಇಲ್ಲೇ ಇಲ್ಲಾ!
೧೫
ಅಂವಾ ಇಲ್ಲೇ ಇಲ್ಲಾ
ಅದು ಹ್ಯಾಂಗಿಲ್ಲಾ?
ವಾಯುರೂಪದಲಿ ಇಹನಲ್ಲಾ!
ಎಲ್ಲರ ಉಸಿರಾಟವೂ ಅವನೇ ಅಲ್ಲಾ!
೧೬
ಶ್ರೀಮಂತಿಗೆ ಗೊನೆ ಬಂತಲ್ಲಾ
ಬಾಳಿಗಿಡಾ ಕಡೀಬೇಕಲ್ಲಾ
"ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ
ಮಾಧವನೀತನ್ ಪೆರನಲ್ಲಾ"
ಸ್ಟ್ಯಾಲಿನ್ ಇಂದೂ ಇಹನಲ್ಲಾ!

ರಚನೆ : ೧೯೫೩

ಭಾವ : ಅಮರ ಸ್ಟ್ಯಾಲಿನ್ ಕುರಿತು.

ಶಬ್ದಾರ್ಥ : ಯದ್ವಾತದ್ವಾ=ಹೊಂದಿಕೆ ಇಲ್ಲದ ಮಾತು. ಕರಡೀಕೂದಲಾ=ಅಭಯದ ಸಂಕೇತ.

೨೩ ಶ್ಲೀಲ

೧

ಗಾಳಿ! ಗಾಳಿ! ಶಾಂತ ಗಾಳಿ!
ಸುಳಿದಾಡುತ್ತ ಇದೆಯಲ್ಲಾ
ಬೆಳುದಿಂಗಳದೇ ಲೇಪವಾಗಿ
ಲುಪ್ತಕ್ಕೆ ತಾ ಎಡೆ ಇಲ್ಲಾ.

೨

ಶ್ಲೀಲ ಎಂಬುದು ಅರಳಿದ ಹೂವು
ಸುಗಂಧಿ ಭಾಷೆ-ನಾವು ನೀವು!
ಊರ್ಧ್ವ ದೃಷ್ಟಿಯು ಮೇಲಾಗಿರಲು
ಮಿಂಚಿನ ನೃತ್ಯವು ತೂಗಾಡಿರಲು

೩

ಅಂಗಳದಲ್ಲಿ ಪ್ರಕಾಶ ಹರಡಲು
ಆಗಸವಾಯಿತು ಹಂದರವು
ಅಳತೆ ಎಂಬುದು ಎಲ್ಲಿದೆ ಇಲ್ಲಿ
ಶಿವನ ತಾಂಡವಕೆ ನೆಲಿ ಇಲ್ಲಾ ಇಲ್ಲಿ.

೪

ಚಂಚಂ ಚಮತ್ತು ಎಲ್ಲೂ ಇಲ್ಲಾ
ಚಂಚಲತೆ ಅದು, ಬೇಕಿಲ್ಲಾ
ಯಮಕಾ, ಗಮಕಾ, ಡೌಲಿನ ನಡಿಗೆ
ಎಂದೂ ನಾವು ಸಾಕಿಲ್ಲಾ.

೫

ಕಣ್ಣಾಗ ಧೂಳಿ ಹಾರಿಸಿಬಿಟ್ಟರೆ
ಹಗಲು ರಾತ್ರಿ ಇಲ್ಲಿಲ್ಲಾ
ಕೌರವ, ಪಾಂಡವ ಯುದ್ಧ ಸಾರಲು
ಕೃಷ್ಣಲೀಲೆಗೆ ಸ್ಥಳವಿಲ್ಲಾ.

೬

ಜಾಲಂಧರನಾ ಬಂಧನದಲ್ಲಿ
ಪ್ರೇಮ ಕೂಡಾ ನರಳಿತು
ತ್ರಿಭುವನದಲ್ಲಿ ಬ್ರಹ್ಮಚಾರಿತನಾ
ಓಂಭಿಕ್ಷೆ ಬೇಡಿತು.

೭
ಅಶ್ಲೀಲತೆ ತಾ ದಾಟಿತು ಮೇರೆ
ಶಬ್ದದ ಶ್ಲೇಷಕೆ ಬೆಲೆ ಇಲ್ಲಾ
ವಿಷದ ನಾಲಿಗೆ ಕಟ್ಟಿಯೆ ಬಿಟ್ಟರೆ
ಪ್ರಾಣದ ಆಟವು ಮುಗೀತಲ್ಲ.
೮
ಶುದ್ಧ ಕಾಮವು ಮನೆಯ ಮಾಡಲು
ಕೇಳಬಲ್ಲೆವು ಕೊಳಲ ಸ್ವರಾ
ವೃಂದಾವನದಾ ಪವಿತ್ರ ತುಳಸಿಗೆ
ಶ್ಲೀಲ ಮಂಜರಿ ಬಿಟ್ಟಿತಲಾ !

ಭಾವ : ಶ್ಲೀಲ ಹಾಗೂ ಅಶ್ಲೀಲದ ಮೇರೆ ಕುರಿತು.

೨೪ ಕರೆ

'ಚಲೋ ಮಚ್ಛಿಂದರ ಗೋರಖ ಆಯಾ'
ನಿನ್ನವನೇ ನಾ, ಇದು ನಿನ್ನ ಮಾಯಾ!

೧

ನೀ ಮಾಡೋದು ಸಾಕಷ್ಟಿದೆ
ಸುಮ್ಮನೆ ಕೂತರೆ ಏನಿದೆ?
ಮೋಡದ ಹಿಂದೇ ಅಡಗಿರೆ
ರವಿ ಕಾಣದೆ, ನಡಗುತ್ತಿರೆ ॥ ಚಲೋ....................

೨

ಸಂದೇಶ ಗಾಳಿ ತಲುಪಿದೆ
ಎತ್ತೆತ್ತಲೂ ತುಂಬಿ ಇದೆ
ದರ್ಶನಕ್ಕಾಗಿ ಕಾತುರ
ಆವರಣ ಸರಿಸು. ಆತುರ ॥ ಚಲೋ....................

೩

ಯಾತರಾಗ ಏನೂ ಇಲ್ಲಾ
ಹಿಗ್ಗ್ಯಾವ ದಿಶಾ ಎಲ್ಲಾ
ಕೃಪಾಕಟಾಕ್ಷಕ್ಕ ಬೇಡಿಕೆ
ಇಡೇರಿಸು ನೀಡಿಕೆ ॥ ಚಲೋ....................

೪

'ಅಲಖ್ ನಿರಂಜನ್, ಅಲಖ್ ನಿರಂಜನ್'
ಈ ಸೃಷ್ಟಿ ನಿನ್ನದೇ ರಂಜನ
ಬೇಗ ಹಾಕು, ಕಣ್ಣಿಗೆ ಅಂಜನ
ಬ್ರಹ್ಮಾನಂದದ ಕರೆ
ಗುಂಜಾರವವೊ ತಾ, ಬಾ, ನಡಿ ॥ ಚಲೋ....................

ಭಾವ : ಬ್ರಹ್ಮಾನಂದ ಪ್ರಾಪ್ತಿಗಾಗಿ ಕೊಟ್ಟ ಕರೆ.

೨೫ ಕಥೆಯ ಕಥೆ

೧
ಒಬ್ಬ ಇದ್ದಾ ಮೀಂಗುಲಿಗಾ
ಈಸತಿತ್ತು ಒಂದು ಮೀನಾ
ಹಾಕಿದಾ ಅದಕ್ಕ ಗಾಳಾ
'ಜನ್ಮಕ್ಕ ಬಂದದ್ದs ತಪ್ಪು'
೨
'ಹುಟ್ಟ್ಯಾರ ಯಾರೋ ಮಗನs ?'
ಕಪ್ಪಿ ಗುಟುರು ಹಾಕತಿತ್ತು
ಇಲ್ಲದವರು ಸಾಯಬೇಕು
ಉಳ್ಳವರು ಬಾಳಬೇಕು
ತೆರವುಗಾದಿ ! ಗುಲಾಮರು
ಏರಿ ಕೂಡಬೇಕು.
೩
ಇದs ಇಂದಿನ ವರೆಗಿನ ಕಥಿ
ಆಮಿಷಕ್ಕ ಹಾಕ್ತಾರ ಬಾಯಿ
ಬೀಸಾಡಿದ ಭಕ್ಕರಿ ತಿನ್ನತದ ನಾಯಿ !
ಒದ್ದಾಡಿ, ಒದ್ದಾಡಿ ಸಾಯ್ತಾರ
ನೋಡಿ ನಗಾವರು ನಗ್ತಾರ
ಬದುಕಿಸೋ ಅವರು ಎಲ್ಲಿ ಸಿಗ್ತಾರ ?
'ನೀ ಇರುವಿ ನನ್ನ ಜೀವ ಫಲಾ'
ನುಂಗಲಾರೆ ; ಉಗಳಲಾರೆ.
೪
ತಂದಿ ಯಾರು, ಹೇಳಲಾರೆ
ಹೇಳಿದವಳs ಛೀಕಾರಿ;
'ಛೀ ಅಂತಾರ', ಥೂ ಬಿಡ್ತಾರ
ಎಲೀ ಅಡಕಿ ತಿಂದದ್ದು ಉಗುಳ್ತಾರ
ಪಿಕದಾಣ್ಯಾಗ.
ಸುಳ್ಳು ಸುದ್ದಿ ಹಬ್ಬಸ್ತಾರ
ತಮ್ಮ ಓಣ್ಯಾಗ.

೫
ಅವರ ಓಣ್ಯಾಗ ಅವರS ರಾಜಾ
ಹಚ್ಚತಾರ ಬ್ಯಾಂಡ ಬಾಜಾ
ನಮ್ಮ ಮಾತೆಲ್ಲಾ ಅವರಿಗೆ ಕಸಾ
ಕಣ್ಣು ಹೊಡದು, ಕರದಾ ಅರಸಾ
ಸಂಜೀ ರಸಿಕಾ! ಎಲ್ಲಾ ಮರತಾ
ಇಂಥವರದS ಕಾಲಾ. ನಿಜಾ.
೬
ಇಲಿಗೆ ಬೆಕ್ಕು ಸಾಕ್ಷಿ
ಬೆಕ್ಕಿಗೆ ಆಟಾ; ಇಲಿಗೆ ಪ್ರಾಣ ಸಂಕಟಾ
ಬೆಕ್ಕು ಮಾಡಿತ್ತು 'ಸಲಾಂ'
ಒಪ್ಪಂದ ಆಗಿತ್ತು
ಎಲ್ಲಾ 'ಬೇಮಾಲುಂ'
ಒಬ್ಬರ ಮಾರಿ, ಇನ್ನೊಬ್ಬರು ನೋಡ್ತಾರ
ಇಬ್ಬರೂ ಗೋಣು ಹಾಕಿ
ಅದೃಶ್ಯ ಆಗ್ತಾರ!
೭
ಖರೇ ಕಳ್ಳರು ಯಾರು ಹೇಳ್ರಿ
ನಡವ ಬಾಯಿ ಹಾಕಿದವರS
ಸಾಯ್ತಾರ್ರೀ. ಸುಭಾಷಿತ ಹೇಳಿ, ಏನು ಮಾಡ್ತೀರಿ?
ತುಪ್ಪಾ ಕುಡೀತಾರ; ಗಸಿ ಉಗಳ್ತಾರ
ಸತ್ಯ ಹೇಳಿದವರ ಮಾರೀಮ್ಯಾಗ.
ಹಿಂಗ ಅದ ನೋಡ್ರಿ! ಇಂದಿನ ಈ ಜಗಾ.

ರಚನೆ : ೧೯೫೩

ಭಾವ : ಉಳ್ಳವರ ಉದ್ಧಟ ನೀತಿ ಕುರಿತು.

ಶಬ್ದಾರ್ಥ : ಪಿಕದಾಣಿ=ಉಗಳುವ ಪಾತ್ರೆ. ಬೇಮಾಲುಂ=ತಿಳಿಯದ ಹಾಗೆ ಎಲ್ಲವನ್ನೂ ಸರಿಪಡಿಸುವಿಕೆ.

೨೬ ಖಟಕ್ ಖಟಕ್

ಖಟಕ್, ಖಟಕ್ ಅಂತದ
ಎಲ್ಲ್ಯೋ ಏನೋ ಆಗ್ಯದ
ಗಾಡಿ ನಿಲ್ಲಸೋ, ಯಜಮಾನಾ ! ॥ ಪಲ್ಲವಿ ॥

೧
ಗಿಡಗಂಟಿಯ ಕಿರ್ ಕಾಡು
ಹಳ್ಳಾ ಕೊಳ್ಳಾ ಲೆಕ್ಕ ಇಲ್ಲಾ
ಗಾಡಿಗೆ ದಾರಿ ಸಿಕ್ಕಿಲ್ಲಾ.
'ತವರು ಮನೀ ಕೇಳಿ ನೋಡು' ॥ ಖಟಕ್....................

೨
ಯಾಕೋ ಸಂಕಟ ಆಗ್ತದ
ಗಂಟಲದಾಗ ಅಡಕಿ ಸಿಕ್ಕ್ಯದ
ಉಸಿರಾಡಸಲಿಕ್ಕೆ ಆಗಲೊಲ್ಲದು
ಮೈ ಬೆವರು ನಿಲ್ಲಲೊಲ್ಲದು ॥ ಖಟಕ್....................

೩
'ಒಂದು ಗುಟುಕ ನೀರು
ಕುಡದು ನೋಡ್ತೇನಿ;
ಕೈಕಾಲು ಆಡಿಸಿ
ತೆರವು ಮಾಡ್ತೇನಿ''
'ರೊಟ್ಟೀ ಗಂಟಽ ಮರತೆ'
ಆಗಬಾರದ್ದು ಆತು ಚಿಂತೆ ॥ ಖಟಕ್....................

೪
''ಸ್ವಲ್ಪ ಗಾಳಿ ಬರಲಿ ದೂರಾಗರಿ
ಹೆನ್ನೆರಡು ಹೊಡೀತೇನು ನೋಡರಿ
ಭಯ, ನಡುಕ ಸಾಕಾತರಿ
ಬದುಕೋ ಖಾತರಿ ಇಲ್ಲರಿ'' ॥ ಖಟಕ್....................

೫
ಇಳಿಜಾರಿಗೆ ಗಾಡಿ ಉರುಳಿತು ನೋಡರಿ
ಇಲ್ಲೆ ರಾತ್ರಿ ಕಳೆಯೋದು ಪಾಡರಿ
ಎತ್ತಿನ ಕೊಳ್ಳು ಹರಿದು, ಗಿಡಕ್ಕ ಕಟ್ಟರಿ
ಏನು ಮಾಡ್ತೀರಿ ? ಏನು ನೋಡ್ತೀರಿ ನನ್ನ ಮಾರಿ ॥ ಖಟಕ್....................

ಭಾವ : ಸಂಕಟದಲ್ಲಿ ಸಿಕ್ಕ ಜೀವಿಯ ಕೂಗು.

೨೭ ಒಗಟಾ - ಹಾಳೀ ಹಡಗಾ

೧

‘ಒಗಟಾ’ ಎಂಬುದು ಹಾಳೀ ಹಡಗಾ
ಮಕ್ಕಳ ಆಟದ ಹಾಳೀ ಹಡಗಾ
ಏರಿದೆ, ಸಾಗಿದೆ, ಇತ್ತ ಅತ್ತ ಹೊಯ್ದಾಟಾ
ತೇಲುವುದೋ ? ಮುಳುಗುವುದೋ ? ಈ ಮಾಟಾ !

೨

‘ಸರ್ಪ-ನಿಚ್ಚಣಿಕೆ’ ಯಂತಹ ಈ ಆಟಾ
ದುಂಡಗಿನ ಪೃಥ್ವಿಯಂತಹ ತಿರುಗಾಟಾ
ಮೂಲ ಇದ್ದಲ್ಲಿ ತಲಪುವುದು ನಿಯಮಾ
ಮಡಚಿದ ಹಾಳಿ ಬಿಡಿಸಿದರ ಚೌಕು, ಸಮಾ

೩

ಹಾಳಾಗುವುದು ಎಂಬ ಮಾತSS ಇಲ್ಲಾ
ಹಾನಿಯಾಗುವ ಸಂಭವಾ ಇಲ್ಲಾ
ಆರೂಪಕ್ಕ ಕೊಟ್ಟ ರೂಪವೇ ಎಲ್ಲಾ
ಇಲ್ಲಿ ಅಲ್ಲಿ ಒಂದೇ ಎಂಬಂತಿದೆ ಎಲ್ಲಾ

೪

ಕಲೆ ಬಲ್ಲವನು ಅರಿವನು ಈ ಮರ್ಮಾ
ಗೋಪಿಯರು ಅರಿವರು ಕೃಷ್ಣನ ಧರ್ಮಾ
ಶಕ್ತಿರಹಿತ ಶಿವಾ ಮಾಡನು ಹಿತ ಕರ್ಮಾ
ಉಸಿರಾಟವೇ ಇರದ ದೇಹಾ, ಬರೀ ಚರ್ಮಾ.

೫

ನಾಟಕಾ ಅಂಬೋದು ಹೊಂದಾಣಿಕೆ
ತಪ್ಪರು ಅವರವರ ಎಣಿಕೆ
ಇಲ್ಲಿಯ ಯುದ್ಧದಾಗ ಸಾವಿಲ್ಲ
ಆದರೂ ನಟನೆ ಮಾಡಬೇಕಲ್ಲಾ ?

೬

ಭಾಷೆಯ ಗೊಂದಲಾ ಭಾವದಿಂದ ಶಮನಾ
ಎಂಥಾ ಶತ್ರುವೂ ಮಾಡುವನು ನಮನಾ
ರುಚಿ ಇದ್ದ ಅಭಿರುಚಿಗೆ ಮರಣಾ ಇಲ್ಲಾ
ರಸಾನುಭೂತಿಗೆ ಕೊನೆ ಎಂಬುದೇ ಇಲ್ಲಾ.

೭
ಕಿವಿಗೊಡು ಹೃದಯದ ಹೇಳಿಕೆಗೆ
ತೂಕ ತಪ್ಪದಿರು ಬಾಳಿಕೆಗೆ
ಸೂರ್ಯಾಸ್ತಾ ಅಂದ್ರ ನಾಶವಲ್ಲಾ ಬೆಳಕಿಗೆ
ಸುಖ ದುಃಖಾ ಸುತ್ತಾಟಾ ಈ ಹಡಗಿಗೆ.

೮
ಬುದ್ಧಿಯ 'ಟಗರು ಹೋರಾಟ' ಸಾಕು ಮಾಡು
ಜ್ಞಾನಿ ಅನಿಸಿಕೊಳ್ಳುವ ಅಹಂಕಾರ ಬಿಡು
ತೂಕಾ, ಛಂದಾ, ಮೇಳಾ ಸಾಧಿಸುತ್ತ ಇರು
ಮಡಿಕೆ ಮಡಿಕೆ ಬಿಚ್ಚಿದ ಹಾಳಿಯಂತೆ ಸ್ಥಿರವಿರು.

ಭಾವ : ಜೀವನ ಸಿದ್ಧಾಂತ.

೨೮ ಸ್ವಾನಂದ ವಾತ್ಸಲ್ಯ

ಸ್ವಾನಂದ ವಾತ್ಸಲ್ಯ ಅರಳಿದೆ
ಮಾಗಿದೆ, ಹಬ್ಬಿದೆ ಜಗದಲ್ಲಿ ॥ ಪಲ್ಲವಿ ॥
೧
ನರನರಗಳ ಸಂಚಾರಾ
ಮನ ಮೆಚ್ಚಿಸುವ ಉಚ್ಚಾರಾ
ಹುಟ್ಟುವುದು, ಸಾಯುವುದು
ಅಮರವಾಗಿರುವುದು ವಿಸ್ತಾರಾ
೨
ಚಿಗಿಯುವುದು, ಜಿಗಿಯುವುದು
ಚಿತ್ತದಲ್ಲಿ ಒಡನಾಟಾ
ಗೆಲ್ಲುವುದು, ಸೋಲುವುದು
ಗಾಳಿಯಲ್ಲಿ ಹರಿದಾಟಾ
೩
ಬಾಳಿರಿ, ಬಾಳಿಸಿರಿ
ನಂದದಂತೆ ಬೆಳಗಿರಿ
ಮುಚ್ಚುಮರೆ ಮಾಡದೆ
ಒರತೆಯಂತೆ ಜೀವಿಸಿರಿ

ಭಾವ : ಜೀವನದ ಜೀವಂತಿಕೆ

೨೯ ಅಂಕುರ

೧
ಭ್ರಮವಲ್ಲಾ
ಶ್ರಮವಲ್ಲಾ
ತಮವಲ್ಲಾ
ಮಿಂಚುವ ಛಂದಾ-ಅಂಕುರಾ
೨
ಭೂ-ಭವದಲ್ಲಿ
ಅನುಭವದಲ್ಲಿ
ಹೊಸ ಹೊಸದಾಗಿ
ಇರುವುದು, ಅರಿವು-ಅಂಕುರಾ
೩
ತನು-ಧನವಾಗಿ
ಜನ-ಮನವಾಗಿ
ಘನ-ಘನವಾಗಿ
ರೂಪ ಪಡೆವ ಪ್ರಕಾರಾ-ಅಂಕುರಾ
೪
ಶೈಶವದಿಂದಾ
ಮಾಧವದಿಂದಾ
ಶಿವ ಶುಭಕ್ಕಾಗಿ
ಭಾವಸ್ಥಿರವಾಗು, ಆಗು-ಅಂಕುರಾ

ಭಾವ : ಮೊಳಕೆ ಒಡೆಯುವ ವಿಧಾನ.

೩೦ ಸ್ವಪ್ನ

೧

ಕಣ್ಣಿಗೆ ಕಂಡೂ ಅದು ನಿಜವಲ್ಲಾ
ಹಿಡಿಯಲಿಕ್ಕೆ ಅದು ಮೃಗವಲ್ಲಾ
ಕುಡಿಯಲಿಕ್ಕೆ ಅದು ನೀರಲ್ಲಾ
ಬಿಸಿಲುಗುದುರೆಯಂತೆ ಇದು-ಸ್ವಪ್ನ

೨

ಸಮೀಪಕ್ಕೆ ಕಂಡರೂ ಸಮೀಪವಲ್ಲಾ
ದೂರ ದೂರಕೆ ಸರಿದರೂ ಮುಗಿಯುವದಿಲ್ಲಾ
ಮೌನದ ವೀಣೆ! ಬಾರಿಸಿದರೂ ಧನಿ ಇಲ್ಲಾ
ಗೂಢ! ಕ್ಷಿತಿಜದಂತೆ ಇದು-ಸ್ವಪ್ನಾ!

೩

ನೀರಿನಲ್ಲಿ ಇದೆ, ಕಣ್ಣು ಮುಚ್ಚಾಟ ಆಡುತಿದೆ
ಮಣ್ಣಿನ ಕಣ ಕಣ ಅರಳಿ ಶಿಖರವಾಗಿದೆ
ನೀರಿನಲ್ಲಿಯ ಮೀನದಂತೆ ಸುಳಿದಾಟವಿದೆ
ದೃಶ್ಯ, ಅದೃಶ್ಯದಂತೆ ನಡುಗಡ್ಡೆ, ಇದು-ಸ್ವಪ್ನಾ!

೪

ನಿರಾಕಾರಕ್ಕೆ ಮೂಲ ಸಾಕಾರಾ
ಸತ್ಯಕ್ಕೆ ವಿವಿಧ ಆಕಾರಾ
ಭಾವದಲ್ಲಿ ಜನನ, ಮರಣ ಪ್ರಕಾರಾ
ತಮ, ತೇಜ ಅಡಗಿದಂತೆ, ಇದು-ಸ್ವಪ್ನಾ!

ಭಾವ : ಸ್ವಪ್ನ ರೂಪಕ ಮಾಲೆ.

೩೧ ಇಂಥಾವರನ್ನ ನಂಬೋದು ಹ್ಯಾಂಗ ?

೧
ಹಾದಿಹೋಕರು ಮಾತಾಡೇ ಮಾತಾಡ್ತಿದ್ದರು
ಇಬ್ಬರಿಗೂ ದಾರಿ ಗೊತ್ತಿಲ್ಲಾ ಸುತ್ತಾಡ್ತಿದ್ದರು
''ನನಗ ಗೊತ್ತಿಲ್ಲೇನು ? ನೂರು ಸಲಾ ಬಂದೇನಿ''
ಇಂಥಾವರನ್ನ ನಂಬೋದು ಹ್ಯಾಂಗ ?

೨
ಸಾಹಿತ್ಯ ಅಂದ್ರ 'ಚಹಾದ ಜೋಡಿ ಚಿವಡಾ' ಅಲ್ಲಾ
''ಇಲ್ಲಿ ಸಲ್ಲುವವರು, ಅಲ್ಲಿಯೂ ಸಲ್ಲುವರಲ್ಲಾ''
ಸಲ್ಲೋದು ಅಂದ್ರ ಏನು? ಗೊತ್ತಿಲ್ಲಾ ಅಂದ್ರ
ಇಂಥಾವರನ್ನ ನಂಬೋದು ಹ್ಯಾಂಗ ?

೩
'ಕೆಮ್ಮಿಗೆ ಔಷಧ ಕೊಡ್ತೇನಿ' ಕರಕೊಂಡು ಹೋದಾ
ಹಾವಿನ ಹೆಡೀ ಮ್ಯಾಲೆ ನೂಕಿ ಬಟ್ಟಾ
'ಈ ಜನ್ಮದಾಗ ನೀ ಕೆಮ್ಮುದಿಲ್ಲಾ' ಅಂದಾ
ಇಂಥಾವರನ್ನ ನಂಬೋದು ಹ್ಯಾಂಗ ?

೪
ಸಮಾಜ ಅಂದ್ರ ಹಿಂಗs ಇರೋದು
'ಸಾಮಾಜಿಕ ಪ್ರಜ್ಞೆ' ಅಂದ್ರ ಬೆಂಕೀ ಹಚ್ಚೋದು
ಆರಸಲಿಕ್ಕೆ ಆಗದ ಮುಂದಾಳು ಇರ್ತಾರ
ಇಂಥಾವರನ್ನ ನಂಬೋದು ಹ್ಯಾಂಗ ?

೫
ಭಂಗೀ ಕೆಲಸಾ ಮಾಡಲಿಕ್ಕೆ ಹೇಸಬಾರದು
ಅಸತ್ಯಾ ಎಂದೂ ಮಾತಾಡಬಾರದು
ಹಿಂಸೆಗೆ ಬೆಂಬಲಾ ಕೊಡಬಾರದು
ಹೇಳಾವರs ಸಾಕಷ್ಟಿದ್ದಾರಲ್ಲಾ-
ಇಂಥವರನ್ನ ನಂಬೋದು ಹ್ಯಾಂಗ ?

೬
ಬೆಳೀ ಜೋಡಿ ಕಸಾ ಬೆಳಿಯೋದs
ಶುದ್ಧಿ, ಅಶುದ್ಧಿ, ಕಲಬೆರಕಿ ನಡೆಯೋದs
'ಇವು ಇಲ್ಲಾ' ಅಂತ ಉಬ್ಬುಬ್ಬಿ 'ವರದಿ' ಓದತಾರಲ್ಲಾ-
ಇಂಥಾವರನ್ನ ನಂಬೋದು ಹ್ಯಾಂಗ ?

೭
ಕದಡು ನೀರು ತಾವs ಸ್ವಚ್ಛ ಆಗ್ತದ
ಬೆಣ್ಣಿ ಇದ್ದರ ತಾವs ತೇಲ್ತದ
ತುಪ್ಪದಾಗ ಗಸಿ ಕೆಳಗ ಇರ್ತದ
ಹಿಂಗs ಆಡೋ ಷಂಡರಿದ್ದಾರಲ್ಲಾ
ಇಂಥಾವರನ್ನ ನಂಬೋದು ಹ್ಯಾಂಗ ?
೮
ದೀನ, ದಲಿತ, ಬಡವರ ಬೆನ್ನು ಕಟ್ಟತಾರ
'ಇವರ ಉದ್ಧಾರ ಮಾಡ್ತೇವಿ' ಅಂತಾರ
'ಹಣೇ ಬರಹಾ ಸುಳ್ಳು ಆಗದು' ನಂಬಸ್ತಾರ-
ಇಂಥಾವರನ್ನ ನಂಬೋದು ಹ್ಯಾಂಗ ?
೯
'ಬೆಲ್ಲದ ಗಣಪತಿ' ಮಾಡಿ, ಪೂಜೀ ಮಾಡಿ
ಕುಂಡೀ ಚಿವುಟಿ, ಪ್ರಸಾದ ಅಂತ ಹಂಚತಾರ
ಅದನ್ನ ತಿಂದರ, ಕಹಿ ಹ್ಯಾಂಗ ಹತ್ತೀತು ?
ಇಂಥಾವರನ್ನ ನಂಬೋದು ಹ್ಯಾಂಗ ?

ಭಾವ : ನುಡಿ-ನಡೆಯ ಅಂತರ ಮೀಮಾಂಸೆ.

೩೨ ಮೂರು ಮಂಗಗಳು

“ಮಂಗ್ಯಾ ! ಅಂದ್ರ ಅಂದುಕೊಳ್ರಿ
ನಮ್ಮದೇನೂ ಡೊಂಕು ಆಗೋದಿಲ್ಲ”
ಎಂದು ಒಂದು ಮಂಗ್ಯಾ ನುಡಿದಾಗ,
ಸ್ವಾತಂತ್ರ್ಯೋತ್ತರ ಕಾಲದ ಒಬ್ಬ ಪ್ರಜೆ ಅಂದದ್ದು ಹೀಗೆ :

ಬಾಯಿ ತಗದ್ರ ಹೋಗ್ತದ ಕಿಮ್ಮತ್ತು
ಬಾಯಿ ಮುಚ್ಚಿ ಮಾಡ್ತಾರ ಹಿಕ್ಮತ್ತು.

ಆಳಾವ್ರು ಆಗ್ಯಾರ ಒಗಟಾ
ದೇಶಾ ಮಾರಲಿಕ್ಕೆ ನಿಂತಾರ ಸಗಟಾ

ಮತಾ ಕೊಟ್ಟಾವ್ರು ಮೂರ್ಖರು ನಾವು
‘ತಿಪ್ಪೀ ಬಿದ್ದಾವ್ರು’ ಯಾರ್ ಹೇಳ್ರಿ ನೀವು

ಸಾಮಾಜಿಕ ಸಮಸ್ಯೆ ಕಲ್‌ಬಂಡೆ
ತಲೆ ಅಪ್ಪಳಿಸಿ ಕತ್ತಲೆ ಕಂಡೆ

ಏಕೀಕರಣಕ್ಕ ಬೇಕು ಒಕ್ಕಟ್ಟು
ಒಡಕು ಹುಟ್ಟಿಸಿ ಮಾಡ್ತಾರ ಬಿಕ್ಕಟ್ಟು

ಆಗಾವ್ರು ಹಾಕ್ತಾರ ನೂರೂರು ಜಾಲಾ
ಆಗದವ್ರು ನೆಕ್ಕುತ್ತಾರೆ ಅವರ ಕಾಲಾ

ನಗಬ್ಯಾಡ್ರಿ ಕಂಡಾವು ಹಲ್ಲು
ನ್ಯಾಯಾ ಸುರಸ್ತದ ಜೊಲ್ಲು

'ಕುಡಿ ಬ್ಯಾಡ್ರಿ' ಅಂತಾರ ಬಲ್ಲವರು
ಇದನ್ನ ಹೇಳಿ ಕುಡಿತಾರ ತಿಳಿದವರು

'ಕಣ್ಣ ಇದ್ದು ಕುರಡರ್‍ಹಾಂಗ
ಕಿವಿ ಇದ್ದು ಕೆಪ್ಪರ್‍ಹಾಂಗ
ಬಾಯಿ ಇದ್ದು ಮೂಕರ್‍ಹಾಂಗ
ಮಾಡಬಾರದಣ್ಣಾ'
ಪ್ರಜಾರಾಜ್ಯದಾಗ
ಇವರನ್ನ ಬಿಟ್ಟು
ಯಾರೂ ಇಲ್ಲಣ್ಣಾ!

ಇದಕ್ಕs ಅಂಬೋದು ಸ್ವಾತಂತ್ರ್ಯ
ಇದು ಬಿಟ್ಟು ಎಲ್ಲಾ ಪರತಂತ್ರ

ಮಂಗ್ಯಾನ ಚಾಷ್ಟಿ ಇವs ಎಲ್ಲಾ
ಇಂದಿನ ಆದರ್ಶ ಆಗ್ಯಾವಲ್ಲಾ!

ರೊಕ್ಕಾ ಒಗದರ, ಹೆಣಾ ಬಾಯಿ ತಗೀತಾವ
ಹಣಾ ಇಲ್ಲದವರ ಹೆಣಾ ದಿನಾನು ಬೀಳ್ತಾವ.

ಭಾವ : ಕಣ್ಣು, ಕಿವಿ, ಬಾಯಿ ಮುಚ್ಚಿದ ಮಣ್ಣಿನ ಮೂರ್ತಿಯ ಸಂಕೇತ ಕುರಿತು ಚಿಂತನ.

ಶಬ್ದಾರ್ಥ : ಸಗಟಾ=ಸಂಪೂರ್ಣ.

೩೩ ಗಜ್ಜರಿ

೧

ಗಜ್ಜರ್ಯಪ್ಪಾ ಗಜ್ಜರಿ !
ರತ್ನ ಪರೀಕ್ಷೆಯ ಹಾಡರಿ !
ಹೊರಗಿನ ಮೈಯ ಪೆಂಪುರಿ !
ಕಣ್ಣಿಗಷ್ಟೇ ತಂಪರಿ !

೨

ಕೆಂಪು ಬಣ್ಣಾ ನೋಡಿದ ನನ್ನ
ಮನಸ್ಸಿಗಾಯಿತು ಒಪ್ಪರಿ
ಹಲ್ಲಿಗೆ ಏನೋ ನಾಟದಾಗ
ಇತ್ತು ಉಸುಕಿನ ಹಳ್ಳರಿ !

೩

ಕಣ್ಣು, ಮೂಗು, ಮಾಟರಿ
ತಲೆ ತುಂಬಾ ಹೇನರಿ
ನಾಲಿಗೆ ತುರಿಕೆ ಹೆಚ್ಚು
ಸ್ವಂತ ಬುದ್ಧಿ ಇಲ್ಲರಿ.

೪

ಪ್ಯಾಟಿ ಧಾರಣೆ ದಿನದ ಹುಚ್ಚು
ಅದು ಯಾರಿಗೆ ನೆಚ್ಚು ಮೆಚ್ಚು
ಸಂಸ್ಕಾರ ಕಳಕೊಂಡ ರೀತಿ
ಹುಡಕೋದು ಎಲ್ಲೆ ನೀತಿ ?

೫

ಒಂದೇ ಮಾತಿಗೆ ಎರಡೆರಡರ್ಥ
ಎಲೆಲ್ಲೂ ತುಂಬಿದೆ ಸ್ವಾರ್ಥ
ಬಿಚ್ಚಿ ಹೇಳಲು ಬಾರದು ಏನು ?
'ತನ್ನದ ಹೆಚ್ಚು' ಅಂತದ ತಾನು

೬

ತಿನ್ನೋ ಮೊದಲ ವಿಚಾರ ಮಾಡು
ತಿಂದ ತಪ್ಪಿಗೆ ನಾಚಿ ಏನು ?
ಕಣ್ಣು ಕೆಂಪು ಮಾಡಿದರೂನು
ತೀರಸಲಾರಿ ನಿನ್ನ ಸೇಡು.

ಭಾವ : ಬಾಹ್ಯ ಸ್ವರೂಪ ಮೋಸ ಮಾಡುವ ಸಾಧ್ಯತೆ ಇರುತ್ತದೆ. ಬಾಹ್ಯಕ್ಕೆ ಮರುಳಾಗಬಾರದು.

೩೪ ಅಮರ

ಒಂದೇ ಓಜಾ, ಒಂದೇ ತೇಜಾ
ದಿನದಿನವೂ ಪ್ರೇಮರಸ ರಾಜಾ !

ಕುಂದದು, ಕಳಿಯದು
ಮರಣೋತ್ತರವೂ ಉಳಿವುದು

ಇದೇ ಅಮರ ಅಮೃತ
ಜೀವನದ ಸುಕೃತ !

ರಚನೆ : ೧೯೫೪

ಭಾವ : ಒಳ್ಳೆಯ ಕೃತಿಯ ಮೌಲ್ಯ-ಅಮರತ್ವ

೩೫ ಅಸೂಯೆ ಅನಸೂಯೆಯ ಜೊತೆ

ಅಸೂಯೆ ಅನಸೂಯೆಯ ಜೊತೆಯಲ್ಲಿ ॥ ಪಲ್ಲವಿ ॥

ಗುಪ್ತಾತ್ರು ನೆನೆಸಿದೆ ನೆಲವನ್ನು
ನಕ್ಷತ್ರ ಕುಣಿಸಿದೆ ಮಿಂಚನ್ನು

ಸ್ಮರಣೆ ಕೋಣೆಯ ದೇವ ದೀಪಾ
ಮರಣ ಎಂಬುದು ಜೀವ ಸಮೀಪಾ

ಹಿಮವನು ಕರಗಿಸಿ ವಸಂತ ಬಂದಾ
ಪಿಕಗಳ ಕಂಠಾ ಮತ್ತೆ ತಂದಾ

ವಾತ್ಸಲ್ಯ ತುಂಬಿತು ಬಾಯಿಯಲ್ಲಿ
ಕಾಮನ ಜೀವಾ ಶರದಲ್ಲಿ

ರಚನೆ : ೧೯೫೪

ಭಾವ : ಅಸೂಯೆ, ಅನಸೂಯೆ ಕುರಿತು ಚಿಂತನ.

೩೬ ಅಳಿಯಾ ಮಾವನ ಮನೆ ತೊಳೆಯಾ

೧

ಸ್ವಾರ್ಥದ ನಾಲಿಗೆ
ಪರಾರ್ಥ ನುಡಿದು
ಜಗದಲಿ ಮೆರೆದಿತ್ತು
ಯಾರಿಗೆ ಯಾರು ?
ಮಗಳಿಗೆ ತವರು !
ಅಳಿಯನ ನುಡಿ ಇತ್ತು.

೨

ಮಾವನ ಮನೆಯಲಿ
ಸಂಪತ್ತಿರಲು
ಸುಲಿಗೆ ನಡೆದಿತ್ತು
ಕರ್ತವ್ಯದ ಮುಸುಕು
ಹಾಕಿ, ನಸುಕಿನಲಿ
ದಾಳಿಯ ಮಾಡಿತ್ತು.

ರಚನೆ : ೧೯೫೪

ಭಾವ : ಆಧುನಿಕ ಅಳಿಯಂದಿರ ರೀತಿ.

೩೭ ಅಸೂಯೆ

೧
ಪ್ರೇಮದ ಬಳ್ಳಿಗೆ
ಅನಸೂಯಾ ಹೂ
ಬಳ್ಳಿಯು ತೂಗಾಡಿದೆ
ಕಾಮುಕತನ ತಾ
ಅಸೂಯೆಯಾಗಿ
ಜ್ವಾಲಾರಸ ಉಕ್ಕಿದೆ.
೨
ವಿಷಯನು ಕುಡಿಯಲೆ ?
ಶೂಲವ ಏರಲೆ ?
ಎನುತಿದೆ ಆ ಬುದ್ಧಿ
ಹೃದಯಾಘಾತವು
ಸಂಭವವಾಗಿ
ಪಡೆಯಿತು ತಾ ನಿದ್ದಿ.

ರಚನೆ : ೧೯೫೪

ಭಾವ : ಅಸೂಯೆಯ ಫಲವನ್ನು ಕುರಿತು.

೩೮ ನಕ್ಷತ್ರದ ಹೃದಯ ಮಂದಿರ

೧

ನಕ್ಷತ್ರದ ಹೃದಯ ಮಂದಿರದಲಿ
ಬೆಳುದಿಂಗಳ ರಾತ್ರಿ
ಜೋಡುಹಕ್ಕಿ ತಾಽ ಗೂಡು ಹೊಕ್ಕು
ನಂಬಿದೆ ಇದು ಖಾತ್ರಿ.

೨

ಅತ್ರಿ ಕುಲಕ್ಕೆ ಮೈತ್ರಿಯ ಗುಣವು
ಹುಟ್ಟಾ ಹುಟ್ಟಿತ್ತು
ವಸುದೇವ-ದೇವಕಿ-ಕೃಷ್ಣನ ನಂಟು
ಹುಟ್ಟೂ ಗೊತ್ತಿತ್ತು.

೩

ಸುರರು ಕುಡಿದಾ ಸೋಮರಸವು
ಚಂದ್ರಾ ಆಗಿತ್ತು;
ಅಸುರರು ಕುಡಿದಾ ಅಮೃತದಿಂದಾ
ರುಂಡಾ ಹಾರಿತ್ತು.

ರಚನೆ : ೧೯೫೪

ಭಾವ : ಕೃಷ್ಣ ಜನನ, ಸುರ ಹಾಗೂ ಅಸುರರ ರೀತಿ ಕುರಿತು.

೩೯ ಅನಾರಕಲಿ

೧

ಅನಾರಕಲಿ !
ಬಕುಲದ ಈ ಮಾಲಿ !
ಭೂಪತಿಯ ತುಳಿತಕ್ಕೆ
ಆದಳು ಮೂಕಬಲಿ

೨

ಸ್ವಯಂ ಪ್ರಕಾಶದ
ಚಿತ್ ವಸ್ತುವಿಗೆ
ಇಲ್ಲಾ ಅಸ್ತೋದಯಾ
ಶುಚಿರ್ಭೂತ ಸುಪ್ರೀತ ನೀತಿಗೆ
ಎಲ್ಲಿ ಇರುವುದು ಭಯಾ ?
ವಾಸನೆಯ ವಕ್ರಗತಿಗೆ ಎಂದಿಗೂ
ಇಲ್ಲವೆ ಇಲ್ಲಾ ದಯಾನಯಾ.

೩

ಸ್ವಯಂ ಪೂರ್ಣಳು - ಅನಾರಕಲಿ !
ಹಳಸಳು ಎಂದೂ - ಅನಾರಕಲಿ !
ಅಖಂಡ ವಿಕಸಿತ - ಅನಾರಕಲಿ !
ಬಕುಲದ ಮಾಲಿ - ಈ ಅನಾರಕಲಿ !

ರಚನೆ : ೧೯೫೪

ಭಾವ : ಅನಾರಕಲಿ ದುರಂತ ಕುರಿತು.

೪೦ ಸುರಾಪಾನ ಪ್ರತಿಬಂಧ

೧
ಸುರಾಪಾನವು ತಲೆಗೆ ಏರಿ
ಅಪಾನವಾಯು ಹಬ್ಬಿತು
ನೀತಿಯ ಗೋಡೆ ಹಾರಿ ಹೋಗಿ
ಅನೀತಿಯು ತಾಽ ಹಬ್ಬಿತು.

೨
ಅಧಿಕಾರದಽ ದೆವ್ವದ ನೃತ್ಯಾ
ನ್ಯಾಯವನ್ನೆ ಕೊಂದಿತ್ತು
ಗೀತಾವಚನವ ಬಾಯಿಲೆ ಹೇಳಿ
ಕುತ್ತಿಗೆ ಹತ್ತಿಕ್ಕಿತ್ತು!

೩
ಪ್ರಜಾರಾಜ್ಯದ ಹೆಸರನು ಹೇಳಿ
ಸರ್ವಾಧಿಕಾರ ಮೆರೆದಿದೆ
ಸುಳ್ಳಿನ ವರದಿಗೆ ಹಣವನು ತಿಂದು
ಬೆಣ್ಣೆಯನ್ನು ಸವರಿದೆ.

೪
ಪಾನಪ್ರತಿಬಂಧ ಚಳುವಳಿ
ಪ್ರತಿದಿನವೂ ಸಾಗಿದೆ
ಪ್ರಗತಿಯ ರೀತಿ ಇದೇ ಆಗಿರೆ
ತನ್ನ ಗೋರಿ ಕಟ್ಟಿದೆ.

ಭಾವ : ಪಾನಪ್ರತಿಬಂಧ ದಿನದ ಸ್ಮರಣೆ.

೪೧ ಧ್ವನಿ-ಗಂ! ಹಂ! ಝುಂ!

ಗಂ ಗಂ-
ಗಂಗಾ ದಂಡೆಯ ಮೇಲೆ
ನವಿಲಿ೯ನಾ ನೃತ್ಯಾ
ಕಾರ್ತಿಕ ಸ್ವಾಮಿ! ಬೆನ್ನು ಏರಿ
'ಹೊತ್ತಿಗೆ'ಽ ಕೃತ್ಯಾ!

ಹಂ ಹಂ-
'ಹಂಬಾ' ವೃಂದಾವನದಲಿ
ಆಕಳ ಆ ಕರೆಗೆ
ಕರ ಓಡಿತ್ತು ಎಲ್ಲಿಗೋ ಏನೋ
ಕಾಣದು ಈ ಬದಿಗೆ

ಉ ಊ-
ಊದಿತು ವಿಶ್ವನಾಥನಾ
ದೇವಾಲಯ ಶಂಖಾ
ನಡೆಯಿರಿ, ಪಡೆಯಿರಿ ನೀವು
ದರ್ಶನವಿಲ್ಲಿ ಸುಖಾ

ಝುಂ ಝುಂ-
ಝಾಂಗಟಿ, ಮೃದಂಗ, ತಾಳಾ
ಭಕ್ತಿಯ ಕುಣತಕ್ಕೆ
ಭೀಮಾತಟದಲಿ ಕರೆಯುತ್ತಿಹನು
ವಿಠ್ಠಲ ಕೊಡು ತೆಕ್ಕೆ

'ಕನಕ ಕಿಂಡಿ' ಬೆಳಕನು ಕಂಡಿ
ಮೂರ್ತಿಯ ವಲಯವದು
ಧ್ವನಿಯನು ಅರಿತರೆ, ಭವವನು ಮರೆತರೆ
ಕೀರ್ತಿಯು ಮೆರೆಯುವದು.

ರಚನೆ : ೧೯೫೮

ಭಾವ : 'ಧ್ವನಿ' ಭಾವವಾಗಿ ಅರ್ಥವನ್ನು ಹುಟ್ಟಿಸುವ ರೀತಿ ಕುರಿತು.
ಶಬ್ದಾರ್ಥ : ಹೊತ್ತಿಗೆ=ಸಮಯಕ್ಕೆ ಸರಿಯಾಗಿ.

೪೨ ಬಂತಪ್ಪಾ ಪ್ರತಿಮಾ ಕುದರಿ !

ಹೋಳಾಗರ‍್ಯಪ್ಪಾ ಹೋಳಾಗರ‍್ಯಪ್ಪಾ ಹೋಳಾಗರಿ
ಬಂತಪ್ಪಾ ಪ್ರತಿಮಾ ಕುದರಿ !
ಹೋಗಬ್ಯಾಡ್ರಿ ನೀವೆಲ್ಲಾ ಹೆದರಿ ॥ ಪಲ್ಲವಿ ॥

೧

ಈ ಲೋಕದಾಗ। ತುಂಬ್ಯದ ಕಸಾಽ
ಚಂದ್ರಲೋಕಕ್ಕ। ಹಾರ‍್ಯದ ಹೊಸಾಽ
ಸಂಧ್ಯಾಽ ಬಂದಾಳ। ನೀರು ತಂದಾಳ
ಹಾಕ್ತಾಳ ಅಂಗಳಕ್ಕ ಥಳಿ.

೨

ಯಾರೀಕಿ ಹೊಸ ಬಾಲಾ। ರವೀ ಕಿರಣದಽ ಕರಕಿ
ತಿನಸ್ಯಾಳ ಕುದರಿಗೆ ಬೆರಕಿ !
ಹಿಂಗಾಲು ಹಾರಸ್ತದ। ಮುಂಗಾಲು ಚಾಚ್ತದ
ಮೈಮ್ಯಾಲೆ ಬಂತಪ್ಪಾ ಕುದರಿ
ಹೋಗಬ್ಯಾಡ್ರಿ ನೀವೆಲ್ಲಾ ಹೆದರಿ.

೩

ಚಂದ್ರಲೋಕಕ್ಕ ಹೋತಲ್ಲಾ ಹಾರಿ
ಮೈಯಾಗ ಸೇರ‍್ಯಾಳ 'ಮಾರಿ'
ಲಗಾಮಕ್ಕಽ ಕೈ ಹಾಕಿ। ಕಡಿವಾಣ ಜಗ್ಗರಿ
ಮಾಡತಿರಾ ನೀವು ಸವಾರಿ ?

೪

ಕಾಮನ ಬಿಲ್ಲು ಕರೀತದ
ಮೋಡಾ ಹಂದರಾ ಹಾಕ್ತದ
ಮಿಂಚೂ ಬೆಳಗ್ತದ ದೀಪಾ
ತುಂತುರ, ತುಂತುರ ಮಳೆ
ಕುದರಿ ಮುಖಕ್ಕ ಏರ‍್ಯದ ಕಳೆ.

೫

ನೆಲದ ಕಿಮ್ಮತ್ತು ಇಲ್ಲಾ
ಆಕಾಶಕ್ಕ ಜಿಗಿತು ಅಲ್ಲಾ।
ಸಾಗರ ಜಲಾ ಒಂದು ಅಚ್ಚರಿ
ಕಲ್ಪನಾಕುದರಿ ಮೆಚ್ಚರಿ.

೬

ಮೀನಕ್ಕ ಜಾಲಾ ಹಾಕರಿ
ಬೇಡರ ಬಲಿನೂ ನೆಯರಿ
ಉಪಮಾ ! ರೂಪಕಾ ! ಯಾತಕ್ಕ
ನೋಡಿರಿ ವನದಾ ಹೂವು
ಹೇಷಾರವ ಕೇಳ್ರಿ ನೀವು.

೭

ಪೂರ್ವಗ್ರಹಗಳು ಬೇಡಾ
ಚದುರಿ ಹೋದವು ನೋಡಾ
ಬಿಸಿಲುಗುದುರಿ ಬಂತು
ಮಳೀ ಎಲ್ಲಿಗೆ ಹೋತು ?
ಲಾಯದ ನೆನಪು ಆತು
ಬಂತಪ್ಪಾ ಪ್ರತಿಮಾ ಕುದರಿ !
ಹೋಗಬ್ಯಾಡ್ರಿ ನೀವೆಲ್ಲಾ ಹೆದರಿ.

೮

ಬಾಲಕರು ತಟ್ಟತಾರ ಚಪ್ಪಾಳಿ
ಕೈಕೋಲು, ಕಡಗ ಹಿತ್ತಾಳಿ
ಕುಣಸ್ತಾರ, ಕುಣೀತಾರ-ದಾಸರು
ಇಲ್ಲಾ ಎಂದಿಗೂ ಬ್ಯಾಸರು
ವಿಠ್ಠಲಾ ಪ್ರತ್ಯಕ್ಷ ರಾಧೆಗೆ
ಇಂಥಾ ಸುಖಾಸಿಕ್ಕಿತ್ತು ಯಾರಿಗೆ ?

೯

ಕಂಡವು ಕೃಷ್ಣನ ಅಂಬೆಗಾಲು
ಅಚ್ಚರಿ ಪಟ್ಟಿತು ಗೋಪಿ ಸಾಲು
ಯಶೋದೆ ಕಡೀತಿದ್ದಳು। ಮಜ್ಜಿಗಿ
ಬೆಣ್ಣೆ ಅಂತಿತ್ತು। ಮತ್ತ ಮತ್ತ ಜಿಗಿ।
ಬೆಣ್ಣೀಗೆ ಕೈ ಹಾಕಿದಾ ಕೃಷ್ಣಾ
ವಿತೃಷ್ಣಾ ಆಗ್ಯಾನ ಕೃಷ್ಣಾ
ತಾಯಿ ಕೊಡ್ತಾಳ। ಕೈ ತುತ್ತು
ಅಲ್ಲೇ ವಿಶ್ವರೂಪಾ ಇತ್ತು
ಬಂತಪ್ಪಾ ಪ್ರತಿಮಾ ಕುದರಿ
ಹೋಗಬ್ಯಾಡ್ರಿ ನೀವೆಲ್ಲಾ ಹೆದರಿ.

೧೦
ಕಂಠದ ಹರ್ಷಾ। ಮೋಡದ ಸ್ವರಾ
ಯಶೋದೆ ಮೈ। ಆತು ಮಯೂರಾ
ರೋಮಾಂಚನ। ನಡೆಸಿತು ನೃತ್ಯಾ
ಇದು ಕೃತಾರ್ಥದ ಶತಕೃತ್ಯಾ.
೧೧
ಕಂಡಿತು ಆರ್ಷ ದೃಷ್ಟಿ
ಕವಿಯದು ಅಲ್ಲಾ ಸೃಷ್ಟಿ
'ಅಂಬಿಕಾತನಯದತ್ತ' ವೃಷ್ಟಿ
ಸಮರಸವೇ ಸಮಷ್ಟಿ
ಬಂತಪ್ಪಾ ಪ್ರತಿಮಾ ಕುದರಿ
ಹೋಗಬ್ಯಾಡ್ರಿ ನೀವೆಲ್ಲಾ ಹೆದರಿ.

ರಚನೆ : ೧೯೫೮

ಭಾವ : ಬೇಂದ್ರೆಯವರ ಚೊಚ್ಚಲ ಮೊಮ್ಮಗಳು ಪ್ರತಿಮಾ-ಪಾಂಡುರಂಗನ ಮಗಳು. ಅವಳು ಕಟ್ಟಿಗೆ ಕುದರೆಯ ಮೇಲೆ ಕೂತು ಆಡುವುದನ್ನು ನೋಡಿ, ಸೃಷ್ಟಿಸಿದ ಕಲ್ಪನಾರಮ್ಯಗೀತ.

ಶಬ್ದಾರ್ಥ : ಬೆರಕಿ=ಚತುರ. ಕೈತುತ್ತು=ಚಿಕ್ಕಮಕ್ಕಳಿಗೆ ಊಟ ಉಣಿಸುವ ರೀತಿ.

೪೩ ಆರತಿ

ಜಯದೇವಿ ಜಯದೇವಿ ಪ್ರತಿಮಾ ! ನೋಡು
ಆರತಿ ಬೆಳಗುವ ಅಜ್ಜನ ಹಾಡು ॥ ಪಲ್ಲವಿ ॥

೧

ನಸುಕಿನ ಮೊದಲೇ ಎದ್ದು ಆಡುವೆ
'ಸಕ್ಕರೆ ನಿದ್ದೆ'ಯ ತುಡುಗು ಮಾಡುವೆ
ಕಕ್ಕಾ, ಅತ್ಯಾ ಸುತ್ತೂಮುತ್ತೂ,
ಹಾಽಹಾಽ ಹೂಽಹೂಽ ನಡದೇ ಇತ್ತು!

೨

ಬೆಳಗಿನ ಕಸವದು ಉಡುಗುವದಿತ್ತು
ನಿನ್ನದೇ ರಸವು ಹೊರಸೂಸಿತ್ತು!
ಅಡುಗೆ ಮನೆಯು ಮುಚ್ಚಿಯೆ ಇತ್ತು
ಉಪವಾಸ ವ್ರತವು ಎಲ್ಲರದಿತ್ತು!

೩

ಸುಳ್ಳೇ ನಗುವು ; ಸುಳ್ಳೇ ಅಳವು
ನಿನ್ನದೇ ಮಾತು ಕೊನೆ ಆಗಿತ್ತು
ನಿನ್ನ ಸೇವೆಗೆ ಸೇವಕರಿಲ್ಲಾ
ಎಂಬ ದೂರು ಮಾಡುವೆಯಲ್ಲಾ?

ರಚನೆ : ೧೯೫೮

ಭಾವ : ಪ್ರತಿಮಾಳ ಬಾಲಲೀಲೆ ಕಂಡು ಅಜ್ಜ ಹಾಡಿದ ವಾತ್ಸಲ್ಯದ ಆರತಿ.

೪೪ 'ಬೂ' ಹೋಗೋಣು

೧
ಪ್ರತಿಮಾ ಹಟಾ ಮಾಡ್ತಿದ್ಲು
'ಬೂ' ಹೋಗೋಣು
ಬೆಕ್ಕು ಒಂದು ಅಡ್ಡು ಹೋದ್ರS
ಮನೀಗೆ ತಿರುಗೋಣು
೨
ಪಾತರಗಿತ್ತಿ ಓಡಿಯಲುಬೇಕು
ಹಾರಿ ಓಡಿದಳು
'ಸಿಗಲೆ ಇಲ್ಲಾ' ನಿಮ್ಮದೆ ತಪ್ಪು
ಎಂದು ಚೀರಿದಳು
೩
ಬೆಚ್ಚಿಬಿದ್ದು ಗಾಬರಿಯಾದಾ
ಪಂಡರೀರಾಯಾS
ಚಪ್ಪಾಳೆ ತಟ್ಟಿ ನಕ್ಕೀಬಿಟ್ಟಳು
ಹುಡುಗಿ, ಈ ಮಾಯಾ !.

ರಚನೆ : ೧೯೫೮

ಭಾವ : ತಂದೆ-ಮಗಳು ಇವರಲ್ಲಿ ನಡೆಯಬಹುದಾದ ಬಾಲಲೀಲೆ ಕಲ್ಪಿಸಿ ಬರೆದ ಅಜ್ಜನ ಗೀತ.

ಶಬ್ದಾರ್ಥ : 'ಬೂ' ಹೋಗೋಣು=ಅಡ್ಡಾಡಲು ಹೋಗೋಣು ಎಂದು ಚಿಕ್ಕಮಕ್ಕಳಿಗೆ ಹೇಳುವ ರೀತಿ.

ವಿಶೇಷ : ಪಂಢರಿರಾಯಾ=ತಂದೆ ಪಾಂಡುರಂಗ.

೪೫ ಯಾವ ದೇವರ ಪ್ರತಿಮೆ ?

ಯಾವ ದೇವರ ಪ್ರತಿಮೆ
ಮನೆಗೆ ಬಂದಿತ್ತು!
ಹೊಸಾ ಗಾಳಿ, ಹೊಸಾ ದಾಳಿ
ಮನೆಯ ಬೆಳಗಿತ್ತು ॥ ಪಲ್ಲವಿ ॥

೧
ತುಟಿಯ ಮಾಟಾ ಹೊಸತು ಅಲ್ಲಾ
ಅದೇ ಜೊಲ್ಲು! ಅದೇ ಸೊಲ್ಲು!
ಹಣೆಯ ವಾಸನೆ, ಹಳೆಯದಲ್ಲಾ
ಮೂಗು ಮೂಸಿ ಕುಣಿಯಿತಲ್ಲಾ!

೨
ಕಣ್ಣುಮುಚ್ಚಿ ನೋಡಬೇಕು
ಯಾರದೀ ಸಾಕಾರವು ?
ಮನೆಯ ಹಾದಿ ನೆನಪು ಇಟ್ಟು
ಮರಳುವ ಈ ಆಟವು !

೩
ಎಲ್ಲಿ ನಾನು ಮೊದಲು ಕಂಡೆ
ತಿಳಿಯದು ಪ್ರಾರಬ್ಧವು !
ಅಪೂರ್ವ ! ಅನನ್ಯ ! ಘಟನೆ
ನನಗೆ ಹೇಗೆ ಲಬ್ಧವು ?

೪
ಮನೆಯ ಬೆಕ್ಕು, ಮನೆಯ ನಾಯಿ
ಗುರುತು ಹೇಗೆ ಹತ್ತಿತು ?
ಅಂತಃಕರಣದ ರೀತಿ ಹೀಗೆ
ಮನವು ಮನವ ಮಿಡಿದಿತು !

೫
ಅಂಗಾಂಗ ರೋಮ ರೋಮವು
ಆನಂದ ಉಕ್ಕಿತು
ಮನೆಗೆ ಬರುವ ಹೋಗುವ ಜನಕೆ
ನಾಕೂ ದಿಕ್ಕೂ ತೆರೆಯಿತು.

೬

ಎಲ್ಲ ಮನೆಗಳಲ್ಲೂ ಇದೇ
ನಡೆದು ಬಂದ ರೀತಿಯು
ಕಣ್ಣು ಕಣ್ಣು ಕೂಡಿದಾಗ
ಮಿಂಚು ಮಿಂಚುವ ಪ್ರೀತಿಯು !

ರಚನೆ : ೧೯೫೮

ಭಾವ : ಚೊಚ್ಚಿಲ ಮೊಮ್ಮಗಳು ಪ್ರತಿಮ್ಮಾ ಇವಳನ್ನು ಕುರಿತು.

೪೬ ಹೂಬತ್ತಿ!

೧

ಫೂ! ಫೂ! ಫೂ! ಫೂ!
ಊದುವೆ ನಾನು
ದೃಷ್ಟಿಯಾಗದಿರಲಿ;
ನೇತಿ, ನೇತಿ, ನೇತಿ
ಹೇಳುವೆ ನಾನು
ಉಪಮೆ ಏನು ಕೊಡಲಿ?

೨

ತುಂಬಿತು, ತುಳುಕಿತು
ಹರಿಯುವುದನ್ನು
ಹೇಗೆ ತಡೆಯಬೇಕು?
ಬಾಯಿ ಬಂದುದು ಆಡದೆ
ಸುಂಸುಂ ಇರುವ
ಕಲೆಯ ಕಲಿಯಬೇಕು.

೩

ಮಾನಸ ಪೂಜೆ ನಡೆದು ಬಿಟ್ಟರೆ
ಬಾಗಿಲವನು
ತೆರೆಯದಿರಲಿ ಹೇಗೆ?
ಬಾ, ಬಾ, ಎನ್ನುವ ತೊದಲು ಮೊದಲಿಗೆ
ಪ್ರತಿನುಡಿಸದೆ
ಸುಮ್ಮನಿರಲಿ ಹೇಗೆ?

೪

ತಮ್ಮಷ್ಟಕ್ಕೇ ತಾವೇ ಎಲ್ಲಾ
ನಡೆದಿದೆಯಲ್ಲಾ!
ಸ್ನೇಹದ ಈ ಮಾತು!
ತಾಳಕ್ಕೆ ತಕ್ಕ ರಾಗವು ಸಾಗಿ
ತುಪ್ಪದ ದೀಪದ
ಹೂಬತ್ತಿ ಹೂತು!

ರಚನೆ : ೧೯೫೮

ಭಾವ : ಚೊಚ್ಚಿಲ ಮೊಮ್ಮಗಳು ಪ್ರತಿಮಾ ಇವಳನ್ನು ಕುರಿತು.
ಶಬ್ದಾರ್ಥ : ಸುಂಸುಂ=ಸುಮ್ಮನೆ ಇರಲು ಆಜ್ಞೆ ಮಾಡುವ ಬಗೆ.

೪೭ ಲಾಲಿ

ಜೋಜೋ, ಜೋಜೋ, ಜೋಜೋ ಪ್ರತಿಮಾ ತಾಯಿ!
ಹುಚ್ಚವ್ವಾ, ಮುಚ್ಚವ್ವಾ ಬ್ರಹ್ಮಾಂಡ ಬಾಯಿ ॥ ಪಲ್ಲವಿ ॥

೧

ಧಾರವಾಡಕ್ಕ ಬಂದಳು ಬುದಗಾಂವದ ಅಕ್ಕಾ
ಆಕಿ ಕೈಯ್ಯಾಗ ವಿನಾಯಕ ಸಿಕ್ಕಾ
ಎಲ್ಲರೂ ಮುಗಿಬಿದ್ದು ಕೊಡ್ತಾರ ಚುಂಬನಾ
ಕನ್ನಡ-ಮರಾಠಿಗೆ ಮರ್ಮ-ಬಂಧನಾ.

೨

'ಅಂಧೇರಿ'ಯಲ್ಲಿ ಜನ್ಮ ಪಡೆದೆ ನೀ
ಅಮ್ಯಾಲೆ ಹೋದಿ ಬುದಗಾಂವಕ್ಕ ನೀ
ಧಾರವಾಡ ಆತು ಲೀಲೆಯ ರಂಗಾ
ಪುಣೆಯಲಿ ನೆನೆವನು ಆ ಪಾಂಡುರಂಗಾ.

೩

'ಮಲಗವ್ವಾ' ಚುಕ್ಕು ಬಡಿವಳು ತಾಯಿ
ಲಾಲಿಪದ ಹಾಡಿತು ಅಜ್ಜಿಯ ಬಾಯಿ
ಕಂಠವು ಒಡೆಯಿತು ಕೂಗಿತು ಕೋಗಿಲೆ
ಋತು ವಸಂತಾ ಬಂತು ಮಂಗಲೆ!

೪

ಮಂಗಲಾ ಕಟ್ಟಿದಳು ಬಾಗಿಲ ತೋರಣಾ
ಬಾಳ ಕಕ್ಕಗ ನೀ ತೋಳಾಭರಣಾ
ಎಲ್ಲರ ಗಲ್ಲಕ್ಕೂ ಮುದ್ದಿನ ಶಿಕ್ಕಾ
ಇದ ನೋಡಿ ಅಜ್ಜಾ, ಮುಸುಮುಸು ನಕ್ಕಾ.

೫

ಹಾದೀಲೆ ಹೋಗಾವರು ನಿನ್ನ ನೋಡುವರು
ಬೀದಿಗೆ ಹೋದಾಗ ಎತ್ತೆತ್ತಿಕೊಳ್ಳುವರು
ನಿನ್ನ ಸೇವೆಗೆ ಸಿದ್ಧ ವಸುಂಧರಾ ತಾಯಿ
'ಬಾಬಾ' 'ಬಾಬಾ' ಕರೆವುದು ಬಾಯಿ

೬
'ಮೆರ್‍ರಿ ಗೋ ರೌಂಡ' ನಿನಗೆ ಆಟಕ್ಕೆ
ಸುತ್ತಲೂ ನೋಡಲು ಬೇಕು ಏತಕ್ಕೆ?
ಸಾಕು ನಿನ್ನ ಆಟಾ ಮಲಗೊಮ್ಮೆ 'ದೆವ್ವಾ'
ಎಲ್ಲಾರ ಕೈ ಬಿಡು, ನಿದ್ದೆ ಮಾಡವ್ವಾ

ರಚನೆ : ೧೯೫೮

ಭಾವ : ಮೊಮ್ಮಗಳು ಪ್ರತಿಮಾ ಅವಳ ಬಾಲ್ಯದ ಆಟಗಳನ್ನು ನೆನೆದು.

ವಿಶೇಷ : ಪಾಂಡುರಂಗ, ವಸುಂಧರಾ=ಪ್ರತಿಮಾಳ ತಂದೆ, ತಾಯಿ.
ಬಾಳ, ವಿನಾಯಕ=ಕಕ್ಕಂದಿರು, ಮಂಗಲಾ=ಅತ್ತ್ಯಾ.

೪೮ ಪ್ರಭಾಕರ

೧

‘ಪ್ರಭಾಕರಾ’ ಗುರುವರಾ !
ನಿನ್ನ ಪ್ರಸಾದಾ ಈ ಕುವರಾ
ಮೊದಲ ಮೊಮ್ಮಗನಾಗಿ
ವಂಶದ ಕುಡಿಯಾಗಿ
ಬೆಳೆದು, ದೀಪವಾಗಿ
ಕೀರ್ತಿ ಹಬ್ಬಲಿ ಅಂಬರಾ
ನಾ ದಿಗಂಬರಾ, ವಿಶ್ವ ಸಂಚಾರಿ !
ನನಗೆ ಹತ್ತದು ನೆಲಿ
ತಿಳಿಯದು ಬೆಲಿ
ನಿನ್ನ ಪಾದಕ್ಕಿಟ್ಟ ಈ ಪುಷ್ಪ
ನಿನ್ನ ಶಿರಸ್ಸಿಗೆ ಭೂಷಣವಾಗಲಿ.

೨

ಸೋಪಾನಕ್ರಮಾ
ಒಂದು ವ್ಯವಸ್ಥೆ
ಅದು ತಿಳಿಯದೆ
ಹೋಳೆಯದು ಕಥೆ
ಕಾಲಿದಾಸನ ಹೆಸರು
ದತ್ತನ ವಾಮನನವರೆಗೆ ಬಂತು
‘ಪ್ರಭುವೆ’ ಮುಂದೆ ಸಾಕ್ಷಿ
ಪ್ರಮಾಣವಾಗಬೇಕು
ನೀ ಓಂ ಅಂದರ ಸಾಕು.

೩

ಇಲ್ಲೇ ಬಿತ್ತೇನಿ ೧೩೮೭
೧೯ ಗ್ರಹಣಮುಕ್ತಿ
ಮುಂದಿನ ಹಾದಿ ನಿನ್ನ ಯುಕ್ತಿ
ನೀಡಬೇಕು ಆ ಶಕ್ತಿ
ನನ್ನ ಈ ಪ್ರಭಾಕರನಿಗೆ.

ರಚನೆ : ೧೯೫೫

ಭಾವ : ಮೊದಲ ಮೊಮ್ಮಗ - ಪಾಂಡುರಂಗನ ಮಗ. ಅವನಿಗಾಗಿ ಶುಭ ಹಾರೈಕೆ.

೪೯ ಪುನರ್ವಸು

೧

ಸುಪವಿತ್ರಾ ಪುನರ್ವಸು
ಯಾವ ಆಶ್ರಮದ ಈ ಹಸು !
ಕಾಮಧೇನುವಿನ ಈ ಮನವು
ಸಕಲರ ಸುಖ ಬಯಸುವ ತನುವು
ಪಾಲಿಗೆ ಬಂದುದು ಪ್ರಸಾದವು
ಈ ನಿಲುವಿನ ನಡೆ, ನುಡಿಯಾದವು.

೨

'ಪಾಂಡುರಂಗ'ನ ಭಕ್ತಿ ಇದೆ
'ವಸುಂಧರೆ'ಯ ತಾಳ್ಮೆ ಇದೆ
'ಪ್ರತಿಮೆ'ಯ ಪ್ರೇಮವಿದೆ
'ಪ್ರಭಾಕರ'ನಾ ತೇಜವಿದೆ.
ತನ್ನ ತಾನರಿವ ಕನಸು ಇದೆ
ಈ ಆನಂದದ ಬಗೆ ಇದೆ ಇದೆ.

೩

ಇದೆ ಎಂಬುದು ಇಲ್ಲಾಗದು ಎಂದೂ
ಅದು ನನ್ನದು, ನಿನ್ನದು ಎಂದಾಗದು ಎಂದೂ
ಉದಯಾಸ್ತವಿಲ್ಲದಾ ನಿತ್ಯ ಸ್ಥಿತಿ
ಶಾಶ್ವತವಾಗಲಿ ಗತಿ ಮತಿ.

ರಚನೆ : ೧೯೬೩

ಭಾವ : ಮೊಮ್ಮಗಳು ಪುನರ್ವಸು ಕುರಿತು ಕವನ.

ವಿಶೇಷ : ಪಾಂಡುರಂಗ, ವಸುಂಧರಾ=ಪುನರ್ವಸುವಿನ ತಂದೆ, ತಾಯಿ.
ಪ್ರತಿಮಾ=ಅಕ್ಕ, ಪ್ರಭಾಕರ=ಅಣ್ಣ.

೫೦ ಸ್ಮಿತಾ

ಓ ಸ್ಮಿತಾऽ !
ಅಸ್ಮಿತಾऽऽ !
ವಿಸ್ಮಿತಾऽऽऽ ! ॥ ಪಲ್ಲವಿ ॥
೧
ನಿನ್ನವಲ್ಲಾ ನೋಡುವ ಕಣ್ಣು
ಮಮತೆऽ ಮಾವಿನ ಹಣ್ಣು
ಉಪಮೆಗೆ ಮೀರಿದ ಹೆಣ್ಣು ॥ ಓ ಸ್ಮಿತಾ.................
೨.
ಭಾವ ಭಾವಕ್ಕ ಸಂಬಂಧ ಹಣೆಗೆ
ಜೀವ ಜೀವಕ್ಕ ಹಾಕಿದೆ ಹೆಣೆಗೆ
ರಸದೋಕುಳಿ ಆದೆ ಮನಿಗೆ ॥ ಓ ಸ್ಮಿತಾ.................
೩
ಕ್ಷಣ ಕ್ಷಣಕ್ಕೂ ಬೇಕು ಪ್ರೇಮಾ
ಕೊಡವುದೇ ನಿತ್ಯ ನೇಮಾ
ಯಾವುದಕ್ಕೂ ಇಲ್ಲಾ ಸೀಮಾ ॥ ಓ ಸ್ಮಿತಾऽ.................
೪
ಸೂತ್ರಧಾರನು ಎಲ್ಲಿ ಹೇಳು
ಆತನ ಮಾತನ್ನೇ ಕೇಳು
ತಾಳ್ಮೆಯಿಂದ ಇಲ್ಲಿ ಬಾಳು ॥ ಓ ಸ್ಮಿತಾ.................

ರಚನೆ : ೩೦-೧೦-೧೯೬೬

ಭಾವ : ಮಗಳು ಮಂಗಲಾ ಕುಲಕರ್ಣಿಯ ಚೊಚ್ಚಿಲ ಸಂತಾನ ಸ್ಮಿತಾ. ಅವಳನ್ನು ಕುರಿತು ಅಜ್ಜ ಹಾಡಿದ ಹಾಡು.

೫೧ ಪಂಚಪದಿ

೧

ಮಂದಹಾಸಿನಿ ! ಸುಗಂಧ ಬಾಲೆ
ಮಂಗಲೆ ನೀ ಬಾರೆ
ಪ್ರತಿಸಲಕ್ಕೂ ಹೊಸ ಹೊಸ ಹರುಷಾ
ತಪ್ಪದೆ ನೀ ತಾರೆ.

೨

ಗರ್ಭವಾಸದಲಿ ವ್ಯಥೆಯನನುಭವಿಸಿ
ಪ್ರಭಾಕರನ ಕಥೆ ರೂಪವ ಧರಿಸಿ
ಧನ್ವಂತರಿ ಮನೆ ತೆರುವಾಗಿರಿಸಿ
ಸಕಲರ ಸುಖವಾದಿರಿ.

೩

'ಸ್ಮಿತಾ', 'ಮಿಲಿಂದಾ' ಅಕ್ಕಾ ತಮ್ಮಾ
ಇಬ್ಬರ ತುಟಿಗೂ 'ಮಕರಂದಾ'
ಜೇನಿನ ಸವಿಯದು ಸಗ್ಗದ ಸುಗ್ಗಿ
ಸವಿಯುಂಡೆನು ನಾ ಹಿಗ್ಗಿ ಹಿಗ್ಗಿ.

೪

ಸೂರ್ಯನು ಬರಲಿ, ಚಂದ್ರನು ಇರಲಿ
ಚಳಿ, ಮಳೆ, ಬಿಸಿಲು ಏನೇ ತರಲಿ
'ಕನ್ನಡ' ನಾಡಿನ ತೋಟದಿ ಮುರಲಿ
ವಿದರ್ಭದಲ್ಲಿ ನುಡಿಸಿದಿರಿ.

೫

ತರ್ಕಕ್ಕೆ ಮೀರಿದ ಮಾತೇ ಎಲ್ಲಾ
ವಿಚಾರಕ್ಕೆ ಹಾದಿ ಇಲ್ಲೆ ಇಲ್ಲಾ
ವಿವೇಕಕ್ಕೆ ಇದು ಹೊಳೆಯುವದಿಲ್ಲಾ
ಹೃದಯ ಸಂವಾದವ ಬಲ್ಲವಬಲ್ಲಾ.

ರಚನೆ : ೧೯೬೭

ಭಾವ : ಮಗಳ ಸುಖಸಂಸಾರದ ರಸಾನುಭವ.

ವಿಶೇಷ : ಪ್ರಭಾಕರ=ಅಳಿಯ, ಸ್ಮಿತಾ=ಮೊಮ್ಮಗಳು, ಮಿಲಿಂದ=ಮೊಮ್ಮಗ, ಮಕರಂದ=ಚಿಕ್ಕಮೊಮ್ಮಗ. ಅಳಿಯಂದಿರು ಆಯುರ್ವೇದ ಡಾಕ್ಟರ ಆಗಿ, ವಿದರ್ಭದ ಕನ್ನಡ ಹೆಸರಿನ ತಾಲೂಕಿನಲ್ಲಿ ಒಂದು ವರ್ಷ ಸಾರ್ಥಕ ಸಲ್ಲಿಸಿದ್ದರ ನೆನಪು.

೫೨ ವೈಖರಿ

೧
ವೈಖರಿ ಇವಳೇ ನಿನ್ನ ಬಾಳಿನ ರೇಖೆ
ನನ್ನ ಜೀವನ ಕವಿತೆಯೂ ಆಕೆ
ಸಂಬಂಧಕ್ಕೆ ಆಧಾರವು ಬೇಕೆ
ಮಿಂಚಿದ ಬಳ್ಳಿಯು-ವಿದ್ಯುಲ್ಲೇಖೆ
೨
ಅದೃಷ್ಟವು ಕಂಡಿತು ಮೋಡದೊಲು
ಅಂಕುಡೊಂಕು ಇದ್ದರೂ ಡೌಲು
ಭಾಗ್ಯ ಎಂಬುದು ಹೇಗೆಯೆ ಇರಲಿ
ಅದು ಅಲ್ಲ ಸಿಂಹ ; ಅದು ಅಲ್ಲ ಇಲಿ.

ರಚನೆ : ೧೯೭೯

ಭಾವ : ಮೊಮ್ಮಗಳು ವೈಖರಿ (ವಾಮನನ ಮಗಳು) ಕುರಿತು ಬರೆದ ಕವನ.

೫೩ ಪಂಕಜಾ

೧
'ಜಗದೀಶ'ನ ಮಗಳು ನೀನು
ನಿನ್ನ ಹೆಸರು 'ಪಂಕಜಾ'
ಪ್ರಥಮ ಮರಿಮಗಳು ನನಗೆ
ಸಂತಸದ ಹಿಗ್ಗೇ ನಿಜಾ.

೨
ಎತ್ತಿಕೊಳುವ ಶಕ್ತಿ ಇಲ್ಲಾ
ತೊಡೆಯ ಪಟ್ಟ ಕಟ್ಟಿದೆ
ಕಾವ್ಯ 'ಪ್ರತಿಮೆ' ಜೀವ ಪಡೆದು
ನನ್ನ ಪ್ರಾಣ ಸೆಳೆದಿದೆ.

೩
ನಿನ್ನ ಕಿವಿಗೆ ಮುದ್ದುಕೊಟ್ಟು
ಮಂತ್ರವನ್ನೆ ಪಠಿಸಿದೆ
ಅದರ ಫಲವ ನೀಡು ನೀನು
ನನ್ನ ಕೆಲಸ ಆಗಿದೆ.

೪
ನಿನ್ನ ಕನಸು ಆಕಾಶವಾಗಿ
ದಾಂಗುಡಿಯನು ಚಾಚಲಿ
ಬ್ರಹ್ಮ, ವಿಷ್ಣು, ಶಿವರ ಕೂಡಾ
ನಿನ್ನ ಸ್ನೇಹ ಹಬ್ಬಲಿ

೫
ಪಂಕವೆಂಬ ಪಾಪ, ಕೆಸರು
ದೂರ ಅಟ್ಟು ಬಾಲೆ
ತಾವರೆಯ ಗುಟ್ಟನರಿತು
ಕಂಪನು ಕರೆ ಕೋಮಲೆ

೬
ಒರಟುತನಕೆ ರೆಕ್ಕೆ ಕಟ್ಟಿ
ಹಾರಿಸಿಬಿಡು ಧೀರೆ ನೀ
ಮಧುರ ಮಧುರ ಮಾತನಾಡಿ
ಗೆಲ್ಲು ಮನೆಯ ಮನವ ನೀ.

ರಚನೆ : ೨೦-೯-೧೯೮೧

ಭಾವ : ಮರಿಮಗಳು ಪಂಕಜಾ ಕುರಿತು ಕವನ. ಜಗದೀಶ, ಪ್ರತಿಮಾ=ತಂದೆ, ತಾಯಿ.

೫೪ ಚಿಂತಿ ಚಿಂತಿ, ಚಿಂತಿ

ಚಿಂತಿ ! ಚಿಂತಿ ! ನೂರಾರು ಚಿಂತಿ
ಕೋಳಿ ಕೂಗಿದರೂ ಚಿಂತಿ
ಕೋಳಿ ಕೂಗದಿದ್ದರೂ ಚಿಂತಿ
ರವಿ ಉದಯ ಆದರೂ ಚಿಂತಿ
ರವಿ ಉದಯ ಆಗದಿದ್ದರೂ ಚಿಂತಿ !

ಭಜನಿಯ ಧ್ವನಿ ಹತ್ತಿದರೂ ಚಿಂತಿ
ಭಜನಿಯ ಧ್ವನಿ ಹತ್ತದಿದ್ದರೂ ಚಿಂತಿ
ಎಚ್ಚರ ಉಳಿದರೂ ಚಿಂತಿ
ಎಚ್ಚರ ಹಾರಿದರೂ ಚಿಂತಿ
ಶಿವರಾತ್ರಿ ಬಂದರೂ ಚಿಂತಿ
ಸಂತರ ಕೃಪೆ ಆದರೂ ಚಿಂತಿ
ಕೃಪೆ ಆಗದಿದ್ದರೂ ಚಿಂತಿಯೆ ಚಿಂತಿ !

ಚಿತ್ತವಾಗಲಿ ನೀರು
ಮೀನದಂತೆ ನೀ ಇರು
'ನೀ' ನನ್ನ ಚಿಂತೀ ಕಳಿ
ಸತತ ನೀಡು ದಯಾಮಳಿ
ಆಗ ನಾನೇ ನಿನ್ನ ಚಿಂತಿ
ನೀನೇ ನನ್ನ ಚಿಂತಿ.

ರಚನೆ : ೨೭-೬-೧೯೬೩

ಭಾವ : ಅನುಭಾವ ಜೀವನದಲ್ಲಿ ಚಿಂತಿಯ ಸ್ಥಾನಮಾನ ಕುರಿತು.

೫೫ ನೆನಪಾತು ಆವ್ಯಾಲೆ

ಆಮ್ಯಾಲೆ। ಅಂದರ ಯಾವಾಗ! ಮಾರ್ಗಸಿಕ್ಕಾಗ।
ಹುಡುಕಬೇಕು। ಹುಡುಕಿದೆ। ಸಿಗಬೇಕಾದಲ್ಲಿ ಸಿಕ್ಕಿತು।
ನನ್ನ ಜನ್ಮ ನಕ್ಷತ್ರ-ಮಘಾ, ನಾಥಾ।
ನನ್ನ ನಾಮಾ-ಮೀನಕೇತು।
ನೀನೇ ನನಗೆ ನೀರಾದೆ। ಆತ್ಮನಾದೆ। ಸರ್ವಾತ್ಮ।

ಇದು ಅಲ್ಲಾ ಹರಕು ಬಟ್ಟೆಯ ಕೌದಿ
ನೀನು ಹೊಚ್ಚಿದ ಹೊದಿಕೆ। ಆವರಣಾ
ಶಿವನೇ ಹೊಲದು ಕೊಟ್ಟಾ। ಎಂಬ ಭಾವಾ ನನ್ನದು।

ಇದು ಕಾಣಲು ಧೂಳಿಯ ಬಣ್ಣಾ
ರಜಾ। ತಮಾ। ಕಳೆಯುವ ಸತ್ತ್ವಾ ಒಳಗಿನದು।
ಇದು ಅಲ್ಲಾ ಭ್ರಮಾ। ಸಂಭ್ರಮಾ।
ಇದು ಸುಪಥಾ। ನೀನು ತೋರಿದ್ದು.

ಈ ಕಾಯಾ। ಏನುಪಯೋಗ ?
ಕಾಯಾ। ಕಾಮಾ। ಸಂಬಂಧಾ। ಅನಂಗಾ
ಬ್ರಹ್ಮ। ವಿಷ್ಣು। ಮಹೇಶಾ। ಸಂಗಾ
ದೇಹಕ್ಕೂ। ದೇಶಕ್ಕೂ। ಅನನ್ಯಯೋಗಾ

ಧಾರವಾಡದ। ಧಾರಾ।
ಧಾರಾತೀರ್ಥಾ। ಗುಪ್ತಶಾಲ್ಮಲಿ।
ಮುಕ್ತಾ ಗೋಕರ್ಣದ ಸಮುದ್ರಾ।

'ಅಂಬಿಕೆ' ನನ್ನ ತಾಯಿ
ಬಿತ್ತಿದಳು ಕನ್ನಡ ಭಾಷೆಯ ತಂತ್ರಾ
ತಾತಾ-ರಾಮಚಂದ್ರಾ

ಶಕ್ತಿದಾನ ಮಾಡಿದಾ-ರಾಮಮಂತ್ರಾ!
ಶ್ರಾವಣಾ ತುಂಬಿತ್ತು। ನನ್ನ ಕಣ್ಣು ಕಿವಿ।
ಅದೇ ಹೊರಹೊಮ್ಮಿತ್ತು। ಕವಿ ವಾಣಿ।
ವಾಲ್ಮೀಕಿ ವಿಪ್ರತ್ವ ತಲುಪಿದ್ದು
ಸುಪ್ರಮಾನಸದಲ್ಲಿ
ಅಲ್ಲಿಯ ದರ್ಶನಾ। ಸೀತಾ ರಾಮನ ದಾಸಿ।
ವಾಲ್ಮೀಕೀ ಹೃದಯ ಕಾವ್ಯನಿವಾಸಿ!

ಕೌಶಲ್ಯಾ ಎಂಬುದು ಕವಿಯ ಶೀಲಾ
ವೇದನೆ ಅನುಭವದ ಶಲ್ಯಾ
ಅದಕ್ಕೆ ಹಣೆ ಹಚ್ಚಿದಾಗ
ಆ ಪಾಡಾಯಿತು। ಹಾಡು।

ಇದು ನನಗೆ ನಾಥಾ-ದತ್ತಾ ಕೊಟ್ಟ ಗಾಥಾ
ಇದು ಅಲ್ಲ ಕಥಾ। ಶುದ್ಧ ಭಾವಗೀತಾ।
'ಅಂಬಿಕಾತಯದತ್ತಾ'
ಉನ್ಮನದಲ್ಲಿ ಸಂಪ್ರೀತಾ
ನೆನಪಾದದ್ದು ಅನಂತಾ।

ರಚನೆ : ೧೩-೩-೧೯೬೫

ಭಾವ : ಆತ್ಮ ಸಂಶೋಧನೆಯ ಗೀತ.

ವಿಶೇಷ : "The Mother comes in order to bring down the supramental and it is the descent which makes her full manifestation here possible" ಸುಪ್ರಮಾನಸದ ಅವತರಣಕ್ಕಾಗಿಯೇ ಶ್ರೀ ಅರವಿಂದರು ತಪಸ್ಸು ಮಾಡಿದರು. ಈ ಸುಪ್ರಮಾನಸದ ನೆಲೆಗೆ ವಾಲ್ಮೀಕಿ ತಲುಪಿದ್ದರು ಎಂಬುದು ಬೇಂದ್ರೆಯವರ ಅನುಭವ.

೫೬ ನಾಲಿಗೆ ಮೇಲಿದೆ

೧

ನಾಲಿಗೆ। ಹೇ ನಾಲಿಗೆ।
ನಿನ್ನ ಮೇಲೆಯೆ ಇದೆ,
ನೆನಪೆ ಇಲ್ಲಾ!
ಅಡ್ಡನಾಮಾ। ಉದ್ದ ನಾಮಾ
ಏನೇ ಇದ್ದರೂ। ನಾಮದ ನೆನಪು ಏಕಿಲ್ಲಾ?

ತಾರುಣ್ಯ ಎಂದರೆ। ಕತ್ತೆ ನೆಗೆತಾ
ಪಶ್ಚಾತ್ ಬುದ್ಧಿ। ಸ್ಮರಿಸು ಸದಾಶಿವಾ!
ಬಾಯಿಗೆ ಬೈಗಳಾ! ಬಂದರೂ ಬರಲಿ
ಆ ಕಾರಣಾ। ನೆನಪು ಆಗಲಿ
ನೆನಪಿಗೆ ಜಾತಿ। ಇಲ್ಲೆ ಇಲ್ಲಾ
ಮುಗದಾಣ ಹಾಕಿ। ಹಿಡಿಯಲ್ಲಾ। ನಾಮಾ ನೆನೆಸಲ್ಲಾ.

ಹಿಡಿತ ತಪ್ಪಿದರೆ। ಅನರ್ಥ ಸಂಭವಾ
ಬಾಯಿ ಹಿಡಿಯುವವರು। ಇನ್ನೂ ಹುಟ್ಟಿಲ್ಲಾ
ಆಡಿದ ಮಾತು। ಹಲವರನ್ನ ಕೊಂದಿತು।
ಬಾಳುವ ಧೈರ್ಯ। ಕೊಡಲಿಲ್ಲಾ।
ಅಂತऽ। ನಾಮಸ್ಮರಣೆ ಮಾಡಲ್ಲಾ।
ವಿಠ್ಠಲಾ! ವಿಠ್ಠಲಾ! ಅಂದ್ರ ಸಾಕು।
ರಾಮ, ಕೃಷ್ಣ, ಹರಿ। ಬಂದಾರು
ಕಲಿಕಾಲ। ಕಷ್ಟಾ। ತಿಂದಾರು
ಸ್ವಯಂಪ್ರಭಾ ಸಂವಿತ್ತು। ಅವರದು
ನೆನಸುವ ಕಾಲಾನೂ। ಬಂದೀತು.

೨

ಮಾತೆಯ ನೆನಪು। ಆಗಿತ್ತು
ಶಕ್ತಿ, ಪಾರ್ವತಿ, ಭವಾನಿ!
ಭವಕ್ಕ। ತಂದವಳऽ। ನೀ
ಅಭವ। ನಿನ್ನ ಪತಿ।
ರುಂಡ ಮಾಲೆ। ಆಭರಣಾ
ಸ್ಮಶಾನಾ। ಬೂದಿ। ಆವರಣಾ

ಹೇಗೆ ಹಿಡಿಯಲಿ। ಚರಣಾ ?
ಚರಣಾ ತರಣದ ಹಾದಿ
ನಾಚಬ್ಯಾಡಾ। ಬಾಗು। ನಮಿಸು
ಸಾಷ್ಟಾಂಗ ನಮಸ್ಕಾರ। ಹಾಕು
''ಬಾಲಕಾ ನಾ ; ಚಾಲಕಾ ನೀ''
ಅನ್ನು. ಕಾಣುವಿ ತ್ರಿಶೂಲಾ।
ಜಗದಂಬೆ। ಚಾಚಿದ ನಾಲಿಗೆ
ಅಸುರ। ಅನಿಷ್ಟ ಸಂಹಾರಕ್ಕ।
''ಹಿಂದಹೊರಳಿ। ನೋಡಬ್ಯಾಡಾ
ಭೂತಾ। ಬೆನ್ನು ಹತ್ತೀತು''।

ಪೂಜಾರಿ। ಬೇಕಿಲ್ಲಾ
'ದಲಾಲಿ'। ಅವನ ಕೆಲಸಾ
''ದೇವರು ಕೊಟ್ಟರೂ, ಪೂಜಾರಿ ಕೊಡಲಿಲ್ಲಾ''
ಮರೀಬ್ಯಾಡಾ। ಈ ಮಾತನ್ನ।
ನಾಲಿಗೆ ಅದ। ಮುಚ್ಚು ಬಾಯಿ।
ಹೊರಳಿದತ್ತ ಹೊರಳಿಸಿ। ಕೆಟ್ಟಿ ನೀನು।
ಈಗಾದರೂ ಕಲಿ-
'ಸಿಟ್ಟು, ಹಿಟ್ಟು ಮುಕ್ಕು'
ಸೆಡವು-ಹೆದರು ಬೆದರು !
ಇವು ಬೇಕಿಲ್ಲಾ।
ಬೇಕು। ಭಕ್ತಿಯ ಪ್ರೇಮಾ
ಇರಲಿ। ಒಂದೇ ನೇಮಾ।
೩
ದೇಹಾ ಅಂಬೋದು। ಗೇಹಾ
ದೇವರ ವಾಸಕ್ಕ। ಮಾಡು
ಮನಾ ತೆರವು।
ನಾಮದ ರುಚಿ। ನಾಲಿಗೆಗೆ ಇರಲಿ।
ಎರಡು ನಾಲಿಗೆ। ಬೇಕಿಲ್ಲಾ
ಅದ್ವೈತ। ಅವಿಭಕ್ತ। ಭಕ್ತಿ। ದೇಶಭಕ್ತಿ।
ಅದಕ್ಕs। 'ಸ್ವದೇಶಿ' ಅಂತ ನಾಮಾ।
ದೇಶಾ। ವಿಭಕ್ತಾ। ನೂರಾರು ಪಕ್ಷಾ।
'ಜೀ ಹುಜೂರ'। ಅನ್ನುವವರದೂ।
ಒಂದು ಪಕ್ಷಾ.

ದೇವರ ಹೆಸರಿಗೆ। ಹೆಸರಿಟ್ಟು
ಪೌರುಷದ ಮಾತು। ಆಡುತ್ತ
ಪ್ಯಾಟೀ ಸುತ್ತಾಡ್ತೋ ಅವರು। ಕೆಲವರು।
ಬೆಳಿ। ಪ್ಯಾಟಿಗೆ ಬಂದಾಗ
ಪಸಿಗಿ। ಬೇಡುವವರು
ವ್ರತದವರು। ಭಗತರು।
ಗುಂಪುಗುಂಪಾಗಿ।
ಭಂಡಾರಾ। ಭಸ್ಮಾ। ವಿಭೂತಿ।
ಹಣೆಗೆ ಹಚ್ಚಿ।
ದೇವರ ಹೆಸರಲೇ ಬದುಕುವವರು।
ತಾಟನೊಳಗೆ। ರೊಕ್ಕಾ ಹಾಕ್ತಾರ್ತೋ ಇಲ್ಲೋ
ಅಂತ। ಆಸೆಬುರುಕರಾಗಿ। ಕಾಯುವವರು।
ದೇಶ ದೇಶ। ಅಡ್ಡಾಡಿ।
ವಿಗ್ರಹ। ಸಂಧಿಗಾಗಿ ಆಗ್ರಹ।
ನೆರೆಹೊರೆ। ಶತ್ರು
ಪರದೇಶದವರು-ಮಿತ್ರರು।
೪
ಭಗವಂತನ ಹೊರತು। ಭಕ್ತರಿಲ್ಲಾ
ಓಂಕಾರ। ಸ್ವಯಂಭೂ।
ಅದಕ್ಕ। ಯಾರೂ ಬೇಕಾಗಿಲ್ಲಾ।
ಅದಽ ಕೊಡ್ತದ। ಧ್ವನಿಗೆ-ಧ್ವನಿ।
ಪ್ರತಿಧ್ವನಿ।
ಜೀವಕ್ಕ। ಜಗತ್ತಿಗೆ।
ಅವನಽ ಧನಿ। ಯಜಮಾನಾ।
ನೂರು ನಾಮಕ್ಕೂ। ಮಿಗಿಲು
ಓಂಕಾರ ನಾಮಾ।
ಒಂದೇ ಭಾವಾ। ಒಂದೇ ದೇವಾ।

ಸಾವಿರ ನಾಮದಾಗ।
ಕೃಷ್ಣಾ ಯಾರು?
ಆಗಮ್ಯಾ। ರಾತ್ರಿಯ ಜ್ಯೋತಿ!
ನಾಲಗೀ ಮ್ಯಾಲೇ। ಅದ।
ಅದರದಽ ಕಥಿ।
ಗಗನದ ತುಂಬಾ। ಅವನದಽ ವ್ಯಾಪ್ತಿ।
ಉದಯಾ ಇಲ್ಲಾ। ಅಸ್ತಾ ಇಲ್ಲಾ।
ಸತತ ತೋರು ದಯಾ।

ರವಿ। ಚಂದ್ರ। ತಾರೆ। ಅಗ್ನಿ।
ಒಂದಽ ತತ್ತ್ವಾ। ಆನೇಕ ಮುಖಾ।
ಸ್ವಯಂಪ್ರಭಾ।
ನಾವೇ ನಾವು।
ಅವನಽ। ಚಾಲಕಾ। ಸೂತ್ರಧಾರಾ।

ಅವನ ಅಂತಃಕರಣಾ
ಅತ್ಯಂತ ಮೃದು!
ನಾಲಗೆಯಷ್ಟು।
ಅಂತರಂಗದ। ಜಿನುಗು।
ಪ್ರತಿಕ್ಷಣಕ್ಕೂ। ಬೆರಗು।
ಮೌನವಾಗಿದ್ದೂ। ಸಂವಾದಿ।
ರಕ್ಷಕ। ತಂದೆ।
ಕಾಮಧೇನು! ಅಂದರೂ ಸೈ।
ಗಾಯತ್ರಿ! ತವರು ಮನೆ
ಎಲ್ಲರಿಗೂ.

ಬರುವಾಗ ಸೋಹಂ। ಹೋಗುವಾಗ ಸೋಹಂ।
ಇವನಿಗೆ। ನಾನು ದಾಸೋಹಂ।
ಪೃಥ್ವಿಯ ವಲ್ಲಭಾ। ಇವನು।
ಗಭಸ್ತಿಯಂಥಾ ತೇಜಾ!
ಸತತ ಜಾಗೃತ। ಪ್ರಕಟಾ
ಸರ್ವಸಾಕ್ಷಿ!
ಇಂಥವನ ನೆನಪು। ನೆನಸು।

ಹೇ ನಾಲಿಗೆ !
ಬ್ರಹ್ಮಚೈತನ್ಯ ! ಬ್ರಹ್ಮಾನಂದ ।
ನನ್ನ ಪಾಲಿಗೆ । ಆತ್ಮಾರಾಮ । ಶಿವರಾಮ ।
ತೃಪ್ತಕಾಮ । ಸುದಾಮ ।
ದತ್ತಚಿತ್ತ ರಾಮ । ಮೇಘಶ್ಯಾಮ ।
'ದ-ದ-ದ' ಸಂಗೀತಾ
ಇದೇ ಇದರ ಇಂಗಿತಾ.

ರಚನೆ : ೧೨-೪-೧೯೬೬

ಭಾವ : ಆತ್ಮ ಚಿಂತನ, ಆತ್ಮ ನಿವೇದನೆ.

ಶಬ್ದಾರ್ಥ : ಜೀ ಹೂಜೂರ=ವಿನಮ್ರವಾಗಿ ಆಜ್ಞೆ ಒಪ್ಪುವ ರೀತಿ. ಪಸಿಗೆ=ಬೆಳೆ ಬಂದಾಗ, ಹೊಲದಲ್ಲಿ ಕಾಳು ಹಂಚುವ ರೀತಿ. ಭಗತರು=ಭಕ್ತರು. ಗಭಸ್ತಿ=ಸೂರ್ಯ, ಕಾಂತಿ, ಕಿರಣ.

ವಿಶೇಷ : ದ-ದ-ದ=ದಮನ, ದಯೆ, ದತ್ತ.
ಔದುಂಬರಗಾಥೆ - ಸಿದ್ಧಾಂತ ಸಂಪುಟ-೬ ಕವನ-೧೩೦೭ 'ನಾಲಗೆ' ಅಭ್ಯಸಿಸಬೇಕು.

೫೭ ನಿತ್ಯಾನಂದ ಋಷಿ !

ನೀ ನಿತ್ಯಾನಂದ ಋಷಿ
ನಾ ಮಗ್ಗುಲದಾ ವಾಸಿ
'ಗಣೇಶಪುರಿ'ಯಲ್ಲಿ
ಆನಂದವಲ್ಲಿ ॥ ಪಲ್ಲವಿ ॥

೧
ದರಿದ್ರರಿಲ್ಲದಂತೆ ಮಾಡು
ದಾರಿದ್ರ್ಯವನ್ನೇ ಕಳಿ
ಎಲ್ಲರ ಬಾಯಲ್ಲುಳಿ ॥ ನಿತ್ಯಾನಂದ....................

೨
ರೋಗಗಳ ಸಂಹರಿಸು
ರೋಗಿಗಳಿಲ್ಲದಂತೆ ಮಾಡು
ನಿರೋಗಿ ಈ ನಿನ್ನ ಸ್ಥಾನಾ ॥ ನಿತ್ಯಾನಂದ....................

೩
ಅಜ್ಞಾನವನ್ನೋಡಿಸು
ಜ್ಞಾನಮನ ಕರುಣಿಸು
ಸದಾ-ಸರ್ವದಾ ॥ ನಿತ್ಯಾನಂದ....................

ರಚನೆ : ೨೧-೭-೧೯೬೬

ಭಾವ : ಮುಂಬೈ ಸಾಮಿಪ್ಯದ ಗಣೇಶಪುರಿಯ ನಿತ್ಯಾನಂದ ಸತ್ಪುರುಷರ ಪ್ರಥಮ ದರ್ಶನ ಪಡೆದಾಗ.

೫೮ ಮೂರು ನಾಕಲೇ ಹನ್ನೆರಡು

ಮೂರು ನಾಕಲೇ ಹನ್ನೆರಡು
ಹನ್ನೆರಡು ಐದಲೇ ಅರವತ್ತು
ಅರವತ್ತರ ಈ ಹೊತ್ತು
ಆಪ್ತರಿಗೂ ಗೊತ್ತು

ನೀ ನೆನೆ ಎಂಟು
ನಿನಗೂ ಅವಗೂ ನಂಟು
ಕೃಷ್ಣನು ಎಂಟನೇ ಅವತಾರಾ
ಪೂರ್ಣನು ! ಹೊರುವನು ಭಾರಾ ।

ಮನ್ಮಥಾ ಹುಟ್ಟಿದಾ । ಅಡಗಿದಾ
ಅನಂಗನಾಗಿ । ಎಲ್ಲರಲ್ಲೂ ಇಹನು
ಶಿವನಿಗೂ ಬಿಡನು ।
ಶಕ್ತಿರಹಿತ ಶಿವನು
ದಿಗಂಬರ ಭಾವದವನು
ನವಮನು !

ಹತ್ತು । ಹನ್ನೊಂದು ।
ಹನ್ನೆರಡು । ಹದಿಮೂರು
ಹದಿನಾಲ್ಕೂ ಲೋಕ ವ್ಯಾಪಿ
ಓಂಕಾರ ಸರ್ವವ್ಯಾಪಿ
ಪ್ರಣವ ಧ್ವನಿ
ಇದಽ ನೆನಿ
ಎಂಟಕ್ಕೆ ಮೂಲ
ಮಧ್ಯಬಿಂದು !

ರಚನೆ : ೨೨-೭-೧೯೬೬

ಭಾವ : ಅರವತ್ತನೆಯ ವರ್ಷ ಬೇಂದ್ರೆ ಮಾಡಿದ ಸಂಖ್ಯಾ ಚಿಂತನ. ಎಪ್ಪತ್ತನೆಯ ವರ್ಷ ಕವನ ರಚನೆ. ೧ ರಿಂದ ೧೪ ರ ಚಿಂತನಕ್ಕೆ ಅಧ್ಯಾತ್ಮದ ಹಿನ್ನೆಲೆ ಇದೆ. ಅದನ್ನು ಪ್ರಮುಖ ಮಾಡಿ ಪರಿಪೂರ್ಣನಾದ ಶ್ರೀ ಕೃಷ್ಣನ ಸ್ಮರಣೆ.

೫೯ ಕಾಲಿನ ಸೇವೆ ಮುಗಿದಿತ್ತು

'ಕಾಲಿನ ಸೇವೆಯೆ ಸಂಪತ್ತು'
ಇಂದಿಗೆ ಮುಗಿಯಿತು ಆಪತ್ತು
ಆಯುಷ್ಯ ಬೆಳೆದಿತ್ತು ಆ ಹೊತ್ತು
ದಾಂಪತ್ಯದ ಕಥಿ ಹೀಗಿತ್ತು
ಹೃದಯ ಮಿಡಿತ। ಪ್ರಾಣದ ಗತ್ತು
ಅರವಿಂದಗೆ। ಗೊತ್ತು
೨
ಕಲಕಲ ಮನವು ಕದಡಿತ್ತು
ಬಾಳಿಗೆ ಗ್ರಹಣವು ಹಿಡಿದಿತ್ತು
ಸಂಸಾರದ ನಡು ನಡುಗಿತ್ತು
ಮಕ್ಕಳ ಜೀವನ ವಿಕಲಾಗಿತ್ತು
ಕಂಠದ ಬಿಗಿ ತಾ। ಕಂಬನಿ ನೆಗೆತಾ
ಗುರುಕೃಪೆ ಅಂದರೆ ಹೀಗಿತ್ತು।
೩
ಸಾಗರದಾಟಲು ಸಾಧನ ಹುಡುಕಿತು
ವಡವಾನಲ ಕಣ್ ಕಟ್ಟಿತ್ತು
ದ್ವೈತವ ದಾಟಿ ಅದ್ವೈತವೆಂದರೆ
ತಿಳಿಯದ ಬಗೆ ಅದು ಆಗಿತ್ತು
ಕಣ್ಣನು ಮುಚ್ಚಿ। ಉಸಿರನು ಬಿಗಿದು
ಭ್ರೂಮಧ್ಯ ಹಂಸಾ ತಿಳಿದಿತ್ತು

೪

ನಾಕೂ ಕಾಲೂ ಹಾರಿಸಿ ಅಶ್ವಾ
ಹಿಂದಕೆ ನೋಡದ ದಧಿಕ್ರಾವಾ !
ಆಕಾಶಕ್ಕೆ ನೆಗೆದಿತ್ತು.
ಕೃಷ್ಣಾ ಕೃಷ್ಣಾ ಎನ್ನುತ ನಾನು
ರಾಮ ರಾಮ ಹರೆ। ರಾಮ ರಾಮ ಹರೆ
ಪತ್ನಿಯ ಶವ ತಾ ಸಾಗಿತ್ತು।

ರಚನೆ : ೧೮-೮-೧೯೬೬

ಭಾವ : ಪತ್ನಿಯ ದಹನ ಮುಗಿಸಿ ಮನೆಗೆ ಬರುವಾಗ, ದಾಂಪತ್ಯ ಜೀವನ ಕುರಿತು ಮಾಡಿದ ಚಿಂತನೆ.

ಶಬ್ದಾರ್ಥ : ವಡವಾನಲ=ಬಡಬಾನಲ=ಕಡಲ್ಗಿಚ್ಚು, ಪ್ರಳಯಾಗ್ನಿ

ವಿಶೇಷ : ೧೯೫೦ರಲ್ಲಿ ಪತ್ನಿಗೆ ಬಂದ ಮರಣವನ್ನು ಶ್ರೀ ಅರವಿಂದರ ಕೃಪೆ ಪಾರು ಮಾಡಿ, ೧೬ ವರ್ಷದ ಆಯುಷ್ಯ ದಯಪಾಲಿಸಿತ್ತು. ಆಗ ಎರಡೂ ಕಾಲಿಗೆ ಆದ 'ಇಸಬು' ಎಂಬ ಚರ್ಮರೋಗ ಕೊನೆಯ ಉಸಿರಿನ ವರೆಗೂ ಕಾಡಿತ್ತು. ಆ ಸಂದರ್ಭದ ನೆನಪೇ ಕವನದ ಪ್ರಾರಂಭ.

೬೦ ಸಖೀ

ಸಖನಿಗೆ ಬಿಟ್ಟು ಇಲ್ಲಾ ಸಖೀ
ಆಗ್ಯಾಳ ಆಕಿ ಅಂತರ್ಮುಖಿ ॥ ಪಲ್ಲವಿ ॥

೧

ಆಪತ್ತು ಸಂಪತ್ತು
ಇದ್ದಾಗ ಇತ್ತು
ನಿನ್ನಾ ಸಪ್ತಪದಿ !

೨

ಕವಡೀ ಕಿಮ್ಮತ್ತು
ಇಲ್ಲಾ ನನಗೆ. ಗೊತ್ತು
ಆದರೂ ಸಹಶಕ್ತಿ.
ನೀನು ಸ್ವಾಂತಸುಖಿ

೩

ಚಿತೆಯನ್ನು ಏರಿತ್ತು
ಅಗ್ನಿಯ ನೆಕ್ಕಿತ್ತು
ಆದರೂ ಕುಣಿದಿತ್ತು
ನೀನೇ ನವಿಲು ಸಖೀ !

೪

ಲುಚ್ಚಿತನವನು ಅರಿಯದ ನೀನು
ಪಾವಕ, ಪಾವನ ಶಿಖಾ
ನೋಡಿದೆ ನನ್ನ ಮುಖಾ
ಇಷ್ಟೇ ಸಾಕು ಸುಖಾ

೫

ಅಡ್ಡಾಡ್ತಿದ್ದಾ ಕುಣಿದೆನು ನಾನು
ಕಣ್ಣಾಗ ನೀರಿತ್ತು
ಕೈಯ್ಯಾಗ ಗರಿ ಇತ್ತು
ನವಿಲು ಹಾರಿತ್ತು

೬

ಸಹೃದಯಳು ನೀನು ಸಖೀ
ಮುತ್ತೈದೆ ನೀನು ಸುಖಿ
ಬಾಡಿದೆ ಏಕೆ ನಿನ್ನ ಮುಖಾ ?
ಉಳಿದೆ ನಾ ಇಲ್ಲೇ, ನಿನ್ನ ಸಖಾ.

ರಚನೆ : ೧೯-೮-೧೯೬೬

ಭಾವ : ೧೭-೮-೬೬ ರಂದು ಕಳೆದುಕೊಂಡ ಪತ್ನಿಯನ್ನು ನೆನೆದುಕೊಂಡು ೨ನೆಯ ದಿವಸ ರಚಿಸಿದ ಕವನ.

೬೧ ಕನಡ್ಯಾಗಿನ ಪ್ರತಿಬಿಂಬಾ

ಕನಡ್ಯಾಗಿನ ಪ್ರತಿಬಿಂಬಾ
ಅದ, ಇಲ್ಲಾ ಎಲ್ಲಾ ಖಂಬಾ
ಕಪ್ಪು ಕೃಷ್ಣಾ ನನ್ನ ಕಣ್ಣು
ಸತ್ಯ ಕಂಡಿತೇನು ಮಣ್ಣು ॥ ಪಲ್ಲವಿ ॥

೧

ಪಾಂಡುರಂಗಾ ಏಳು ಬಣ್ಣಾ
ಕುಡಿದು ಬಿಟ್ಟೆ ನೀನು ಸುಣ್ಣಾ
ರಂಧ್ರ ರಂಧ್ರದಲ್ಲಿ ಉರಿ
ಇನ್ನೂ ಅದ ಅಂದ್ರ ಕರಿ

೨

ವಾಮನನ ಮನಾ ಮರುಗಿ
ಆಗಿಬಿಟ್ಟೆ ನಾನು ಸೊರಗಿ
ದತ್ತ ಪಾದದ ಖಣತ್ಕಾರ
ಕೇಳಿಬಿಟ್ಟೆ ಚೀತ್ಕಾರ

೩

ಯೋಗೇಶ್ವರ ಕೃಷ್ಣ ನೀನು
ಧನುರ್ಧರ ಪಾರ್ಥ ನಾನು
ಸಂವಾದದ ಶ್ರುತಿ ನೀನು
ಇಪ್ಪತ್ತೆರಡು ಅಂದ್ರ ಏನು?

೪

ನುಡಿ ನುಡಿಗೂ ಒಂದೇ ರುಚಿ
ಇದೇ ತಾನೇ ಅಭಿರುಚಿ
ನೀನೇ ನನ್ನ ಸಖೀಯಾದೆ
ಇಂದೂ ನಾನು ಸುಖೀಯಾದೆ.

ರಚನೆ : ೨೯-೮-೧೯೬೬

ಭಾವ : ದಾಂಪತ್ಯ ಸುಖದ ಸ್ಮರಣೆ. ಪಾಂಡುರಂಗ, ವಾಮನ-ಬೇಂದ್ರೆಯವರ ಹಿರಿಯ ಕಿರಿಯ ಮಕ್ಕಳು.

ವಿಶೇಷ : ೨ ರ ಮುಂದೆ ೨=೨೨. ೨೨ ಇದು ಬಿಂಬದ ಪ್ರತಿಬಿಂಬ. ಸಂಗೀತ ಶಾಸ್ತ್ರದಲ್ಲಿ ತೀವ್ರದಿಂದ ಕ್ಷೋಭಿಣಿಯ ವರೆಗೆ ೨೨ ನಾದಗಳನ್ನು ಉಪಯೋಗಿಸುತ್ತಾರೆ. ಈ ೨೨ ರ ಮೇಳಕ್ಕೆ 'ನಾದಶ್ರುತಿ' 'ಸುಶ್ರಾವ್ಯಶ್ರುತಿ' ಎಂಬ ಮನ್ನಣೆ ಇದೆ. ದಾಂಪತ್ಯ ಜೀವನದ ಸುಖದ ರೀತಿ ಹೀಗಿರಬೇಕು ಎಂಬ ಆಶಯ ಇಲ್ಲಿದೆ.

೬೨ ಆಗು ದೀಪಾ

ಆಗು ದೀಪಾ, ಬೇಕು ದೀಪಾ, ಬಾ ಸಮೀಪಾ
ಎಂಬ ಒಲವೇ ಜಗದ ಭೂಪಾ ॥ ಪಲ್ಲವಿ ॥
೧
ಎಳ್ಳಿನಷ್ಟೇ ಎಣ್ಣೆ ಇದ್ದರೂ
ಬತ್ತಿ ಹತ್ತಿ ಉರಿವುದು
ಜ್ಯೋತಿ ತಾನು ಹುಟ್ಟಾ ಇರಲು
ಅಂತರ್ಭೂತವು ಸಾಯದು.
೨
ಭೂತ ಎಷ್ಟೇ ಪ್ರಬಲವಿದ್ದೂ
ಜೀವಂತಿಕೆಗೆ ಏನೂ ಮಾಡದು
ಕೈಗೆ ಕೈ ಸ್ನೇಹ ತಂತು
ದೀಪ ಎಂದಿಗೂ ಆರದು
೩
ಅಪಾತ್ರ ಜನರಲಿ ದೈವ ದೀಪವು
ತನ್ನ ತೇಜವ ಬೀರದು
ಪಾತ್ರ ಪಾತ್ರ ಸ್ತುತ್ಯವಾಗಲು
ದೀಪ ದೀಪಕೆ ಕರೆವುದು.

ರಚನೆ : ೧೯೬೭

ಭಾವ : ಪ್ರತಿಯೊಬ್ಬರೂ ತಮ್ಮ ಜೀವನವನ್ನೇ ತಮಗಾಗಿ ದೀಪ ಮಾಡಿಕೊಳ್ಳಬೇಕು ಎಂಬ ಸಂದೇಶದ ಕವನ.

೬೩ ನಿಂತಾನ ಪಾಂಡುರಂಗಾ !

ಇರ್ತದ। ಅದs ಕಾಣಸ್ತದ
ಅಸ್ಮಿತೆ ಅಂಬೋದು ಅದs ಅದs।
ಒಂದಕ್ಕೊಂದು ಕನ್ನಡಿ
ಹಿಡಿದ್ಹಾಂಗ ಎದುರು ಬದುರು
ಅಂತರಾ ಏನೂ ಇಲ್ಲಾ.

ರೇಖೆಗೆ ರೇಖೆ। ಸಮರೇಖೆ
ಮೂರು ಬಿಂದು। ಒಂದೇ ರೇಖೆ
ತೆರೆ ತೆರೆ। ಸರೀತದ
ಸಮುದ್ರಾ। ಇದ್ದೇ ಇರ್ತದ

ಪಡಿಯಚ್ಚಿನಂತೆ। ಮೂರ್ತಿ
ಮೂರ್ತಿಯಂತೆ। ಅದರ ಕೀರ್ತಿ
ಕುಂದುಕೊರತೆ। ಏನೂ ಇಲ್ಲಾ
ಸಡಗರವೆ। ತುಂಬಿದೆಯಲ್ಲಾ!

ಕೃಷ್ಣ ಎಂಬುದು। ಕಣ್ಣಿನ ಗೊಂಬೆ
ಕಾಣೋದು। ಅದಕ್ಕs ಇದ್ದರೂ
ಅದs ನಮಗ। ಕಾಣೂದಿಲ್ಲಾ!

ತಮಸ್ಸಿನ ಹೊರಗ। ಕಾಣೋದು
ಕಂಡದ್ದು। ಸಿಗೋದು
ಸಿಕ್ಕದ್ದು। ಕಳೆಯೋದು
ಕಳದದ್ದು। ಸಿಗೋದು
ಇದೇ। ಅವನ ಪ್ರಲಯದಾಟಾ
ಕ್ಷಣಕ್ಷಣಕ್ಕೂ। ಒಂದೇ ನೋಟಾ

ಅವನೇ ಸೃಷ್ಟಿಸಿದ। ಈ ರಂಗಾ
ನಿಂತಾನ। ಪಾಂಡುರಂಗಾ।

ರಚನೆ : ೧೯೬೭

ಭಾವ : ಪಂಢರಪುರದ ವಿಠ್ಠಲಾ, ಒಂದು ಅನುಭವ.

೬೪ ವಿಠ್ಠಲಾ ಪಾಂಡುರಂಗಾ !

ನಮ್ಮ ಸೀಮೆಯ ಲಿಂಗಾ। ಶಿವಲಿಂಗಾ।
ಇವನೆ ವಿಠ್ಠಲ-ಪಾಂಡುರಂಗಾ !

ಉತ್ತಮಾಂಗದ ಲಿಂಗಾ।
ರಖುಮಾಯಿ ಜೊತೆ ಸಂಗಾ
ಇದು ಎಂದೆಂದೂ। ಅಭಂಗಾ

ಪುಂಡರೀಕ। ಬೇಡುವನು।
ಭಕ್ತಿಯ ಭಿಕ್ಷೆ!
ನೀಡುವನು। ಯಾತ್ರಿಕರಿಗೆ
ಪ್ರತಿಪ್ರತಿ ವಾರದ। ಸರತಿಗೆ
ನಿಲ್ಲುವನು ಭಕ್ತರ। ಬಾಗಿಲ ದಾರಿಗೆ.
ಉದಾರಿ ! ಹೃದಯದಲ್ಲಿ। ಪ್ರಕಟ ಯಾರಿಗೆ ?
ಹಗಲು, ಮಧ್ಯಾಹ್ನ। ಸಂಜೆಯ ಕಾಲಕ್ಕೆ
ಅಕಾಲಕ್ಕೆ। ಮಧ್ಯರಾತ್ರಿಯೂ।
ಸ್ವಪ್ನದಲ್ಲಿಯೂ
ಇವನದೇ ವಾಸಾ। ಪ್ರವಾಸಾ।

ಶ್ರದ್ದೆಯ ಕರೆಗೆ। ಪರಿಪೂರ್ತಿ
ಈ ಘಳಿಗೆ, ಆ ಘಳಿಗೆ। ಸುರಿವುದು
ಮೊಸರಿನ ಮಳೆ।
ಚಂದ್ರಭಾಗೆಯ ನೀರಿಗೆ
ಭಕ್ತಿ ತುಂಬಿದ ಊರಿಗೆ !

ರಚನೆ : ೧೯೬೭

ಭಾವ : ಪಂಢರಪುರದ ವಿಠ್ಠಲ-ಪಾಂಡುರಂಗನನ್ನು ಕುರಿತು ಕಲ್ಪನಾ ವಿಲಾಸ.

೬೫ ಪ್ರಸಾದ ನೀಡು ದೇವರು !

ದೇವರು !
ನೀಡರಿ ಪ್ರಸಾದ।
'ಸಾ'ದ। ನಾದ। ಆಸ್ವಾದ। ರಸಾರ್ದ್ರ
ಒಳ್ಳೆದನ್ನ ಮಾಡುವವರು !
ಆತ್ಮಪ್ರಸಾದದವರು !
ವಿಚಾರಗಳ ಶರತ್-ಶುಭ್ರ
ನಿರಭ್ರ, ಅಭ್ರ !

ಗರ್ಭದಲ್ಲಿ ರಸವಿದೆ।
ಪ್ರಭೆ। ಪ್ರತಿಭೆ।
ವೇದ। ಸಂವಾದ। ಸಂವೇದನೀಯ।
ಸ್ವಯಂಪ್ರಭೆ !

ನಭನಭದಲ್ಲಿ ತಬ್ಬಿ। ಹಬ್ಬಿರುವೆ ನೀ !
ಹಸಿರು ಹುಲ್ಲಿನಂತೆ। ಭಾಗವತರು !
ಕಾಮ। ಶ್ಯಾಮ, ಸುಂದರ ಭೀಮರು !
ಪ್ರೇಮ। ಪ್ರಸಾದ ಪ್ರಿಯರು।
ವಿಶೇಷ। ಅಶೇಷ। ಬೋಧವು
ಅನುರಾಧಾ। ವಿಶಾಖಾ।
ಶಿಂಶುಮಾರ। ಕುಮಾರರು !

ಪ್ರಳಯೋದಧಿ। ವಟಪತ್ರ।
ಅದರ ಮ್ಯಾಲೆ ನೀವು। ಕಮಲನೇತ್ರರು।
ಪುಂಡರೀಕಾಕ್ಷ। ಶಿಶು। ದಿಗಂಬರರಾಗಿ
ಹೆಬ್ಬೆರಳು। ಚೀಪುತ್ತ। ಮಲಗಿದವರು.

ಆಕಾಶಗಂಗೆ। ಕ್ಷೀರಸಾಗರಾ।
ನೋಡುತ್ತ। ಇದ್ದವರು
ಬಹುರೂಪಿ। ರೂಪದವರು!
ನಿಮ್ಮ ಸ್ವರೂಪಾ।
ನಿವೃತ್ತ। ಪ್ರಸನ್ನಾ।
ಅನಾಥರಿಗೂ। ಸನಾಥಾ।
ಮಾಡುವವರು
ನೀವೇ ಪಾಂಡುರಂಗರು!

ಪಾಂಡುರಂಗ ನಾಥಾ!
ಗೋಪಾಕ ಕಲಿಸಿದ ಭಗವಾನ್
ಭಾಗವತೋತ್ತಮಾ!

ನಿಮಗಾಗಿ ಈ। ದಿಂಡಿ
ಪತಾಕೆ। ಅನಂತ ಹೊರುವೆ
ನೀನಿದ್ದಲ್ಲಿ ಬರುವೆ.
ನೀನೇ ದೇವರು। ಮೂಲ
ಅಂಬೇಗಾಲಿಡುವ। ಬಾಲಕೃಷ್ಣಾ
ವಿಠ್ಠಲಾ।
ನೀಡು ನೀ। ನಿನ್ನ ಪ್ರಸಾದಾ।

ರಚನೆ : ೧೮-೩-೧೯೬೭

ಭಾವ : ಪಂಢರಪುರದ ವಿಠ್ಠಲನ ಪ್ರಸಾದ ಯಾಚನೆ.

ಶಬ್ದಾರ್ಥ : ದಿಂಡಿ=ಭಜನೆ ಮಾಡುವವರ ಗುಂಪು.

೬೬ ವಿಠ್ಠಲಾ

ಅಭಂಗಾ। ಸರ್ವಾಂಗಾ
ನೀರೇನೀರು। ತರಂಗಾ
ಅನೇಕ। ಸಪ್ತರಂಗಾ
ಕಪ್ಪಿದ್ದೂ। ಪಾಂಡುರಂಗಾ!
ಭೋಳೆ ಸ್ವಭಾವ। ಪ್ರಸಂಗಾ
ಇಟ್ಟಂಗಿಯ ಮ್ಯಾಲೆ।
ಸಮಪಾದದ ಠೀವಿ
ರುಕ್ಮಾಂಗ। ರುಕ್ಮಿಣಿ ಸಂಗ।
ಅನಂಗS। ಶಿರಸ್ಸಿನ ಮೇಲೆ ಲಿಂಗS।
ಭಕ್ತ। ವಿಭಕ್ತ। ಅಲ್ಲಾ। ಅವಿಭಕ್ತ
ಅನುರಕ್ತಿಯ ಆಟಾ ಅದು!

ವಿರಕ್ತಿ ಮುಗಿದಿತ್ತು।
ಸ್ಮಶಾನದಲ್ಲೂ ಒಂದೇ ಆಶ್ರಯಾ।
ಸಾರ್ವಭೌಮಾ।
ಚಿತ್ತರಂಗದಲ್ಲಿ। ರಸಸ್ವಾಂತದಲ್ಲಿ
ಭಂಗ ಎಂಬುದೇ ಇಲ್ಲಾ। ಅಭಂಗಾ
ಸುಂದರ ರೂಪಾ! ಕಂಡು ಏಕನಾಥಾ।
ಇಂಬಾದಾ। ಕಾವ್ಯದ ರಸಬಿಂಬಾ ಆದಾ।
ಹೃದಯ ಕಮಲದ ಭೃಂಗಾ ಆದಾ।
ಅಭಂಗ ರಚನೆಯಲ್ಲಿ ಮುಂದಾದಾ.

ರಚನೆ : ೧೮-೩-೧೯೬೭

ಭಾವ : ವಿಠ್ಠಲ ದೈವತದ ಅಭಂಗ ರೀತಿಯ ವರ್ಣನೆ ಕುರಿತು.

ಶಬ್ದಾರ್ಥ : ರುಕ್ಮ=ಚಿನ್ನ. ಸ್ವಾಂತ=ಮನಸ್ಸು.

೬೭ ವಿಠ್ಠಲಾ ಅನ್ನು। ಅನ್ನು ವಿಠ್ಠಲಾ।

ದಽಮಽ। ಶಽಮಽ। ದಶಽಮಽ। ಪ್ರಥಮ
ಏರಿಬಂತು। ಅನ್ನು ವಿಠ್ಠಲಾ
ಪ್ರೇಮಾ ಅಂದ್ರ ಎರಡಲ್ಲಾ। ಯಮಾಯಮಿಯ ಸಂವಾದ
ನೀ ಮಧ್ಯಮಾ। ವಿಠ್ಠಲಾ ಅನ್ನು.

ಸಂಯಮಽ। ಉತ್ತಮಽ। ಆದಿಮಽ। ಅಧಮಽ।
ಅಂಧಃಕಾರ। ಅನ್ನು ವಿಠ್ಠಲಾ
ಆತ್ಮಾರಾಮಽ। ತುರೀಯ ಧಾಮ
ವಿಶ್ರಾಮಽ। ವಿಠ್ಠಲಾ ಅನ್ನು

ಪಂಚಮ ಸ್ವರಾ। ಮಾಮರಾ। ಕೋಕಿಲ ಸ್ವರಾ
ಕೇಳು। ನುಡಿಸು। ಅನ್ನು ವಿಠ್ಠಲಾ
ಪಂಚಮುಖ। ಪರಮೇಶ್ವರಾ। ರಸ ಸಾಗರಾ
ಶಿವರಾಮಾ। ವಿಠ್ಠಲಾ ಅನ್ನು

"ಕೂಜಂತಂ ರಾಮ ರಾಮೇತಿ। ಮಧುರಂ ಮಧುರಾಕ್ಷರಂ
ಆರೂಹ್ಯ ಕವಿತಾ ಶಾಖಾಂ। ವಂದೇ ವಾಲ್ಮೀಕಿ ಕೋಕಿಲಂ।
ಆಪದಂ ಅಪಹರ್ತಾರಂ। ದಾತಾರಂ ಸರ್ವ ಸಂಪದಾಂ।
ವಂದೇ ಲೋಕಾಭಿರಾಮಂ। ನಮಾಮಿ ರಾಮಂ ಶ್ರೀಧಾಮಂ।
ಭೂಯೋ ಭೂಯೋ ನಮಾಮ್ಯಹಂ। ಅನ್ನು ವಿಠ್ಠಲಾ.
ಶಿವರಾಮಽ। ಪರಂಧಾಮ। ಷಷ್ಠಮ। ಸಮಽ।
ಹೋಯಿತು ಭ್ರಮ। ವಿಠ್ಠಲಾ ಅನ್ನು

"ಸಪ್ತಮ ಸರಿಗಮ ಪದ ನಿರತಾಂ ತಾಂ
ವೀಣಾ ಸಂಕ್ರಾಂತ ಕ್ರಾಂತ ಹಸ್ತಾಂತಾಂ
ಶಾಂತಾಂ ಮೃದುಲ ಕುಚ ಭರತಾಂ ತಾಂ
ನಮಾಮಿ ಶಿವಕಾಂತಾಂ। ಅನ್ನು ವಿಠ್ಠಲಾ
ಶಾಮಲಾ। ನಿರ್ಮಲಾ। ಕೋಮಲಾ। ಅಷ್ಟಮಾ। ಭುಜಂಗಾ।
ಬೇಡಾ ನನಗೆ। ವಿಠ್ಠಲಾ ಅನ್ನು

ನವಮಾಸ ಧರಿಸಿದೆ। ಎಂಟನೆಯ ಅವತಾರ ಪಡೆದೆ
ನಿನ್ನ ಭ್ರಮರ ಗುಂಜಾರವ। ಆಲಿಸಿದೆ
'ಓಂ ಭವತಿ ಭಿಕ್ಷಾಂದೇಹಿ'। ಬೇಡಿದೆ
ನೀನು ಕೊಡುವ ಕೈ
ನಾನು ಬೇಡುವ ಕೈ
ಕೊಡು ನನಗೆ-
ದಽಮಽ। ಶಽಮಽ। ಸಮಽ। ಯಮಽ। ನವಮ
ಎಲ್ಲಾ ನೀನೇ ಪಾಂಡುರಂಗ। ವಿಠ್ಠಲಾ। ವಿಠ್ಠಲಾ।

ರಚನೆ : ೧೮-೩-೧೯೬೭

ಭಾವ : ವಿಠ್ಠಲ ದೈವತ ಕುರಿತು.

೬೮ ಭಜನೆಯ ಸರಪಳಿ

ಕೊಂಡಿ ಕೊಂಡಿ। ಸರಪಳಿ ಭಜನಿ
ಬೆಳಗು ಮಾಡ್ಯದ।
ತುಂಡು ಆಗದಽ। ಮೊಂಡು ಆಗದಽ।
ಮುಂದಕ ಸಾಗ್ಯದ.

ಹೃದಯದಾಗ ಹೃದಯಾ। ಕೂಡಸ್ತದ
ಎತ್ತರಕ್ಕೂ ಸಾಕಷ್ಟು। ಹಾರಸ್ತದ
ಅಭ್ಯಂಜನ ಸ್ನಾನಾ। ಮಾಡಸ್ತದ
ನಂದಾದೀಪದ್ಹಾಂಗ। ಇದ್ದಽ ಇರ್ತದ!

ಹಗಲೂ ರಾತ್ರಿ। ಒಂದಽ ನಾಟಕಾ
ರಾಧಾ-ಕೃಷ್ಣಾ ಮೇಳದ। ನೃತ್ಯ ನಾಟಕಾ
ನೋಡೋದು ಕಾಣೋದು। ಒಂದಽ ಪಾಕಾ
ಕುದಿಯೋದು ಅಕ್ಕಿ। ಅನ್ನಾ ನಾಕಾ
ಎರಡೂ ಒಂದೇ ತೂಕಾ!

ಭಜನಿ ಮಾಡೋ ಆವರೆಲ್ಲಾ। ಸ್ವಜನರು
ಅಂತಽ ಅವರು ಭಾಗವತರು
ದೇವರದೇ ಒಂದು ಭಾಗ। ಆದವರು!
ವಿಠ್ಠಲನ ಕಾಲಕೆಳಗಿನ। ಇಟ್ಟಂಗಿ ಅವರು!

ಕಾಲಾಗಿನ ಕಡಗಾ। ಗೆಜ್ಜಿ
ಹೆಜ್ಜೀ ಮ್ಯಾಲೆ। ಹೆಜ್ಜಿ
ಕುಣಿಯುವವನೂ। ಅವನಽ
ಕುಣಿಸುವವನೂ। ಅವನಽ
ಬಾಲಕೃಷ್ಣಾ। ಆಲದ ಎಲೀ ಕೃಷ್ಣಾ
ಡೊಗ್ಗಾಲ ಕೃಷ್ಣಾ। ನೃತ್ಯದ ಕೃಷ್ಣಾ
ಎಲ್ಲಾ ಒಂದಽ। ಯಾರಿಗೆ ಇದು ತಿಳೀತದ?
ಒಳಗಿಂದೊಳಗಽ। ಹೊಳೀತಽದ!

ಇದರ ಹಾಡ಼ ಜಾಹ್ನವಿ!
'ಗಂಗಾವತರಣ' ಆದರ಼
ಅಂವಾ ಕವಿ!
ಭವಿ ಮ್ಯಾಲೆ ಭವಿ।
ಮುಂಜಾವಿನ ಛಳಿ ಸವಿ!
ಹಾಡೇ ಹಗಲು। ಅನುಭವಿಸು।
ನೀ ಭವಿ.

ರಚನೆ : ೧೨-೩-೧೯೬೭

ಭಾವ : ವಿಠ್ಠಲನನ್ನು ಕುರಿತು ಅನುಭವಗಳ ಸರಪಳಿ.

೬೯ ಚಾಂಗದೇವ

ಚಾಂಗದೇವನು ಯೋಗಿ !
ಆಗಿದ್ದ ಭೋಗಿ

ಲಕ್ಷ್ಮೀ ಇದ್ದಳು ಗುಪ್ತಾ
ಮದೋನ್ಮತ್ತ ಆನಿಯ ಸುತ್ತಾ.

ಉನ್ಮನದಲ್ಲಿ ವಾಸಾ। ತನ್ನಲ್ಲಿಯೇ ತಾ ನಿವಾಸಾ
ಆತ್ಮಪೂಜೆಯಲ್ಲಿ ತಲ್ಲೀನಾ। ಬೇರೆ ಯಾರೂ ಇಲ್ಲಾ ಸಮಾನಾ।

ಈ ಪಿತ್ತ ತಲೆ ಏರಿತ್ತು। ಶಬರಿಯ ಮಲೆ ಆಗಿತ್ತು
ಶಬರಿ ಕಾದಂತೆ ಕಾದನು। ಒಳಗೊಳಗೆ ಅಹಂಕಾರದ ಮಳೆ.
ಅದರದೇ ಮನನಾ। ತನನಾ।

ಕಾಲ ಬಂದಿತ್ತು। ಸೊಕ್ಕು ಇಳಿದಿತ್ತು।
ಜ್ಞಾನದೇವರ ಕಂಡು। ಬೆರಗು ಆಗಿತ್ತು।
ಜ್ಞಾನೆದೇವರು ಬರೆದರು ಪತ್ರಾ
'ಅರವತ್ತೈದು ನುಡಿ' ಆಗಿತ್ತು.

ಅದನ್ನು ಓದಿ
ಸಹಜವಾಯಿತು ಜ್ಞಾನಾ
ಸಂಪೂರ್ಣ ಅರಳಿತು ಮನಾ
ದೇಹ ಇಟ್ಟಲ್ಲಿ। ಹುಟ್ಟಿದವು
ವಟವೃಕ್ಷಾ!
ಸಕಲ ಕಾರ್ಯಕ್ಕೆ ಅಧ್ಯಕ್ಷಾ.

ರಚನೆ : ೧೯೬೭

ಭಾವ : ಯೋಗಿ ಚಾಂಗದೇವನ ಅಹಂಕಾರ ನಿರಸನ ಕುರಿತು. ಇವನು ೮೦೦ ವರ್ಷ ಬಾಳಿದನು. ಪ್ರತಿ ನೂರು ವರ್ಷಕ್ಕೆ ದೇಹ ಇಟ್ಟಲ್ಲಿ ಈ ಸಂತನ ಪ್ರತೀಕವಾಗಿ ವಟವೃಕ್ಷ ಹುಟ್ಟಿದವು. ಅಂಥ ಒಂದು ಕ್ಷೇತ್ರ ಧಾರವಾಡ ಜಿಲ್ಲೆಯ ಯಮನೂರು.

ಶಬ್ದಾರ್ಥ : ಅರವತ್ತೈದು ನುಡಿಯ ಪತ್ರ=ಚಾಂಗದೇವ ಪಾಸಷ್ಟಿ ಬೇಂದ್ರೆಯವರು ಕನ್ನಡದಲ್ಲಿ ಅನುವಾದ ಮಾಡಿದ್ದರು. ಇದರ ಅಭ್ಯಾಸಕ್ಕಾಗಿ 'ಔದುಂಬರ ಗಾಥೆ' ೧೬೮ನೇ ಕವನ 'ಚಾಂಗದೇವಪಾಸಷ್ಟಿ' ಯನ್ನು ನೋಡಬಹುದು.

೭೦ ಸ್ಮರಿಸಿದರೆ ಗದ್ಗದಿಸುವದು ಕಂಠ

ಸ್ಮರಿಸಿದರೆ ಗದ್ಗದ ಕಂಠಾ। ನೀಲಕಂಠಾ।
ಆಕಂಠ ಕುಡಿದಿರುವಿ ವಿಷಾ
ಅದು ನಿನಗೆ ಅಮೃತಸಮಾನ.

ಒಣಗಿದ ತುಟಿ। ನೇರ ದೃಷ್ಟಿ
ಇಳಿದಿತ್ತು ನನ್ನ ಸೊಕ್ಕು
ನಡುಗುತ್ತಿದೆ ಮೈ। ಸ್ವಾಮಿ! ಕೊಡು ಕೈ।

ಪರಾ ಹಾಗೂ ಅಪರಾ। ವಾಣಿಯ ರೀತಿ
ಹೀಗೆ ಕತ್ತರಿಸಬೇಕೆ 'ಜ್ಞಾನವಾಪಿ' ?
ನೀನಾಗು ವಾಪಿ। ಆಗಬೇಡಾ ವಾತಾಪಿ।

ಅಗಸ್ತ್ಯ ನೀರಿನ ಭಕ್ತಾ
ಇದು ಅದ್ಭುತ!
ಕುಡಿದ ನೀರು। ಒಳಗೆ ಇಳಿಯಿತು
ತುಂಬಿತು। ಆಯುಷ್ಯ ತೀರಿತು।
ಹರೇ! ಹರೆ ಹರೇ!

ಅಗಸ್ತ್ಯಕ್ಕೆ ಇಲ್ಲಾ। ಅಸ್ತಾ, ಉದಯಾ
ಇರತದ। ಬಾಡತದ।
ಚವತಿಯ। ಚಂದ್ರನ ಹಾಂಗ
ಗಿರ್ದಾ, ಅರ್ಧಾ, ಪೂರ್ಣಾ
ಇದರಾಗs ಸವಿ ಉಣತದ ಚಕೋರಾ!

ಕೋರಕ ಎಂಬುದು ಹೂವಿನ ಮುಗಳು
ನವಿಲು, ನೃತ್ಯದ ಅರುಳು
ಅರಗಿಳಿ-ರಸವೀರ। ಪಾಂಡಿತ್ಯ ಪ್ರಕಾರ
ಮಧು ಮಧು ಹಣ್ಣು। ಕಂಡಿತು ಕಣ್ಣು
ಭಿಕ್ಷೆ ಬೇಡುತ್ತಿದೆ। ಗಿಡಗಿಡ ಹಾರಿ
ಸಂಚಾರಿ!

ದತ್ತ! ಅವಧೂತ। ನಿರಾಕಾರಿ
ಕುಡಿವರು। ಅಂಜಿಕೀ ನೀರು
ಮಾಡುವರು। ಮೌನ ಸ್ಫೋಟ
ಇದು ಅವರ ಪ್ರೀತಿ
ಚಿದಂಬರ ರೀತಿ !

ಸದ್ಭಾವ ಎಂಬುದು ಬಾವಡಿ
ಬಾವಿ। ಸಂಧ್ಯಾವಂದನೆಯ ಸ್ಥಳಾ !
ಅಲ್ಲಿಯೇ ಇರುವನು ಸ್ವಾಮಿ
ಸಂಗಾತಿ ಸಂತರ ಜಾತಿ.

ಸಂಭಾಳಿಸಿರಿ ಝೋಲಿ
ತೂಕ ತಪ್ಪಿದರೆ ಗುಂಡಗೋಲಿ
ಕ್ಷಿತಿಜದಂತೆ ಹಬ್ಬಿತ್ತು
ತೇಜೋಗೋಲ ಒಡೆದಿತ್ತು
ಸಿಡಿದವು ನಕ್ಷತ್ರ !

ನಕ್ಷತ್ರನಾಮದ ಸಂಬಂಧ
ನನಗೂ ನಿನಗೂ ಎಲ್ಲಿಂದ ?
ಶ್ವಾನದ ಬಂಧಾ
ಅಂಟಿತ್ತು ದೇಹದ ನಂಟಿತ್ತು
ಆದರೂ ಇದನ್ನು
ಗೆಲ್ಲುವ ಹಟವಿತ್ತು
ಆದರೆ ಗದ್ಗದ ಕಂಠ
ನೆನಪು ಉಳಿದಿತ್ತು.

ರಚನೆ : ೧೨-೩-೧೯೬೭

ಭಾವ : ವಿಷಯವಾಸನೆ ಮಾನವ ಎದುರಿಸಿದ ಮಹಾ ಪ್ರಶ್ನೆ. ಅದು ಮಾಡುವ ಆಟದ ರೀತಿ ಹಲವು.

೭೧ ಮುನಿ ಮೌನಿ

ಮುನೀ ನೀ ಹೌದು। ಅಲ್ಲಾ ಮೌನಿ, ಮೂಕಾ।
ರಸಾರ್ದ್ರಾ-ಅಲ್ಲಾ। ಒಣಗಿದ ಶುಂಠಿ ಬೇರೆ।
ಎರಡರ ಪರಿಣಾಮಾ-ರಸಾ।

ಗೋರಸಾ ಗೋಪಾಲ ಬಲ್ಲಾ। ಗೋಪಿ ಬಲ್ಲಳು
ಗೋಪಾಲಕರು ಎಲ್ಲರೂ ಬಲ್ಲರು
ವೃಂದಾವನದಾ ಕಥಿ!

ಕಥೀ-ಅನಸೂಯಾ ಸೂತ್ರಾ
ಸೂಜಿಯ ಕಣ್ಣಿನ್ಯಾಗ ಸುಸೂತ್ರಾ
ಛಿದ್ರ ಮಾಡಿ ಹಾಕ್ತಾರ ಹೊಲಿಗಿ
ಬಂಧ ಮುಕ್ತಿಯ ಈ ಸಂಬಂಧಾ
ಕಂಠದಿಂದ ಹೊರಹೊಮ್ಮಿದ ಸ್ವರಾ।

ಸ್ವರಾ, ವ್ಯಂಜನಾ, ಕೂಡಿಸಿ ಮಾಡ್ತಾರ ವಾಕ್ಯಾ
ಅದರ ಹಿಂದ ಅಡಗಿರ್‍ತದ ಭಾವ ಅರ್ಥ ಐಕ್ಯಾ
ಇದು ಸಾಹಿತ್ಯಾ-ಕಾವ್ಯಾ-ಛಂದಸ್ಸಿನ ನೃತ್ಯಾ!

ಸ್ತುತಿ, ಸ್ತೋತ್ರ ಮಂತ್ರಾ
ವಾಣಿಯ ವಿವಿಧ ನೇತ್ರಾ
ಅದರಾಗ ಓತಪ್ರೋತ-ಪ್ರೇಮಾ!

"ಏಕಂ ಪುರುಷಂ ವ್ಯಾಪ್ತ ಸ್ಥಿತಂ ರೋದಸಿ"
ರೋದಸ್ ಎಂದರೆ ಆಕಾಶ
ರೋದನ, ಆಕ್ರಂದನ
ಹುಡುಕಾಟಾ ಸಾಕು.

ಪುರುಷಾ-ಅರತ್ರ ಪರತ್ರ
ಸರ್ವತ್ರ ಸರ್ವಕ್ಷೇತ್ರದಲ್ಲಿ ಇದ್ದೂ
ಇಲ್ಲದಂತೆ ಇರಾಂವಾ-ಮಹಾಮೌನಿ!
ಸನಾಥ। ಅಬ್ಜಜಾತ-ಬ್ರಹ್ಮಾ!
ಕಮಲಸಂಭವಾ। ಕಮಲಾಕ್ಷ ಪಿತಾ
ತರತಮಭಾವಾ ಸಲ್ಲದು

ಪಾಹಿ ಮಾಂ। ತ್ರಾಹಿ ಮಾಂ। ಅನ್ನು
ಮುನಿ। ಮೌನಿ। ಕಾಪಾಡುವನು ನಿನ್ನನ್ನು
ಇದು ಗಾಯತ್ರಿ ಶಕ್ತಿ
ಬಳಸಿಕೊಳ್ಳುವ ಭಕ್ತಿ.

ರಚನೆ : ೧೪-೩-೧೯೬೭

ಭಾವ : ಗಾಯತ್ರಿ ಮಂತ್ರದ ಅಂತರಂಗದ ಶಕ್ತಿ ಕುರಿತು.

ವಿಶೇಷ : ''ಔದುಂಬರಗಾಥೆ'' ನಮನ ಸಂಪುಟ ಕವನ-೬ 'ಮುನಿಕವಿ' ಕವನ ಅಭ್ಯಸಿಸಬೇಕು.

೭೨ ಮಾ ಮಾ ಮಾ

'ಮಾ' ಎಂದರೆ ತಾಯಿ
ಯಾರಿಗೆ ಯಾರು ತಾಯಿ ?
ಹೊಗಳಿ ಮುಚ್ಚದ ಈ ಬಾಯಿ.

ಮಹಾ ಎಂಬುದರ
ಸಂಕ್ಷಿಪ್ತ ರೂಪಾ - 'ಮಾ'
ಇದು ಎಲ್ಲರಿಗೂ ತಾಯಿಯ ಕೃಪಾ.

ಕಾವ್ಯ ಮೀಮಾಂಸೆಯಲ್ಲಿ-
ಉಪಮಾ। ಪ್ರತಿಮಾ। ಅಪ್ರತಿಮಾ
ಸುಪ್ರತೀಕಾ। ಪ್ರತ್ಯೇಕಾ
ಚಾರುತಮಾ। ನವಮಾ
ಸೀಮಾ। ಸಮಾಧಿ-ಮಾ।
ಓಂ ಎಂಬ ಮೌನದಲ್ಲಿ-
ಚಂದ್ರಮಾ। ಸೋಮಾ।
ನಿಶಾ ಮಾ। ಅಹೋರಾತ್ರಿ ಮಾ।

ಅಧ್ಯಾತ್ಮದಲ್ಲಿ -
''ತಮಸೋ ಮಾ। ಜ್ಯೋತಿರ್ಗಮಯ ಮಾ
ಮೃತ್ಯೋರ್ಮಾ। ಅಮೃತಂಗಮಯಮಾ।''

ಶಾಕ್ತದಲ್ಲಿ -
ಹೃದಯಂಗಮಾ। ಚಿತ್ತರಂಗಮಾ।
ಉಮಾ। ಮಹಿಮಾ। ಪರಮಾ। ರಮಾ
ಹೇವಾಕ್। ವಾಗಂಭ್ರಣಿ!
ಸರಿಗಮಾ। ಸಂಗಮಾ।

ಅಸೀಮಾ। ತತ್ತ್ವಮಸಿ ಮಾ
ಸತ್ವಮಸಿ ಮಾ। ಸ್ವತ್ವಮಸಿ ಮಾ
ಪಂಚಮಾ। ಪ್ರಪಂಚಮಾ

ರಚನೆ : ೨೭-೩-೧೯೬೭

ಭಾವ : ತಾಯಿಯ ಮಹಿಮೆ ಕುರಿತು. ಇದರ ವಿವಿಧ ಆಯಾಮ ಕುರಿತು.

೭೩ ನವಿರು

"ಓಂ ನಮೋಜೀ ಆದ್ಯಾ
ವೇದ ಪ್ರತಿಪಾದ್ಯಾ
ಆತ್ಮರೂಪಾ!"
ಎಂಬುದು ಒಂದು ಹಕ್ಕಿ
ಮೈ ತುಂಬಾ ನವಿರು! ಚುಕ್ಕಿ!
ಎಡಬಲಕೆ ಹಾರುವ ರೆಕ್ಕಿ!
ಹಿಂದಕ್ಕೆ ನವಿಲು ಗರಿ - ದೃಷ್ಟಿ
ಮುಂದಕ್ಕೆ ತುರೀಯ - ಸೃಷ್ಟಿ

ಯಾವುದೂ ತುಚ್ಛವಲ್ಲಾ। ಗಗನ ಗಮನ ಆಪ್ತಾ!
ಅಂತರ್ಯಾಮಿ ಗುಪ್ತಾ। ಆದರೂ ಅವನು ಸರ್ವವ್ಯಾಪ್ತಾ।

ರಚನೆ : ೨೭-೪-೧೯೬೭

ಭಾವ : ಆತ್ಮ ಚಿಂತನದ ಕವನ.

ವಿಶೇಷ : ಕವನದ ಪ್ರಾರಂಭ, ಸಂತ ಶ್ರೇಷ್ಠ ಜ್ಞಾನದೇವರ ಉಕ್ತಿ.

೭೪ ನಿಜಕ್ಕ ನಿದ್ದಿ ಗೊತ್ತಿಲ್ಲಾ

ನಿಜ। ಇದ್ದದ್ದು। ಹಾಂಗೂ ಹಿಂಗೂ ಅಲ್ಲಾ
ಎಂದೆಂದೂ ಅದು। ಮಲಗುವುದೇ ಇಲ್ಲಾ
ಅದು ನೋಡುವದಿಲ್ಲಾ। ಅದು ತೋರುವದಿಲ್ಲಾ
ಶುದ್ಧ ಇರುವಿಕೆ ಅದರದು.

ಉಳಿದದ್ದೆಲ್ಲಾ ಬರಿ ಗಾಳಿ। ಆಕಾಶದ ತುಂಬಾ ಧೂಳಿ
ನಿಜ ಎಂಬುದು। ಅಜ ಹಾಗೂ ದ್ವಿಜ ಅಲ್ಲಾ
ಇದು ಬಿಟ್ಟು। ಮತ್ತೊಂದು ಇಲ್ಲೇ ಇಲ್ಲಾ
ಇನ್ನೊಂದು, ಮಗುದೊಂದು। ಆಗುವದಿಲ್ಲಾ.

ನಿತ್ಯವೂ ಸತ್ಯವೂ। ಎಂಬುದೊಂದೇ ನಿಜವು
ಅದರ ಕುಣಿತ ಮಣಿತ। ಎಂದೆಂದೂ ನಿಲ್ಲದು
ಅದು ಕಟ್ಟದು। ಅದು ಬಿಚ್ಚದು। ನಾನಾ ಥರದ ನೆಚ್ಚದು.
ಮನೆ ಮನೆ ಸುತ್ತಾಟಾ। ಆದರೂ ಒಂದೇ ರೂಪಾ!

ಅವಧೂತ। ಸಂಚಾರಿ। ನಿರಾಕಾರಿ। ಸರ್ವಪ್ರಕಾರಾ
ಎಲ್ಲದಕ್ಕೂ ಅದ। ಧಾರಣೆಯ ಒತ್ತು
ನಿಜವೆಂದರೇನು। ಅದಕ್ಕೊಂದಽ ಗೊತ್ತು
ಹೊಸ ಹೊಸ ಕೆತ್ತನೆ। ಮೇಣಬಸದಿ!

ಕಲ್ಪನೆಗೂ ಮೀರಿದ ರೀತಿ। ಅನನ್ಯ
ಮಾಯಾಜಾಲದ ಹೆರಿಗೆ ಬಾಲಕರಿಗೆ
ಎಳೆತ। ಸೆಳೆತ। ಮುಚ್ಚಿಲ್ಲಾ। ಬರೀ ಬತ್ತಲೆ
ಬಿಚ್ಚು ಕುದುರೆಯ ನೆಗೆತ। ಎತ್ತೆತ್ತಲೂ

ಸುತ್ತಲೂ ನೀರು। ನಡುವೆ ನಡುಗಡ್ಡೆ
ಅಲ್ಲಿ ನಡೆದದ್ದೆಲ್ಲಾ। ಗಾಳೀಮಾತು। ದಂತಕಥೆ
ಅಶೋಕ ವೃಕ್ಷದ ಕೆಳಗೆ। ಸಶೋಕ ಸೀತೆ
ಕಣ್ಣೀರು ಒರೆಸುವವರೇ ಇಲ್ಲಾ। ಮಾತೆ!
ಕಣ್ಣೀರು। ಸಮುದ್ರಕ್ಕೆ ಸೇತುವೆ
ಕಟ್ಟಲು ವಾನರ ಬಳಸಿದರು। ರಾಮನ ಸಹಿ
'ನಹಿ ನಹಿ' ಎನ್ನದೇ। ತೇಲಿದವು ಕಲ್ಲು!
ಇದು ನಿಜ। ಒಪ್ಪುವವರು ಯಾರು?

ಸಮುದ್ರದ ತೆರೆ। ತೇಲಿಸಿದವು ಕಲ್ಲನ್ನು
ಇದ್ದರೂ ಇರಬಹುದು। ಆದದ್ದು ನಿಜ
ಹಬ್ಬಿತು ಸುದ್ದಿ। ಪೂರ್ವ ಪಶ್ಚಿಮಾ
ಬೆಲೆ ಬಂದಿತು। ವಾಲ್ಮೀಕಿಯ ವಾಣಿಗೆ

ಇದು ಬರೆದದ್ದೆಲ್ಲಾ। ಜಲಲಿಪಿ
ಓದುವವರು। ಮೀನಗಳು
ಅನಿಮಿಷ ನೇತ್ರರು। ಇವರು!
ಕಣ್ಣುರೆಪ್ಪೆ ಬಡೆಯದವರು!

ಓದಬೇಕಾದದ್ದು। ಕಟು ಸತ್ಯ
ನಿತ್ಯವೂ। ಸತ್ಯವೂ। ಸಾತತ್ಯವು.
ಗೊತ್ತಿದೆ ಎಂಬುದು। ನಿಜವು
ಗೊತ್ತಿಲ್ಲಾ ಎಂಬುದೂ। ನಿಜವೆ
ನಿಜಕ್ಕೆ। ನಿದ್ದೆ ಗೊತ್ತಿಲ್ಲಾ
ಯಾರೂ ಅದನ್ನು। ಮೆತ್ತಿಲ್ಲಾ
ಆದರ ಸೆಲಿ ಎಂದೂ ಬತ್ತಿಲ್ಲಾ.

ರಚನೆ : ೧೦-೬-೧೯೬೭

ಭಾವ : ಶಾಶ್ವತ ಸತ್ಯ ಕುರಿತು ಮೀಮಾಂಸೆ.

೭೫ ಇದ್ದಾನೋ ದೇವಾ, ತಮ್ಮಾs !

೧

ಇದ್ದಾನೋ ದೇವಾ ತಮ್ಮಾs !
ಕೃಪೆಯ ಸಾಗರಾ ನಮ್ಮಾ!

ಜಲದಲ್ಲಿ, ಸ್ಥಲದಲ್ಲಿ
ಗಾಳಿಯಲ್ಲೂ ಇರ್ತಾನ
ಕತ್ತಲಾಗೂ ಅಡಗಿಲ್ಲಾ
ಪ್ರಕಾಶದಲ್ಲೇ ಸ್ನಾನಾ ಎಲ್ಲಾ.

ಬ್ರಹ್ಮಾಂಡದಲ್ಲೂ ಸುತ್ತ್ತಾನ
ಪಿಂಡಾಂಡದಲ್ಲಿದ್ದೂ ನೋಡ್ತಾನ

ನಾವು ನೋಡಿದರ, ಕಾಣ್ತಾನ
ಇಲ್ಲದಂತೆಯೂ ಇರ್ತಾನ
ಹೇಳರಿ, ಬಿಡರಿ, ಏನೇ ಮಾಡರಿ
ಎಲ್ಲರ ಚಿಂತಿಯನ್ನೂ ಹೊರ್ತಾನ.

೨

ಹೆಜ್ಜೆ ಹೆಜ್ಜೆಗೂ ಸಂಗದಲ್ಲಿ ಇರ್ತಾನ
ಒಲಿದೆ, ಒಲಿದೆ ಅಂತಾನ
ಕೇಳಿಸಿದ್ದೇ ಕೇಳಸ್ತದ
ಕೇಳಿಸುತ್ತಲೇ ಇರ್ತದ.

ಭೆಟ್ಟಿ ಆಗಲಿ ಬಿಡಲಿ
ಒಂದೇ ಒಂದು ಹಾಡು ಹಾಡ್ತಾನ
ಬೇಕಾಗಿರಲಿ ಬಿಡಲಿ
ಕರುಣೆ ತುಂಬಿ ಹರಸ್ತಾನ

ಆಶೀರ್ವಾದ ಕೊಡ್ತಾನ
ಬೆನ್ನ ಹಿಂದs ಇರ್ತಾನ
ಕಾಯ್ತಾನ, ಕಾವಲುಗಾರ !

೩

ಹಾಡು ಹಾಡತಽ ಕುಣೀತಾನ
ಗಾಥಾ ಕಥಾ ಅಲ್ಲಾ.
ಹಾಡಿದ್ದೆಲ್ಲಾ ಅವನದೇ ತನಾ
ನೆಲದಾಯಿಯಾಗಿ
ತನ್ನ ಮಕ್ಕಳನ್ನ
ತಾನಽ ಸಾಕ್ತಾನ.

ತಲಿಮ್ಯಾಲೆ ಕೂಡಿಸಿಕೋತಾನ
ತೊಡೀಮ್ಯಾಲೆ ಆಡಸ್ತಾನ
ಅವನ ಕಣ್ಣೇ ದೇವಾ !
ಸೂರ್ಯಾ, ಚಂದ್ರಾ ಅಂವಾ !

ರಚನೆ : ೧೫-೬-೧೯೬೭

ಭಾವ : ದೇವಾ ಎಂಬುದು ಅನುಭವ, ಅನುಭಾವ. ಅನುಭವಿಸಿ ತಿಳಿದುಕೊಳ್ಳಬೇಕಾದ ವಿಷಯವೇ ಹೊರತು, ಇದು ಕೇಳಕಿ, ಹಾರಕಿ ಮಾತಲ್ಲಾ.

ವಿಶೇಷ : 'ಔದುಂಬರಗಾಥೆ' - ಸಿದ್ಧಾಂತ ಸಂಪುಟ ಕವನ-೧೨೯೮ 'ಇರತಾನೋ ದೇವರಿರತಾನೋ' ಅಭ್ಯಸಿಸಬೇಕು.

೭೬ ನಾ ಇರುವೆ ಹತ್ತಿ!

೧

ನಾ ಇರುವೆ। ಹತ್ತಿ!
ಹೌದೇನು ?
ನೋಡು ಹಿಂಜಿ
ಅಂಜಿಕಿ ಯಾಕ ?

೨

ನಾ ನೀರಿನ ಗುಳ್ಳಿ
ರಸದಾಗಿನ ಕಳ್ಳಿ
ತೆರೀ ಮ್ಯಾಲೆ ತೆರಿ
ಹೊರಳಾಡತೇನಿ.

೩

ನಾನೇ ನನ್ನ ವಿಮಾನಾ
ನನಗೆ ನಾನೆ ಪ್ರಮಾಣಾ
ಇದಕ್ಕಿಂತ ಬ್ಯಾರೆ ಅಭಿಮಾನಾ
ಉನ್ಮನದ ರೀತಿ !

೪

ನಾನೇ ನನ್ನ ತಂದೆ
ತಪ ಹಾಗೂ ತಾಪಾ
ನೀಲಾಂಜನವೇ ದೀಪಾ
ತುಪ್ಪದ್ದೇ ಬತ್ತಿ!

೫

ನಾನು ತಾಯಿಯ ಮಗಾ
ಮಣ್ಣಿನದೇ ಜಗಾ
ದೇಟು, ಎಲಿ, ಹೂ। ಝುಲ್ಲಿ ಝುಲ್ಲಿ!
ಆ-ಈ-ಊ ಇರುವಲ್ಲಿ.

೬

ಹೊರಗ ಬರುವವನೂ ನಾನೆ
ಒಳಗ ಹೋಗುವವನೂ ತಾನೆ
ನಾನೇ ನನಗ ಆಪ್ತಾ
ವ್ಯಂಜಕ ಪದಾರ್ಥಾ !

೭
ಹ್ರಾಂ ಹ್ರೀಂ ಹ್ರೂಂ
ಹೋಮ, ಹವನ, ಪ್ರೇಮಾ
ಒಂದೇ ನಾಮಾ-ರಾಮಾ !
ಆದರದೇ ಬಳ್ಳಿ .
೮
ಸಂಪೂರ್ಣ ಬಾಲಬೋಧ
ಮಾಡಬೇಕು ಶೋಧ
ಎಂಥ ಅಡ್ಡಿ ಬಂದರೂ ತ್ಯಾಗವೇ
ಯೋಗಾಯೋಗ !
೯
ಶ್ರೀಗುರುವಿನ ಆಕರ್ಷಣೆ
ಓಂಕಾರದ ಪಾರಾಯಣೆ
ಇದುವೆ ಲಕ್ಷ್ಮೀಯ ಸಾನ್ನಿಧ್ಯ
ಶಾಶ್ವತ ಸತ್ಯ !
೧೦
ಸುಗ್ಗಿಯ ಕೋಗಿಲೆ
ವಸಂತದ ಆಗಮನ
ಕಂಠ ಒಡೆದಿತ್ತು
ಕೂಜನ ಇಂಚರ !
೧೧
ಎಲ್ಲ ಬಣ್ಣಗಳು ಒಂದರಲ್ಲೊಂದು
ಬೇಡ, ಕಿರಾತ, ನಿಷಾದ ಅಂದರೂ ಒಂದS
ವಂಶಾನುವಂಶದ ಎಳಿ
ಬೆಳಸಿದ್ಹಾಂಗ ಬೆಳಿ !
೧೨
ಹೆಜ್ಜೇ ಮ್ಯಾಲೆ ಹೆಜ್ಜಿ
ಋಷಿಗಳ ಕಾಲಾಗ ಗೆಜ್ಜಿ
ಧ್ರುವನ ಸುತ್ತ ಸುತ್ತಾಡತಾವ
ತಾರಾಮಂಡಲ ಪುಂಜಿ !

೧೩
ಭರಪೂರ ಬಿಸಿಲು ಮಳಿ
ಸಾಕಷ್ಟು ಕಬ್ಬಿನ ಬೆಳಿ
ಸಕ್ಕರಿಗೆ ಏನು ಕೊರತೆ
ಉಸುಕಿನ್ಯಾಗs ನೀರಿನ ಒರತೆ !
೧೪
ರಸದಾಗ ರಸಾ ಬೆರೀತದ
ಭವಿಷ್ಯ ಭಾವ ಅರಳಸ್ತದ
ಇದು ಎಂದೂ ತೀರೋದಲ್ಲಾ
ಕಣ್ಣಿದ್ದವರಿಗೆ ಕಾಣಸ್ತದ
೧೫
ವಿಷಾದ ಅಂಬೋದು ನೆರಳು
ಪ್ರಸಾದ ದೇವರ ಬೆರಳು
ಶ್ರವಣಕ್ಕ ಬಿದ್ದ ಓಂಕಾರಾ
ಕೇಕಿಯ ಮಧುರ ಸ್ವರಾ ?
೧೬
ಶ್ರೀ ಕೃಷ್ಣನ ಧ್ವನಿ
ಅಂದ್ರs ಕೊಳಲಿನ ಸನ್ನಿ
ಅದs ಅವನ ರಾಜಧಾನಿ।
ಬಿದರಿನ ಬನಾ !
೧೭
ಹದಿನಾರು ಚಂದ್ರನ ಕಲೆ
ಅದರ ಹಿಂದಿನ ಹದಿನೇಳು-ಅಮೃತ ಕಲೆ
ಇದೇ 'ಋತಂ ಸತ್ಯಂ'
ತಿಳಿಯೋದು ಮಹಾಯೋಗ !
೧೮
ಮೃಗಶೀರ್ಷ ಐದನೇ ನಕ್ಷತ್ರ
ಇದರ ಮಳಿ ಶುದ್ಧರಸ
ಜ್ಯೇಷ್ಠಾ ಗೌರಿಯ ಹಬ್ಬಕ್ಕ
ಉತ್ಸಾಹಾ ವಿಶೇಷಾ !

೧೯
ಅಗದಷ್ಟು ಇರ್ತದ ಆಳಾ
ಬೋಧ ಅಂದ್ರ ತಾಳಾ ಮೇಳಾ
ಆಮೋದಾ-ಪ್ರಮೋದಾ
ನಾದದ ನವನೀತಾ !

೨೦
ವಾಣಿಗೆ ಬೇಕಾಗಿತ್ತು ವಿಶ್ರಾಂತಿ
ಅಂತಽ ಹುಟ್ಟಿಕೊಂಡಿತ್ತು ಕಥಾ ಕ್ರಾಂತಿ !
ಅದರಾಗಿನ ಜಾನಪದ ಜೀವನಕ್ಕ
ಅನಂತದ ಗತಿ !

೨೧
ಪ್ರಳಯ ಅಂಬೋದು ಸ್ನಾನಾ
ತೇಲೋ ಆಲದ ಎಲಿಯ ಮಾನಾ
ಬಾಯಾಗ ಅಂಗುಷ್ಟ
ಅಮೃತದ ಸ್ಥಾನಾ !

೨೨
ವಿಠ್ಠಲ ಕಲಿಕಾಲದ ದೇವರು
ಪತಿತರ ಉದ್ಧಾರ ಮಾಡುವ ಮೇರು
ಕೃಷ್ಣಾ ಮತ್ತ ಅರ್ಜುನಾ ಬೇರೆ ಬೇರೆ ಇದ್ದರೂ
ಒಂದಽ ಪ್ರಾಣಾ
ಸಂವಾದದ ತೇರು !

ರಚನೆ : ೧೭-೬-೧೯೬೭

ಭಾವ : ಸೃಷ್ಟಿ, ಸ್ಥಿತಿ, ಲಯ ಕುರಿತು ಚಿಂತನ ಮಾಲೆ.

೭೭ ಪೀಪಿ

ಇದು ಪೀಪಿ
ಮಾವಿನ ಗೊರಟದ ಪೀಪಿ
ಬಾಲಕರ ಕೈಯಾಗಿನ ಪೀಪಿ
ಊದಿದ್ದು ಬಾಯಿ ;
ಹಿಡಿದದ್ದು ಕೈ.
ಆಗ ಚಿಗುರಿತು ಎಲಿ
ಭಾವ ಬುದ್ಬುದಗಳು
ಮಾತನಾಡಿದವು
ಹನಿ ಹನಿ ಕೂಡಿ ಕುಣಿದವು
'ಹಳ್ಳಾ ಕೊಳ್ಳಾ ನೀರು'
ನದೀಗೆ ಸೇರಿ ನದ
ಆಯಿತು ಸಾಗರಾ !

ಝರಿ, ನಿರ್ಝರಿ, ಪ್ರಪಾತಾ
ಜೋಗದ ಜಲಪಾತಾ
ಎಲ್ಲಿ ಅಡಗಿತ್ತು ಮೋಡಾ
ಅದೇ ಪರ್ಜನ್ಯ ನೋಡಾ

ಪತನ ಅಲ್ಲಾ ಪಾವನಾ
ಅವತರಣಾ
ಮಣ್ಣು-ನೀರಿನ ಸಂಬಂಧಾ
ಅತ್ಯಂತ ಅಗಾಧಾ !

ಕಣ್ಣೀರು, ಬೆವರು ಎಲ್ಲಾ ನೀರು
ಹರ್ಷದ ಬೇರು, ಅರಿತವರು ಯಾರು ?
ಹರ್ಷಕ್ಕ ಇಲ್ಲಾ, ಕಾಲದ ಬಂಧನಾ

ಅದು ಆಕಾಶದ ಆತ್ಮಾ
ವರ್ಷಾ ವರ್ಷಾ ನೀರು
'ಅಪೋಜ್ಯೋತಿ ರಸೋಮೃತಂ'
ನಕ್ಷತ್ರಕ್ಕ ತಕ್ಕ ಮಳಿ
ಸ್ಥಿತಿ, ಗತಿ ಇಳೆಗೆ ಇಳಿ

ಇದು ಆಪ್‌ಮುಕ್ತಿ
ಶಿವಶಕ್ತಿಯ ಯುಕ್ತಿ!

ನೀರಿನ್ಯಾಗ ನೀರು ಕೂಡ್ತದ
ಶಿವಶಕ್ತಿಯ ಐಕ್ಯ ಆಗ್ತದ
ಆಗ ಪಿಪಾಣಿ-ಪುಂಗಿ ಆಗ್ತದ
ಸರ್ಪಾಭರಣಾ ತಲಿದೂಗ್ತದ!

ಪ್ರಶ್ನಿ ಕೇಳಬ್ಯಾಡಾ
ಗೋಣು ಹಾಕು
ಅಷ್ಟೇ ಸಾಕು.

ರಚನೆ : ೧೩-೭-೧೯೬೭

ಭಾವ : ಆಪ್ ತತ್ವ ಕುರಿತು ಚಿಂತನ.

೭೮ ಕವಿ

ಕವಿಗಳು ಆಗಿ ಹೋಗ್ಯಾರ
ಇನ್ನೂ। ಆಗಾವರೂ ಇದ್ದಾರ!
ಅವರವರ ಕವಿತೆ। ಹೊಚ್ಚ ಹೊಸಾವು
ಇರ್ತಾವ। ಇರಬೇಕು। ನಿತ್ಯನೂತನಾ!

ಎಲಿ ಒಣಗಿದರೂ। ಮತ್ತ ಚಿಗರ್ತಾವ
ವರ್ಷಕ್ಕ ಕೊನಿ ಆದರೂ। ಹೊಸಾ ವರ್ಷ ಬಂದss ಬರ್ತದ
ಹೋಳೀ ಹುಣ್ಣಿವಿಗೆ। ಚೈತ್ರ ಕಾಣೂದಿಲ್ಲಾ। ಅಂಬೋದೂ ಖರೇನss.

ಮೂಕರಿಗೆ ಕಿವುಡರು ಜೋಡಿ
ಮೌನಕ್ಕ ಶ್ರುತಿ। ಇದ್ದss ಇರ್ತದ
ಕುರುಡರಿಗೆ। ವಾಸನಿ ಗೊತ್ತಾಗ್ತದ.

ಜಾತಿ ಜೋಡಿ ಜಾತಿ। ಬೆಳಕೋತ ಹೋಗಿ
ವಿವೇಕದ ಹಿಟ್ಟು। ಹೊರಡಲೇ ಇಲ್ಲಾ
ಇತಿಹಾಸಾ ಮಣ್ಣಾಗ್ತ ಹೋತು
ಕಲಿಸಿದ್ಹಾಂಗ ಕೆಸರೂ ಆತು.

ಅದರಾಗss। ನಾಕು ಗೆರಿ ಯಾರು ಬರದಾರು?
ಹೊಳೆದರ। ಅಡ್ಡೀ ಮಾಡಾವರು ಯಾರು?
ಅಂತಃಕರಣದ ಮಾತು। ಮನೀ ಕಟ್ಟತಾವ!

ಇಂಥಲ್ಲಿಯ ಗಾಳಿ। ಆಡ್ತಾವ ಕಿವಿಮಾತು
ಆದದ್ದು, ಹೋದದ್ದು। ಎಲ್ಲಾನೂ ಖರೇ ಮಾತು
ಅಮೃತದ ಸೆಲಿ। ತಡವುವರು ಯಾರು ?
ಧೀರರ ಧೈರ್ಯಕ್ಕ। ಬೆಲೆ ಕಟ್ಟಾವರು ಯಾರು ?
ಮಾನವೀಯ ಸಂವೇದನೆಯ ಗತಿ। ಸಾವಕಾಶ
ಕಾಲದ ಪ್ರತೀಕ್ಷೆ। ತಪದಂತೆ ತುಂಬತದ ಆಕಾಶ
ಬೀಜಗಳನ್ನ ಬಿತ್ತತಾನ ಕವಿ। ಬೆದೆಯರಿತು
ಸಾಕ್ಷಾತ್ಕಾರದ ಹಾದಿ ತೋರಸ್ತಾನ। ಒಂದಾಗಿ ಬೆರೆತು.

ರಚನೆ : ೧೩-೭-೧೯೬೭

ಭಾವ : ಕವನ ಸೃಷ್ಟಿಯ ಹೊಸತನ ಕುರಿತು.

೭೯ ಮಹೀದಾಸ

ನಾನೋ ಮಹೀದಾಸ
'ಇತರಾ' ನನ್ನ ತಾಯಿ
ತಾಯಿಯ ಕಂದಾ ನಾನು
ಎಡಿ ತುಂಬುವೆ ಬಾ.

ಪ್ರೇಮ ಮುದ್ರೆ ನಿನ್ನ ತುಟಿ
ನಾಕರ ರಹಸ್ಯ ನನ್ನ ತುಟಿ
ನುಡಿದಿತ್ತು 'ಪೂರ್ಣ ಶಂಭು ವಿಠ್ಠಲಾ'
ನಾ ಕಾಯುವೆ ನಿನ್ನ ಬಾಗಿಲಾ.

'ರಾಮಕೃಷ್ಣ ಹರಿ ವಿಠ್ಠಲಾ'
ಅಂತಾನ ದತ್ತಾ-ಅತ್ರಿನಂದನಾ
ದಮಧ್ವಂ, ದಯಧ್ವಂ, ದತ್ತ ನಾ
ಈ ಬಂಧ ಸಂಬಂಧ ಗೋವಿಂದನಾ.

ಅವನೇ 'ಶ್ರೀಮಾತಾರವಿಂದಾ'
ಸಾರಿದಾ-ಭಾರತ ಮಾತಾ ಕೀ ಜಯ್
ಭೂಮಾತಾ ಕೀ ಜಯ್
ವಿಶ್ವಮಾತಾ ಕೀ ಜಯ್
'ಸಮುದ್ರ ಪರ್ಯಂತಾಯಃ
ಪೃಥಿವ್ಯಾ ಏಕರಾಟ್
ವಿಶ್ವೋ ದೇವೋ ಸಭಾಸದಃ'' ಅಂದಾ.

ಜಿಗುಟು ಅಂಟು। ಕನ್ನಡದಾ ನಂಟು।
ಮರಾಠಿಯಾಯಿತು ನೆಂಟಸ್ತನಾ
'ವಿಶ್ವಧರ್ಮದ ಸೂರ್ಯ' ಕಂಡೆ ನಾ
ಆದಿ ಪುರುಷ-ವಿಶ್ವೇಶ್ವರ ರಾಯ ನಾ
ಅಭಂಗ ಸೀಮಾಲಿಂಗದೇವ ನಾ
ಶಿವಶಕ್ತಿಯ ಸೀಮೆ ಒಂದೇ ನಾ

"ನಾರಾಯಣಂ ನಮಸ್ಕೃತ್ಯ
ನರಂ ಚೈವ ನರೋತ್ತಮಂ
ದೇವೀಂ ಸರಸ್ವತೀಂ ವಾಚಂ
ತತೋ ಜಯಮುದೀರಯೇತ್."

ರಚನೆ : ೧೦-೧೦-೧೯೬೬

ಭಾವ : ಬೇಂದ್ರೆ ಇಹಜೀವನ ಕುರಿತು ತಾಳಿದ ದೃಷ್ಟಿ ಕೋನ. ಬೇಂದ್ರೆಯವರಿಗೆ ಪರಲೋಕ ಜೀವನಕ್ಕಿಂತ ಇಹಲೋಕದ ಜೀವನವನ್ನೇ ಪಾವನ ಮಾಡಿಕೊಳ್ಳುವ ಅಭೀಪ್ಸೆ ಇತ್ತು.

ವಿಶೇಷ : 'ಔದುಂಬರಗಾಥೆ' ನಮನ ಸಂಪುಟ-೧, ಕವನ-೧೬ 'ನಾನೋ ಮಹೀದಾಸ' ಅಭ್ಯಸಿಸಬೇಕು.

೮೦ ಸಾಧಾ ಪ್ರಶ್ನೆ

ಪ್ರಶ್ನಿ। ಅತ್ಯಂತ ಸಾಧಾ
ಮನಸ್ಸಿಗೆ। ಮನಸ್ಸಿನದೇ ಬಾಧಾ।

ಅಭಕ್ತs। ಅಮುಕ್ತ। ಸ್ವೇಚ್ಛಾಚಾರಿ
ನಾಕೂ ದಿಕ್ಕಿಗೆ ನಾಕು ಹಾದಿ
ಒಂದೂ ಮೊಗ್ಗು। ಅರಳಿಲ್ಲಾ!

ಅಡ್ಡೀ ಏನು ?
ಅಡ್ಡಿ ಇಲ್ಲಾ ಅಂದರೂ ಏನು ?
ಒಗಟದಂಥಾ ಮಾತು।
ಒಗಟ ಇಲ್ಲದ ತೊಡಕಿನ ಜಗ್ಗಾಟಾ.

ಇದರಾಗ ಅದು। ಅದರಾಗ ಇದು
ಸೇರಿಸಿಕೋತ ಹೋದರ
ಜಡಿ ಬಿಡಸೋ ಹವ್ಯಾಸಾ
ಮನಸ್ಸಿಗೆ ಇದರದs ಧ್ಯಾಸಾ.

ಹರಿಯ ನಾಮಸ್ಮರಣೆ। ಎಲ್ಲದಕ್ಕೂ ಪರಿಹಾರ
ಕ್ಷಣಕ್ಷಣಕ್ಕ। ಪ್ರತಿ ಪ್ರಹರಕ್ಕ। ಸಮೀಪಕ್ಕ ಹರಿ
ಎಚ್ಚರಾಗು। ಎಚ್ಚರಿಕೆ ಕೊಡು।
ಅವನೊಳಗ ನೀನು। ನಿನ್ನೊಳಗ ಅವನು
ಇಬ್ಬರೊಳಗ ಒಂದು ಅಡ್ಡಗ್ವಾಡಿ
ಒಬ್ಬರಿಗಿನ್ನೊಬ್ಬರು ಕಾಣೂದಿಲ್ಲಾ!

ಪ್ರಕಾಶ ಅಂಬೋದು। ಟೆಂಗಿನಪರಟಿ
ಎಲ್ಲ್ಯದ ಖೊಬ್ಬರಿಬಟ್ಟಲಾ ?
ಎರಡಕ್ಕೂ ಸಂಬಂಧ ಅದS ಅಂದ್ರ ಅದ
ಒಟ್ಟನ್ಯಾಗ ಕಪಟ ನಾಟಕದ। ಸಾಧಾಸೂತ್ರಾ।

ರಚನೆ : ೨೯-೧೦-೧೯೬೭

ಭಾವ : ಕಪಟನಾಟಕ ಸೂತ್ರಧಾರಿ ಹರಿ ಕುರಿತು ಚಿಂತನ.

ಶಬ್ದಾರ್ಥ : ಧ್ಯಾಸಾ=ಚಿಂತಿ.

೮೧ ಬೆಂಕಿ ಹತ್ತಿತ್ತು ಆಗಸಕ್ಕೆ !

ಬೆಂಕಿ ಹತ್ತಿತ್ತು। ಶಂಖಾ ನೀವು ಕುಟ್ಟರಿ
ಅಂಥ ತಮಸ್ಸಿನ ಚಿತೆ ಹೊತ್ತಿತ್ತು। ರಾಮ ರಾಮಾ ಹೇಳರಿ ॥ ಪಲ್ಲವಿ॥

೧

ಹೋಳೀ ಹುಣ್ಣಿವೆ ಮುಗಿದು। ಬಂತು ಚೈತ್ರದ ತೇರು !
ಗ್ರಹಣ ಬಿಟ್ಟಿತು। ಕತ್ತಲೆ ಹಾರಿತು। ವಿಚಿತ್ರ ಈ ಮೇರು !
ಆದರೂ ನೀವು ಕಣ್ಣುಮುಚ್ಚಿಯೆ। ಶಂಖ ಕುಟ್ಟುವಿರಲ್ಲಾ
ಕಣ್ಣು ತೆರೆದು ನೋಡಿರಿ ನೀವು। ಸತ್ಯ ಸೊಬಗು ಎಲ್ಲಾ.

೨

ಕತ್ತಲೆಯಲ್ಲೂ ಬೆಳುದಿಂಗಳ। ಪ್ರಭೆ
ಬಯಸುವವರು। ಜನಾ
'ಹಾಡೇ ಹಗಲು'। ನಕ್ಷತ್ರ ಕಾಣುವಾ
'ದುರ್ಬೀಣ'। ಬೇಕು ಈಗಿನಾ।

೩

ಸುಖಪಟ್ಟವರಂತೆ। ಕವನವ ರಚಿಸಿ
ಮಾಡದಿರಿ ಮೋಸ। ದೀನರಿಗೆ
ಚೈತ್ರ ಸುಖದ ದಿನ। ಬಂದಾಗ ಮಾತ್ರ
ಹೊಸ ಬಳೆ। ಏರಲಿ ಕೈಗಳಿಗೆ.

೪

ರಾಮ, ಸೀತೆ। ಶಂಕರ ಪಾರ್ವತಿ
ನಗುವುದು। ಸುಳ್ಳು ನಗೆ
ಸುಕೃತದ ಬಾಳು। ನಡೆದಾಗ ಅಲ್ಲಿ
ಕೊರತೆ ಇರದು। ಜೀವಗೆ.

೫

ಅಶ್ವಿನಿ, ಚಿತ್ರಾ। ಮುಗಿದು ಶ್ರಾವಣಾ
ಬಂದಿವೆ ನೋಡಿರಿ ಇನ್ನು
ಅಳುವದು ಸಾಕು। ಕಣ್ಣು ಒರಿಸಿರಿ
ಕಾಣಿರಿ ಬಂದ ಸುಖವನ್ನು.

೬

ಸೊಗಸಿನ ದಿನಗಳು। ಬಂದಿವೆ
ಹಾಡಿರಿ। ಹಳ್ಳಿಯ ಹಾಡು
ಬೀಸೂಕಲ್ಲಿನ ಪದಗಳು। ಸಾಗಿವೆ
ಇದೇ ಸುಖದ ಬೀಡು.

೭
ಶಂಕರ ಬಂದನು। ನಲಿವನು ತಂದನು
ಆಕ್ರಂದನ ಸಾಕು
ಓಂಕಾರದ ಪ್ರಣವ ನಾದವಿದು
ನಿನಗೆ ಏನು ಬೇಕು ?
೮
ಕಾಳ್ಗಿಚ್ಚಿನ ಬೆಂಕಿ। ಆರಿತು
ಮತ್ತೆ। ನೆನೆಯದಿರಿ ದುಃಖಾ
ಹರ್ಷದಲ್ಲಿ ಮುಳುಗಾಡಿರಿ ನೀವು
ಆಗಿರಿ। ಅಂತರ್ಮುಖಾ.
೯
ರಾಮ ನಾಮ। ಪ್ರೇಮ ನಾಮ।
ಕಾಮನಾಮವಾಗಲಿ
ಸ್ಮರಣೆಯಲ್ಲಿ ಇದೇ ಇರಲಿ
ದರ್ಶನವೂ ಆಗಲಿ.
೧೦
ಗಿರಜೆಗೆ ಒಲಿದಾ। ಶಂಕರ ಅಂದು
ಕುಮಾರಸಂಭವ ಆತು
ತಾರಕಾಸುರನ ಸಂಹಾರವು ಆಗಿ
ಬೆಂಕಿ ನಂದಿ ಹೋತು.

ರಚನೆ : ೧೬-೫-೧೯೭೭

ಭಾವ : ಸುಖ ದುಃಖ ಕುರಿತು ಚಿಂತನ.

ಶಬ್ದಾರ್ಥ : ಹಾಡೇಹಗಲು=ಬೆಳಕು ಇರುವಾಗಲೇ. ದುರ್ಬೀಣ=ದೂರದರ್ಶಕ ಯಂತ್ರ.

೮೨ ಬೆಳಗಿನ ಹಾಡು

೧
ಅತ್ರಿ ವರದಾಯಕ ಅನಸೂಯೆ!
ಬಾ, ಬಾ, ನೀ ಒಲಿ
ಜಗದಂಬೆ, ಶಂಕರಿ, ಶುಭಕರಿ!
ವರ ಈ; ನೀ ನಲಿ.
೨
ಜಾತಿ ಜಾತಿಯಲಿ ವೈರ ಬೆಳೆದು
ಮತಮತಗಳು ಕಳೆದಿವೆ ಮತಿ
ಏರಿ, ಇಳಿದು, ಹೊಗಳಿ, ತೆಗಳಿ
ಜಡವಾಗಿದೆ, ಇಲ್ಲಾ ಗತಿ.
೩
ಅಪಕ್ವ ಕಾಮದಿ ಕುರುಡಾಗಿಹ ಜನಾ
ಹಿಡಿದಿದೆ ಅನರ್ಥ ಹಾದಿ
ಅಧರ್ಮದೆಡೆಗೆ ತೂಕವು ಹೋಗಿ
ತೂಕ ತಪ್ಪಿಸಿದೆ ವಿಧಿ
೪
'ಉಧೋ ಉಧೋ' ಉರಿಯುವುದೇಕೆ
ಹೊತ್ತಿದ ಈ ದೀವಟಿಗೆ
ರಕ್ಷಣ ಮಾಡದೆ ಪ್ರಲಯವನ್ನೆ
ಸೂಚಿಸುತ್ತಿದೆಯೊ? ಹೇಗೆ!
೫
ಗಡಗಡ ನಡುಕದ ಈ ಛಳಿ
ಚಿಗುರಿಸಲಿ ಗಿಡಾಗಿಡಾ
ರಾಧಾ ಮಾಧವ ಜೋಡಿಯಾಗಿ
ಹಬ್ಬಲಿ ವಸಂತ ನಿಬಿಡಾ
೬
ವಿಷವಾದದ್ದು ಸುಟ್ಟು ಹೋಗಲಿ
ಹರಗೋಣ ಬಾ ಈ ಹೊಲಾ
ಗೋಪ-ಗೋಪಿ, ಗೋಗಳು ಕೂಡಿ
ಹಾಡಿ ಕುಣಿಸೋಣು ಈ ನೆಲಾ

೭
ಶಾಪ ತೀರಿತು ದುರ್ವಾಸನದು
ಆಯಿತು ದತ್ತ ದರ್ಶನಾ
ಸೋಮನ ಆಹುತಿ ಅಗ್ನಿ ಮುಖಕ್ಕೆ
ನೀಡೋಣ ದಿನದಿನಾ

೮
ಗಣ ಗಣ ಘಂಟೆ, ಶುದ್ಧಿಯ ಪೂಜೆ
ಗಣಪತಿಗೆ ಮಾಡೋಣಾ
ಪ್ರತಿ ನಿತ್ಯವೂ ನೃತ್ಯದ ಸೇವೆ
ಆನಂದದ ಅರ್ಪಣಾ

೯
ಸಮಪಾದದ ಸರೋಜ ವ್ಯಾಪಿ
ಭಕ್ತ ಭೃಂಗದ ಸಾಲು
ಗೆಳೆತನವೆಂಬೀ ಶಕ್ತಿಯು ತಾ
ಬೆಳೆದರೆ ಅದು ಮೇಲು

೧೦
ಮಹಿ, ಚಂದ್ರ, ಆದಿತ್ಯ, ನಕ್ಷತ್ರ
ಧ್ರುವನತ್ತ ಅವರ ದೃಷ್ಟಿ
ಸಪ್ತರ್ಷಿ ಮಂಡಲದ ನವಸ್ಥಿತಿಯು
ತಾ ನವ ನವ ಸೃಷ್ಟಿ

೧೧
ಅಂಗೀರಸ, ವಸಿಷ್ಠ, ಮರೀಚ
ಏನಿದ್ದರೂ ಆಗಲಿ ಸರಿ
ತ್ರಿತಾಪ ಸರಿಸಿ, ಅತ್ರಿ ಬಿತ್ತಿ
ಬೆಳೆಸಲಿ ನಾರಾಯಣನಾ ಸೆಲಿ

೧೨
ಲಕ್ಷ, ಕೋಟಿ ಶಿಖರಗಳನ್ನು ಏರಿ
ಬೀರಲಿ ಅರವಿಂದರು ಆ ಕೃಪಾ
'ವಾಸುದೇವ' ಈ ವಸುಂಧರೆಗೆ
ಉಳಿಸಲಿ ನೀಡಿ ದಿವ್ಯತೆಯ ದೀಪಾ

ರಚನೆ : ೧೯೭೭

ಭಾವ : ಬೆಳಗಿನ ಹೊತ್ತು ಹೊಳೆಯುವ ವಿಚಾರಗಳ ಮಾಲೆ. ಶ್ರೀ ಅರವಿಂದರಿಗೆ ವಾಸುದೇವ ಸಾಕ್ಷಾತ್ಕಾರವಾಗಿತ್ತು.

೮೩ ಧ್ವನಿ

ಧ್ವನಿ ಇಲ್ಲದ ಹಾಡು ಎಂಥಾ ಹಾಡು ?

ಗುಡುಗಾಡೋದು ನಿಂತರ ಗುಡುಗೇನು ?
ಅಡಗಸಲಿಕ್ಕೆ ಬರದಿದ್ದರ ಕಳವೇನು ?

ಜ್ಞಾನ ನೇತ್ರ ಇದ್ದರ ಕ್ಷೀರಸಾಗರದ ನಕಾಶೆ ತೆಗೀಬಹುದು
ಅಂಗಾಲಿಗೆ ಕಣ್ಣಿದ್ದರ ಆಕಾಶದಾಗೂ ಹಾದಿ ಮಾಡಬಹುದು
ನಡುಗಣ್ಣ ಇದ್ದರ, ಗ್ವಾಡ್ಯಾಗೂ ಪ್ರಕಾಶ ಕಾಣಬಹುದು

ಬ್ಯಾಡರು ಜಾಲಾ ಹಾಕಿದರ
ಹಕ್ಕೀ ಪ್ರಾಣಾ ಹಾರದಽ ಇರ್ತದಽ ?
ಮೂರು ಕಲ್ಲಿನ ಒಲೀಮ್ಯಾಲೆ
ಅನ್ನ ಆಗೇ ಆಗ್ತದ

ರಚನೆ : ೨೬-೮-೧೯೭೯

ಭಾವ : ಪ್ರತಿಯೊಂದು ವಸ್ತುವಿಗೆ, ಅದರದರ ಧ್ವನಿ ಇರುತ್ತದೆ. ಅದರ ಬೋಧಮಾಡಿಕೊಳ್ಳುವುದು ಅವಶ್ಯ. ಧ್ವನಿ ಕಾವ್ಯದ ಆತ್ಮ.

೮೪ ಬೀಜ - ಬೆಳಿ

ಪ್ರೇಮದ ಬೀಜ ಇರದಿದ್ದರ ದೂತಿಯ ಕೆಲಸೇನು ?

ಭೂಮಿ ಗರಗರಾ ತಿರಗ್ತದ
ಬೆಳಕು ತಿರಗ್ದs ಹಬ್ಬತದ

ಕುರುಡನಿಗೂ ಇರ್ತದ ಬಾಯಿ
ದುಃಖಾ ಸುಖದ ಹಿಂದಿನ ನಾಯಿ
ಎಲ್ಲಾದಕ್ಕೂ ಇರ್ತಾಳ ತಾಯಿ

ತುದಿ ಅಂದಾಗ ಹಿಂದೋ ಮುಂದೋ ?
ಟೊಂಕಾ ಅಂದಾಗ ಮ್ಯಾಲೋ ಕೆಳಗೋ ?
ಸುಳ್ಯಾಗ ಸುಳಿ, ಅಂದ್ರ ಯಾವ ಕಡೆ ?
ಬೀಜ ಈ ಕಡೆ ; ಬೆಳಿ ಆ ಕಡೆ.

ರಚನೆ : ೧೬-೮-೧೯೭೯

ಭಾವ : ಪ್ರತಿಯೊಂದರ ಲಕ್ಷಣ ಬೇರೆ ಬೇರೆ. ಆದರದರ ನಿಶ್ಚಿತಾರ್ಥ ಅವಶ್ಯ.

೮೫ ಊಹೆ

ಮೆಚ್ಚಿಗೆ ಪಡೆಯದ ಊಹೆ ಎಂಥಾದ್ದು?

ಕಣ್ಣು ಕಟ್ಟಿಕೊಂಡು ಓಡೋದು ಹ್ಯಾಂಗ?
ಬಾಗಿಲಾ ತೆಗೀದಽ ಹುಡಕೋದು ಹ್ಯಾಂಗ?

ಯಾರೂ ಇಲ್ಲಾ; ಗುಣಗಳನ್ನ ಕಾಣೋದು ಹ್ಯಾಂಗ?
ಖನಿಜ ಇದ್ದರಽ ಸಂಪತ್ತು ಅಂದ್ಹಾಂಗ
ಮಣಿಗಳೊಳಗಽ ಚಿಂತಾಮಣಿ ಇದ್ದ್ಹಾಂಗ

ಚಂದ್ರ ಹುಟ್ಟೋ ಮೊದಲೂ ಸೌಂದರ್ಯ ಇದ್ದಽ ಇತ್ತು
ಸೂರ್ಯೋದಯದ ಮುಂಚೇ ಸತ್ಯೋದಯ ಇತ್ತು
ದೇವತೆಗಳ ಮೊದಲೇ ಒಳ್ಳೆತನಾ ಇತ್ತು
ಕಳ್ಳರ ಸಂಖ್ಯಾ ಬೆಳೆದಾಗ, ಕಣ್ಣು, ದೃಷ್ಟಿ ಕಳಕೊಂಡಿತು.

ರಚನೆ : ೨೬-೮-೧೯೭೯

ಭಾವ : ಆಧಾರವಿಲ್ಲದೆ ಊಹೆ ಮಾಡಬಾರದು.

೮೬ ನಾಲಿಗೆ

ಇಸ್ತ್ರಿ ಮಾಡಿದ ಬಟ್ಟೆಗೆ ಡೌಲು ಬೆಳೀತದ

ಹುಣಸೀ ಹೆಸರು ತೆಗೆದರ, ನೀರು ಚಿಮ್ಮತದ ನಾಲಿಗೆಗೆ
ಸರೋವರದಾಗ ನೀರು ಇದ್ದರ, ಕಮಲ ಅರಳ್ತದ

ಆ ಕಡೆ ಇತ್ತು ಎಚ್ಚರಾ
ಈ ಕಡೆ ಇತ್ತು ನಿದ್ದಿ ಪೂರಾ
ಇಂಥಲ್ಲೆ ನಾವು ಇರ್ತೇವೋ ಇಲ್ಲೋ , ಪೋರಾ ?

ತತ್ತಿಗೆ ಬೇಕು ಕಾವು
ಚಿತ್ತಕ್ಕ ಬೇಕು ನೋವು
ಖೊಟ್ಟಿಗೆ ಬೇಕು ಸತ್ಯದ ಸಾವು
ಕಳ್ಳ ನಾಲಿಗೆಗೆ ಬೇಕು-ನಾವು ನೀವು.

ರಚನೆ : ೨೬-೮-೧೯೭೯

ಭಾವ : ಕಾರ್ಯ ಕಾರಣ ಸಂಬಂಧ ಅರಿತುಕೊಳ್ಳಬೇಕು.

ಶಬ್ದಾರ್ಥ : ಪೋರಾ=ಹುಡುಗಾ.

೮೭ ಹರಿಹರ

ಹರಿ, ಹರ ಸತತ ತಿರುಗು ಗರಗರಾ

ರಾಮಾ, ಕೃಷ್ಣಾ, ಹರಿ
ಸುವರ್ಣನ ಇಲ್ಲಾ, ಬೇಕ್ಯಾಕ ವರಿ?

ಕೊಳ್ಳಾಗ ಕಟ್ಟತಾರೇನು ನತ್ತು?
ಮೂಗು, ಮೂಗಬಟ್ಟು ಬ್ಯಾರೆ ಇತ್ತು
ಸುಳ್ಳರಿಗೆ, ಜೊಳ್ಳರಿಗೆ ರೀತಿ ಇಲ್ಲದ ಗಮ್ಮತ್ತು!

ಜನ್ಮಕ್ಕ ಬರದ ಮುಕ್ತಿ ಇಲ್ಲಾ
ನೀರು ಇಲ್ಲದಾಗ ಕದಕೋದು ಇಲ್ಲಾ
ಆಶ್ರಯ ಅಂದಾಗ ಊರು ಬೇಕಲ್ಲಾ
ಸಂಖ್ಯಾನ ಇಲ್ಲದಾಗ-ವಜಾ, ಬಾಕಿಗೆ ಅರ್ಥ ಇಲ್ಲಾ.

ರಚನೆ : ೨೬-೮-೧೯೭೯

ಭಾವ : ಹರಿ, ಹರ ಕುರಿತು ಚಿಂತನೆ ಬೆಳೆಯುತ್ತಿದೆ. ಅರ್ಥ ಗುಪ್ತ.

೮೮ ಜಿಗಟುತನಾ

ನಾವs ಮಾಡಬೇಕು ಸಲಿಗಿ, ಸಹವಾಸಾ

ಜಿಗಟುತನಾ ಇರದಿದ್ದರ ಹಾರಾಡಬಾರದು
ಒಗಟಾ ಹಾಕೇ ಇಲ್ಲಾ, ಒಡೆಯೋದು ಏನು ?

ಎಣ್ಣ್ಯಾಗ ಕಣ್ಣಿಟ್ಟು ನೋಡಬೇಕು
ಕಣ್ಣಾಗ ಎಣ್ಣೀ ಹಾಕಿ ನೋಡಬೇಕು
ಬಿಸಿ ನೀರೇ ಇಲ್ಲಾ, ಬೆರಸೋದೇನು ?

ನಿಮಗ ಬೇಕಾಗಿರಬಹುದು ಅನಂತ. ಕೊಡಾವರ್‍ಯಾರು ?
ಹೊರೋ ಬೆನ್ನು ಘಟ್ಟಿ ಇರದ, ದಾನ ಪಡದೇನು ?
ಸಾಕೋ ಸಾಕು, ಅನ್ನಾವರ ಮುಂದ ಮಾಡೋದೇನು ?
ಸುಳ್ಳು ಹೇಳಿ ಸಾಲ ಸಿಕ್ಕೀತು, ಮುಟ್ಟಸೋ ದಿಕ್ಕೇನು ?

ರಚನೆ : ೨೬-೭-೧೯೭೯

ಭಾವ : ಜೀವನದಲ್ಲಿ ಪ್ರಯತ್ನಕ್ಕೇ ಫಲ ಸಿಗೋದು.

೮೯ ಧಾರಣೆ

ಕೋಲೆತ್ತಿನ ಬೆನ್ನಮ್ಯಾಲೆ ಮಂಗ್ಯಾನ ಸವಾರಿ.

ಹೊಸಬರಿಗೆ ಧಾರಣೆ ಗೊತ್ತಿಲ್ಲ. ಮಾಡೋದೇನು ?
ಪಾಡs ಆಗಿಲ್ಲಾ ಕಾಯಿ, ಅಡೀಗೆ ಹಾಕೇನು ?

ತೊದಲು ತೊದಲಿನಿಂದ ಭಾಷಣ ಪ್ರಾರಂಭಿಸಬಾರದು
ಅಡಚಣೆ ಇದ್ದಾಗs ಹೊಸಾ ಅಡಚಣೆ ಹುಟ್ಟಿಸಬಾರದು
ಒಗ್ಗಟ್ಟು ಅಂದ್ರ-ಅನೇಕ ಒಡಕು ಹುಟ್ಟಿಸಬಾರದು.

ಲಿಂಬೀಕಾಯಿ ಗಿಡಕ್ಕ ಬ್ಯಾರೆ ಕಾಯಿ ಇರಬಾರದು
ಬೇವಿನ ಗಿಡಕ್ಕ ಬರೇ ಬೇವಿನ ಕಾಯಿನs ಇರೋದು
ಕಾಮುಕರಿಗೆ ಕಾಮರಾಜ್ಯದ್ದೇ ನೆನಪಾಗೋದು
ಸ್ವಾಮಿಯನ್ನರಿತವರ ಕಡೆ, ಸಾಮ್ರಾಜ್ಯ ಬರೋದು.

ರಚನೆ : ೨೬-೮-೧೯೭೯

ಭಾವ : ಪ್ರತಿಯೊಂದರ ಸ್ವಭಾವ ಬೇರೆ ಬೇರೆ.

ಶಬ್ದಾರ್ಥ : ಅಡಿ=ಕಾಯಿ ಹಣ್ಣು ಆಗಲು ಹುಲ್ಲಿನಲ್ಲಿ ಮುಚ್ಚಿ, ಕಾವು ಕೊಡುವ ರೀತಿ.

೯೦ ಪ್ಯಾಟಿ

ಪ್ಯಾಟಿ ಅಂದಮ್ಯಾಲೆ ನೂರಾರು ಜನಾ ಇರಾವರs

ಬಿಚ್ಚು ವ್ಯಾಪಾರಕ್ಕ ಸಂದಿಗೊಂದಿ ಯಾಕ ?
ಕಣ್ಣು ಕಣ್ಣು ಕೂಡಿದಾಗ, ಹಿಂದ ಮುಂದ ಯಾಕ ?

ಸಿಟ್ಟು ಬಂದಾಗ ಸೆಟೆದು ನಿಲ್ಲಬ್ಯಾಡಾ
ಇದ್ದಲ್ಲೇ ಕೂತು ಚಡಪಡಿಸಬ್ಯಾಡಾ
ಸಂತಿ ಆದಮ್ಯಾಲೆ, ಇರಬ್ಯಾಡಾ ಅಲ್ಲೆ

ಹರಾ ಏರಿದಾ ಕೈಲಾಸ ಶಿಖರಾ
ಅಲ್ಲೇ ಇದ್ದಳು ಗಿರಿಜಾ ಪೂರಾ
ಸ್ಮರಣೆಯಲ್ಲೆ ಇರತದ ಭೋಗಾ
ಶಿವಾ, ಕಾಮಾ ಆದಾಗ, ರತಿಗೆ ವಿಯೋಗಾ.

ರಚನೆ : ೨೬-೮-೧೯೭೯

ಭಾವ : ಪರಸ್ಪರ ಸಂಬಂಧ ತಿಳಿದುಕೊಂಡು ಬಾಳಬೇಕು. ಅಸಂಬಂಧವೇ ಹಾನಿಯ ಮೂಲ ಕಾರಣ.

೯೧ ಗಿಳಿ

ಗಿಳೀ ಬಣ್ಣಾ ಹಸರು ಹಸರು!

ವನವನದಾಗೂ ಗೂಡು
ಗಿಳಿ ಕೂಡ್ತಾವ ನೋಡು

ರೆಕ್ಕಿಗೆ ಒಡೀತಾವ ರೆಕ್ಕಿ
ಕೂಡಿಯೇ ಬೆಳೀತಾವ ನಿಕ್ಕಿ
ಬೇರೆ ಎಂಬ ಬೆರಕೀತನಾನ‌ಽ ಇಲ್ಲಾ

ಫಕ್ ಫಕ್ ಪಕ್ಕಾ ಹಾರಸೋದು
ರಾತ್ರಿಯಾದಲ್ಲೇ ಇಳಕೊಂಬೋದು
ಅಲ್ಲೇ ಕಾಣೋದು ಬೆಳಕು
ಹುಣ್ಣವಿ, ಅಮಾಸಿ, ಒಂದೇ ಥಳಕು

ರಚನೆ : ೨೬-೮-೧೯೭೯

ಭಾವ : ಗಿಳಿ ಗೆಳೆತನದ ಪ್ರತೀಕ. ಸ್ನೇಹವಿದ್ದಲ್ಲಿ ಸುಖ ದುಃಖ ಸಮಪಾಕ.

ಶಬ್ದಾರ್ಥ : ನಿಕ್ಕಿ=ನಿಶ್ಚಿತ.

೯೨ ಇರವು

ಅಲ್ಲಮಪ್ರಭುವಿನ ಇರವಿಗೆ ಇರಿವಿಗಳಿಲ್ಲಾ!

ಬೆಲ್ಲಕ್ಕೆ ಅದರಾ ರುಚಿ ಬೇರಿಲ್ಲಾ
ಭಕ್ತರ ಬಿಟ್ಟರೆ ಭಜನಿಯೇ ಇಲ್ಲಾ

ಕನ್ನಡಿಯಂತೆಯೆ ಅಲ್ಲಿಯ ಬಿಂಬಾ
ಮಾತು ಮೌನಾ ಪೂರಕ ಎಂಬಾ
ಅಖಂಡ ಎಂಬುದು ಜಗದ ತುಂಬಾ

ಧಾರವಿಲ್ಲದ ಸೂಜಿ ಮಾಡುವುದೇನು ?
ಕೊಯ್ದದ್ದು ಹೊಲೆಯೋದು ಅದರ ಕೆಲಸಲ್ಲೇನು ?
ಭಯವೇ ಇಲ್ಲದ ಶಿವಸೀಮೆ ಅಂದರೇನು ?
ಕರು ಕುಡಿದರೆ, ಆಕಳ ಹೊಟ್ಟೆ ತುಂಬದೆ ಏನು ?

ರಚನೆ : ೨೬-೮-೧೯೭೯

ಭಾವ : ಯೋಗ್ಯ ಉಪಕರಣದಿಂದ ಯೋಗ್ಯ ಕೆಲಸ.

೯೩ ಗೆರಿ

ಒಂದೇ ಗೆರಿ
ಚೌಕೋನ ಆಗಿ
ವರ್ತುಲದ ಹೊರಗ ;
ವರ್ತುಲದ ಒಳಗ-ತ್ರಿಕೋನ ಆಗಿ, ಮಾಗಿ
ಅವತಾರವಾಗಿ ಅವತರಿಸ್ತದ
ಎಂಬುದೇ ಆಶ್ಚರ್ಯ !

ಯಾರ ಕೈ ಯಾರು ಹಿಡೀಬೇಕು ?
ಭಕ್ತಿ ಮಾರ್ಗದಾಗ ಭಗವಂತನದೇ ಯೋಗ
ಪ್ರತಿ ಜೀವಕ್ಕೂ ಅಲ್ಲಿ ಸ್ಥಾನ ಸಿಕ್ಕಾಗ
ಕವಿ ಆಗ್ತಾನ ಚತುರ
ಚಾತುರ್ಯ ವಿಠ್ಠಲನದು
ಅರಿವೇ ಆಶ್ಚರ್ಯ ರೇಖೆ!

ರಚನೆ : ೧೯-೮-೧೯೮೧

ಭಾವ : ತನ್ನ ತಾನರಿತರೆ ಅರಿವೇ ಗುರು ಎಂಬುದು ಪ್ರಖ್ಯಾತ. ಇದನ್ನು ಒಂದು ಗೆರಿಯ ಉದಾಹರಣೆಯಿಂದ ವಿವರಿಸಲಾಗಿದೆ.

೯೪ ಓಂ೭ ಷೋಡಶೀ

ಓ೭ ಬಾ೭ ಷೋಡಶೀ
ಪ್ರತಿ ನಿಶಾನಿಶಿ
ಚಂದ್ರರಿಗೆ ಹದಿನಾರು ಕಲೆ
ಕಾವ್ಯ ಪ್ರಜ್ಞೆ ಹದಿನಾರರ ನೆಲೆ

ಅಮೃತಾ, ಮಾನದಾ, ಪೂಷಾ
ತುಷ್ಟಿಃ, ಪುಷ್ಟೀ, ರತಿ, ಧೃತಿಃ
ಶಶಿನೀ, ಚಂದ್ರಿಕಾ, ಕಾಂತಿಃ
ಜ್ಯೋತ್ಸ್ನಾ, ಶ್ರೀಃ, ಪ್ರೀತಿರೇವ ಚ
ಅಂಗದಾ, ಚ ತಥಾ ಪೂರ್ಣಾ-
ಮೃತಾ ಷೋಡಶೀ ಕಲಾ ನಿನ್ನರಂಗಾ
ಗಾಥಾ-ಗೇಯ-ಗೀತಾ ನನ್ನ ಅಂಗಾಂಗಾ

ರಚನೆ : ೧೨-೭-೧೯೭೮

ಭಾವ : ಸ್ವರಗಳು ಹದಿನಾರು. ವ್ಯಂಜನಗಳಿಗೆ ಸ್ವರ ಕೂಡಿದಾಗ ಮಾತ್ರ ಉಚ್ಚಾರ. ಸ್ವರಗಳ ಆರೋಹ, ಅವರೋಹ, ಆಂದೋಲನವೇ ಗೇಯ ಗೀತದ ಪ್ರಮುಖ ಲಕ್ಷಣ. ಷೋಡಶ ಎಂಬುದು ಒಂದು ಯಜ್ಞ. ದೇವತಾ ಪೂಜೆಗೆ ಹದಿನಾರು ಅಂಗ. ದುರ್ಗಾಮಾತೆಯ ಒಂದು ರೂಪಕ್ಕೆ ಹದಿನಾರು ಭುಜಾ. ಹದಿನಾರು ದೇವತೆಗಳು ಸೋಮರಸವಿಡುವ ಒಂದು ಪಾತ್ರೆ-ಷೋಡಶಸ್. ಇದೆಲ್ಲವೂ ಕಾವ್ಯ ಸೃಷ್ಟಿಯ ಹಿನ್ನೆಲೆಯಾಗಿ ಕಾರ್ಯ ಮಾಡುತ್ತವೆ ಎಂಬ ಅನುಭವ ಬೇಂದ್ರೆಯವರದಾಗಿತ್ತು.

೯೫ ಕೃತಜ್ಞತೆ

೧

ತಾಯಿಯ ಉದರದ ಮಣ್ಣು, ಬರೀ ಮಣ್ಣಾಗಲಿಲ್ಲಾ!
ಪ್ರಕಾಶದ ಪಿಂಡವೇ ಜ್ಯೋತಿ ಆಗಿತ್ತಲ್ಲಾ!

೨

ಕತ್ತಲೆಯನ್ನೇ ಹಿಕ್ಕಿ ಬೆಳಕು ತುಂಬಿತ್ತಲ್ಲಾ!
ನೋಡನೋಡ್ತ್ತ ನಸುಕು ಅರಳಿ ಬಂತಲ್ಲಾ!

೩

ಇತ್ತೋ ಇಲ್ಲೋ ಎಂಬಲ್ಲೆಲ್ಲಾ ಬೆಳಗೇ ಬೆಳಗಿತ್ತಲ್ಲಾ!
ಪಾಮರ ಜಗತ್ತಿನ ಬೆಳಕಿಗೂ ಉಪಮೆ ತಾನಿಲ್ಲಾ!

೪

ಇಗೊ, ನವವಿಸರ್ಗದ ಹೊತ್ತು ಬಂತಲ್ಲಾ!
ಸಮುದ್ರದ ತಳದ ಚಿಪ್ಪು ಕರೆಕೊಟ್ಟಿತ್ತಲ್ಲಾ!

೫

ಸ್ವಾತಿಯ ಮುತ್ತಿಗೆ, ತ್ರಿಲೋಕರಕ್ಷಕ ತಾಯಿ!
ಪುಣ್ಯೋದರ ಮಹಿಮೆಯ ಸ್ತುತಿಸಿತ್ತು ಕವಿಯ ಬಾಯಿ!

ರಚನೆ : ೨೪-೭-೧೯೭೮

ಭಾವ : ಬೇಂದ್ರೆಯವರಿಗೆ ಪ್ರತಿ ಕವನ ಸೃಷ್ಟಿಯ ಕಾಲಕ್ಕೂ ತಾಯಿ-ಅಂಬಿಕೆಯ ಸ್ಮರಣೆ. ಕೃತಜ್ಞತೆಯ ಸಮರ್ಪಣೆಯ ಕವನ.

೯೬ ಶ್ರೀ ಗುರು ಪ್ರಸಾದ

೧
ಇದು ಸೌಜನ್ಯದ ಸಮರ್ಥ ಮೂರ್ತಿ
ಕೌಟುಂಬಿಕ ಜೀವನದ ಶ್ರದ್ಧೆ, ಸ್ಫೂರ್ತಿ
ಶ್ರೀ ಗುರು ಸೇವಾ ನಿಷ್ಠೆಯೇ ಕೀರ್ತಿ
ವಾಮನ ರೂಪ !

೨
ಇದು ಸಾಕ್ಷಿಪ್ರಜ್ಞೆಯ ಸದಾಚಾರ
ಸೂತ್ರಬದ್ಧ ಮುಕ್ತ ವಿಚಾರ
ಸ್ಥಾಯಿಯಾಗಿದ್ದೂ ಸಂಚಾರ
ಸಂಘ ಶಕ್ತಿ!

೩
ಸಂಚಿತದ ಪ್ರಳಯ ಮುಗಿಯಿತು
ಭೂಮಿಯ ಧಾರಣಾಶಕ್ತಿ ನಡುಗಿತು
ಆತ್ಮಸ್ವರೂಪದ ದಾಂಪತ್ಯ ಕೂಡಿತು
ಅಚಲ ಸ್ವರೂಪ.

೪
ಪತನ ಇಲ್ಲಾ; ಎಲ್ಲಾ ಅವತರಣ
ಸಂಶಯ ನಡುಕದ ನಿವಾರಣ
ದತ್ತನಿಗೆ ಸಾಷ್ಟಾಂಗ ಸಮರ್ಪಣ
ನಾಮ ಸ್ವರೂಪ

೫
ವಾಸುದೇವನ ಸದಾನಂದ
ಪ್ರಸಾದ ಪ್ರಾಪ್ತಿ ಸಂಬಂಧ
ನಿರ್ಮಳ ಸ್ನೇಹ ಸ್ವಛಂದ
ಸ್ವ-ಸ್ವರೂಪ !

ರಚನೆ : ೧೯೭೯

ಭಾವ : ಒಂದು ಅನುಭಾವ ಗೀತ.

೯೭ 'ಓಂ ಭವತಿ ಭಿಕ್ಷಾಂದೇಹಿ'

ಈ ಸ್ವಪ್ನೋಪದೇಶ ಬಹಳ ಪೂರ್ವದಲ್ಲಾಗಿತ್ತು
ಇತ್ತೀಚೆ - 'ದ. ರಾ. ಬೇಂ' ಎಂದರೆ ೮೨೩
ಹಾಗಂದರೆ 'ಔದುಂಬರ'
ಇದು ವಿಷ್ಣು ಸಹಸ್ರದಲ್ಲಿದೆ.
ನನ್ನ ಜಾತಕದಲ್ಲಿ-
೨ನೇ ಶನಿ ; ೪ನೇ ಗುರು ; ೧೦ನೇ ರವಿ ಇರುವುದರಿಂದ
'೭೪೧೦' ಇದೊಂದು ಉಪದೇಶದ್ವಾರವಾಯಿತು.
೨
ನಾನು ೩೧-೧-೧೮೯೬ ರಂದು ಜನ್ಮ ತಾಳಿದೆ
ಆದುದರಿಂದ - ೨೯, ೧೧, ೨ ಎಂಬ ಸಂಖ್ಯೆಗಳು
ನನ್ನ ಜೀವನದಲ್ಲಿ ಮಾರ್ಗ ಸಂಕೇತಗಳಾದವು !
ಕುಂಭರಾಶಿ (ರವಿ ಸಾಯನ) ಯವರಿಗೆ
೪ - ಸಂಕೇತಾಂಕ.
೩
ನನ್ನ 'ನಾಕುತಂತಿ' ಅದೇ ತಾನದಲ್ಲಿದೆ
ಫೆಬ್ರುವರಿ-೨-೨-೧೯೭೯
ನನ್ನ ಮೊಮ್ಮಗಳು ವೈಖರಿ ಹುಟ್ಟಿದ ದಿನ.
ಅಂದೇ ಗುರು ಪ್ರತಿಪದೆ ಇತ್ತು
ಶ್ರೀ ನರಸಿಂಹ ಸರಸ್ವತಿಗಳ-ಶ್ರೀಶೈಲಗಮನ,
ಮೂಲದಲ್ಲಿ ಶ್ರೀ ನಿವೃತ್ತಿನಾಥ ಜನ್ಮ ದಿನ-
ಗುರು ಪ್ರತಿಪದೆಯೇ ಆಗಿತ್ತು.

೪

ಈ 'ಸಂಖ್ಯಾಯೋಗ' ಸಂಕೇತಗಳಿಂದ ನನಗೆ
'ಹೃದಯಸ್ಥ' ಶ್ರೀ ಗುರುದೇವಮಾರ್ಗ ಕಂಡಿದೆ.
ಅಂಥ 'ಹದ' ಬಂದವರಿಗೆ
ಕಾಣಬಹುದು ಈ ಮಾರ್ಗ,
ಈ 'ಸ್ವಗತ ಸಂವಾದ'.

ವಾಕ್ಯಾವಳಿಯನ್ನೋದಿ, ಹಾಗೇ
ಸ್ವ-ಸಹಜ ಮಾರ್ಗ ತೆರೆಯ ಬಹುದು
ಎಂಬ ಶ್ರದ್ಧೆಯಿಂದ
ಇದನ್ನು ಬರವಣಿಗೆಗೆ ಇಳಿಸಿರುವೆ.

ರಚನೆ : ೧೯೮೦

ಭಾವ : ಬೇಂದ್ರೆಯವರ ಜೀವನಕ್ಕೂ ಸಂಖ್ಯೆಗಳಿಗೂ ಇರುವ ಸಂಬಂಧಸೂತ್ರದ ಮುಕ್ತ ವಿವರಣೆ ಇಲ್ಲಿದೆ.

೯೮ ಅಥಾ ತೋ ಆತ್ಮಜಿಜ್ಞಾಸಾ

೧

ಅಥಾ ತೋ ಆತ್ಮಜಿಜ್ಞಾಸಾ
ಸತ್ತಾ ಭಾವಾತ್
ಆತ್ಮೇತಿ, ಸತ್ತೇತಿ, ಭಾವೇತಿ
ತ್ರಿಧಾ ಐಕ್ಯಮೇವ

೨

ಕಾಲ ಚಕ್ರಂ ಏಕಂ, ಅಪಿ ತ್ರಿಧಾ
ಬೀಜಂ ಫಲರೂಪೇಣ ಗರ್ಭೀಕೃತಂ
ವೃಕ್ಷ ವಿಸ್ತಾರೇಣ.
ಸಾಕ್ಷಿ ತ್ರಯಂ ಚಕ್ರಾಕಾರೇಣ ಏಕಮೇವ
ದರ್ಶನಕ್ಷೇತ್ರ
ದೃಷ್ಟಾ, ದೃಷ್ಟಿಕ್ಷೇತ್ರ , ದೃಶ್ಯರೂಪಾತ್
ಪರೋಕ್ಷಂ ತ್ರಿಧಾ-ಪಿತಾ, ಮಾತಾ, ಆಪತ್ಯಂ ಇತಿ.

೩

ಪ್ರತ್ಯಕ್ಷಂ ಪ್ರತಿಬಿಂಬಂ-೫, ೫, ಇದು
೫೫=೨೭+೨೮ ; ೫೫=೧ ರಿಂದ ೧೦ ಕೂಡಿಸಿದ ಮೊತ್ತ.
೨+೩+೪+೫+೬+೭=೨೭ ; ೮+೯+೧೦=೨೮.
ಒಂಭತ್ತು ಸಂಖ್ಯೆಗಳಿಗೆ ಮೂಲ ಸಂಖ್ಯೆ-೧. ಇದು
ಅಪರೋಕ್ಷಂ ಸತ್ತಾಸ್ವರೂಪಂ - ಸಾಕ್ಷಿ.
ಲವಣ NA=೧೧ Cl=೧೭.೧೧+೧೭=೨೮.
೨೭ ಇದು ಏಕಂ ಘನಂ ಧ್ರುವಂ
ಲವಣಕಣ ಘನ ಭಾವಂ ಚಿಂತ್ಯಂ.
ಅಭಿಜಿತ್ ಸೂರ್ಯ - ಇತಿ.

ರಚನೆ : ೧೯೮೦

ಭಾವ : ಅಭಿಜಿತ್ ೨೮ನೆಯ ನಕ್ಷತ್ರ. ಕವಿ ಡಬ್ಲ್ಯೂ ಬಿ. ಏಟ್ಸ್ ಚಂದ್ರನ ೨೮ ಕಲೆಗಳನ್ನು ಕುರಿತು ಗ್ರಂಥ ರಚಿಸಿರುವನು. ೨೮ನ್ನು ೧೭+೧೧ ಎಂದು ಒಡೆಯಬಹುದು. ೧೭ ಚಂದ್ರನ ಜೀವನ ಕಲೆ. ಚಂದ್ರನ ಹಿಂದೆ ಅಡಗಿರುವ ಸೂರ್ಯ=ಅಮೃತಕಲೆ. ೧೭ ಹಾಗೂ ೧೧ ಲವಣ=ಉಪ್ಪಿನ ಘನ ಸಂಕೇತ. ಮನುಷ್ಯ ಜೀವನಕ್ಕೆ ಅಮರತ್ವದ ಚಿಂತನ ಅವಶ್ಯ ಎಂಬ ವೈಚಾರಿಕ ಹಿನ್ನೆಲೆ ಈ ಕವನದ ಪ್ರೇರಣೆ.

೯೯ 'ಸಂಖ್ಯಾಯೋಗ'ನಿಷ್ಠೆ

೧
ನೀರಡಿಸಿ ಬಂದವರಿಗೆ 'ನೀರು' ನೀಡಿ, ಮೇಲೆ
ಬೆಲ್ಲ ಕೊಟ್ಟರೆ - ಅವರು ಸಮಾಧಾನಪಡುತ್ತಾರೆ.
೨
ಇಲ್ಲಿಯ ತಿಳುವಳಿಕೆ ಭಾಷಾನಿಷ್ಠವಲ್ಲ
'ಸಂಖ್ಯಾಯೋಗ'ನಿಷ್ಠ. ಯಾರಿಗೂ ತಿಳಿಯಬಹುದು :
ಕೈಗೆ ೧೦, ಕಾಲಿಗೆ ೧೦ ಬೆರಳುಗಳಿವೆ ತಾನೆ.
೩
ನಮ್ಮ 'ಕೃತಿ-ಗತಿ'ಗೆ ಹೃದಯ ವಿವೇಕ
ನೀಡುವ 'Vegus'-ಅಭಿಜಿತ್, ಬ್ರಹ್ಮ,
ಸೋಮನಾಡಿ - ರಾಜನಾಡಿ - ೨೮=೧೦ ಹೌದು.
೪
೧೦x೧೦x೧೦=೧೦೦೦+ನಕ್ಷತ್ರ-೨೮=
೧೦೨೮ ಋಗ್ವೇದದ ಹತ್ತು ಮಂಡಲಗಳಲ್ಲಿರುವ
ಒಟ್ಟು ಸೂಕ್ತಗಳು ಇಷ್ಟು.
ಇದು ಒಂದು ಧ್ರುವ ಸಂಖ್ಯೆ.

೫

Polemyಗೆ-ಜ್ಯೋತಿರ್ವಿದನಿಗೆ ಗೊತ್ತು ಇತ್ತು-

೪೬೦+೫೫೮+೧೦=೧೦೨೮

೫೫೮+೧೦=೫೯+೫೦೯

'ಮೇಧಾ' ಶಬ್ದದ ಸಂಖ್ಯಾಸಂಕೇತ-೫೯.

೬

೧೩೮+೫೯=೧೯೭ ; ೧೩೮-೫೯=೭೯.

ಇವು ಜೀವಾಣು ಸಂಖ್ಯೆ !

೪, ೨೫, ೩೭, ೬೬

ಇವು ಶ್ರೀ 'ಜ್ಞಾನೇಶ್ವರ' ಕೊಟ್ಟ ಸಂಖ್ಯೆಗಳು.

ಇದರ ಅರ್ಥ ತೇಜೋಗತಿ !

ಅಂದರೆ ಜೀವಸಂಖ್ಯೆ !

ತೇಜೋಗತಿ - ಜ್ಞಾನದ ಸ್ವಧರ್ಮ ಮಾರ್ಗ

ಇದರ ಹೊಂದಿಕೆಯಾಗಬೇಕು. ಇತಿ.

ರಚನೆ : ೧೯೮೦

ಭಾವ : ಜ್ಞಾನೇಶ್ವರರು ತಮ್ಮ ಕಾವ್ಯದರ್ಶನದಿಂದ ಕಂಡ ಜ್ಞಾನದ ಸಂಕೇತ : ೩ನ್ನು ಬಿಟ್ಟು ೪ನೆಯದು, ೨೪ ಬಿಟ್ಟು ೨೫ನೆಯದು; ೩೬ ಬಿಟ್ಟು ೩೭ನೆಯದು; ೬೫ ಬಿಟ್ಟು ೬೬ನೆಯದು. ಇದು ಈ ಕವನದ ಹಿನ್ನೆಲೆ.

೧೦೦ ನಾವು ಅಲ್ಲಾ ಪಶು

೧

ನಾವು ಅಲ್ಲಾ ಪಶು
ದೇವರ ಶಿಶು ನಾವು !
ನಕ್ಷತ್ರಗಳ ನೀರು
ನರನರಗಳಲ್ಲಿ ತುಂಬಿದೆ
ಅದು ಎಂದೂ ತೀರದು
ರಸಹೀನವಲ್ಲಾ; ರಸಪೂರ್ಣ !
ಕಣಕಣದಲ್ಲೂ ರಸ ಪ್ರವಾಹ !

೨

ಇದೆಲ್ಲಾ ದೇವರ ಕೊಡುಗೆ, ತೊಡುಗೆ
ಹತ್ತನೆಯ ರಸದ ಗುಪ್ತನಿಧಿ !
ಔದುಂಬರ ದತ್ತನ ಹಾಡು
ಚೈತನ್ಯಪೂರ್ಣ ಅಂತರ್ವಾಣಿ !

೩

ದೇವರ ಹಾಸ್ಯ-ಸ್ಮಿತಾ
ಮಿಲಿಂದ ಅವನ-ಅಸ್ಮಿತಾ
ಮಕರಂದ-ರಸಪಿತಾ
ಪುನರ್ವಸು ಅರ್ಪಿತಾ

೪

ದೇವರ ದೇವ ತುಂಬಿದ ಈ ಪಿಂಡಾ
'ಪವಮಾನ' ಸೋಮರಸದ ಪಾತ್ರೆ .
ಸ್ವ-ರಸದ ಪಾತ್ರೆ - ವಿಶ್ವ ಎಂಬುದು.

ರಚನೆ : ೨೮-೫-೧೯೮೧

ಭಾವ : ಮಾನವನಲ್ಲಿ ಪಶುತ್ವ ಹೋಗಿ ಅವನು ಸೋಮರಸದ ಪಾತ್ರೆಯಾಗಬೇಕು. ಪವಮಾನ=ವಾಯು, ಗಾರ್ಹ್ಯಪತ್ಯಾಗ್ನಿ ಸೋಮಯಜ್ಞದಲ್ಲಿಯ ಒಂದು ಸ್ತೋತ್ರ, ಪುಂಸವನ ಸಂಸ್ಕಾರದಲ್ಲಿ ಅಗ್ನಿ.

'ನವನವೋನ್ಮೇಶಶಾಲಿನೀ ಪ್ರಜ್ಞಾ ಪ್ರತಿಭಾಮತಾ' ಎಂಬ ಕಾವ್ಯ ಸೂತ್ರದಲ್ಲಿ ನವ=೯, ಪ್ರಜ್ಞೆಯ ಹೊಸತನ ಸೂಚಿಸಲಾಗಿದೆ. ಇದರಿಂದ ನವರಸಭರಿತ ಕಾವ್ಯ ರಚನೆ ಮಾಡುವ ಪರಂಪರೆ ಪ್ರಾಚೀನ. ಬೇಂದ್ರೆಯವರ ಕಾವ್ಯದಲ್ಲಿ ಸಂಖ್ಯಾರಸ=ಹತ್ತನೆಯ ರಸವಾಗಿ ಹೊರಹೊಮ್ಮಿದ್ದು ಕಾವ್ಯದ ಇತಿಹಾಸದಲ್ಲಿ ಹೊಸ ಹೆಜ್ಜೆ. ಇದು 'ಪ್ರಜ್ಞಾ-ಪ್ರಕಾಶ-ಕಾವ್ಯ ಮಾರ್ಗ'-ಬೇಂದ್ರೆ ಕಾವ್ಯ+ಉತ್ ಯೋಗದ=ಕಾವ್ಯೋದ್ಯೋಗದ ಕೊಡುಗೆ.

ಸ್ಮಿತಾ, ಮಿಲಿಂದ, ಮಕರಂದ-ಬೇಂದ್ರೆಯವರ ಮೊಮ್ಮಕ್ಕಳು. ಪುನರ್ವಸು-ಪಾಂಡುರಂಗನ ಮಗಳು ಬೇಂದ್ರೆಯವರ ಮೊಮ್ಮಗಳು.



ಡಾ|| ದ. ರಾ. ಬೇಂದ್ರೆಯವರ ಜೀವನ ಕಥೆಯ ಹಂದರ

ಜನನ-ವಿವಾಹ

೩೧-೧-೧೮೯೬ : ಮಾಘವದ್ಯ ಪ್ರತಿಪದಾ-ಗುರುಪ್ರತಿಪದಾ, ಮನ್ಮಥನಾಮ ಸಂವತ್ಸರ-ಧಾರವಾಡ, ಪೋತನೀಸ ಓಣಿಯಲ್ಲಿ ಜನನ.

೧೮೯೯ : ನೀರಕುತ್ತು ದಾಟಿತು. ಜೇಷ್ಠವೋ ಶ್ರಾವಣವೊ ಇರಬೇಕು. ಹಾಲಗೇರಿ ಕೆರೆಯಲ್ಲಿ ಬಿದ್ದು ಜೀವಂತ ಪಾರಾದದ್ದು.

೧೯೦೭ : ತಂದೆ-ರಾಮಚಂದ್ರ ತೀರಿಕೊಂಡರು.

೧೯೦೨-೧೯೧೩ : ಧಾರವಾಡದಲ್ಲಿ ಪ್ರಾಥಮಿಕ ಶಿಕ್ಷಣದಿಂದ ಮ್ಯಾಟ್ರಿಕ್ ಪಾಸಾಗುವವರೆಗೆ.

೧೯೧೩ : ಅಜ್ಜಿ-ತಾಯಿಯ ತಾಯಿ. ಗೋದುಬಾಯಿ ತೀರಿಕೊಂಡರು,

೧೯೧೪ : ಪುಣೆಯ ಫರ್ಗ್ಯುಸನ್ ಕಾಲೇಜು ಸೇರಿದ್ದು.

೧೯೧೬-೧೭ : ವಿವಿಧ ಛಂದಸ್ಸುಗಳಲ್ಲಿ, ಕನ್ನಡ, ಮರಾಠಿ, ಇಂಗ್ಲೀಷ್ ಹಾಗೂ ಸಂಸ್ಕೃತದಲ್ಲಿ ಕವಿತಾ ರಚನೆ ಹಾಗೂ ಶ್ರೇಷ್ಠ ಕವಿಗಳ ಕವನಗಳ ಅನುವಾದ.

೧೯೧೮ : ಬಿ. ಎ. ಪದವಿ. ಜೂನ್ ೪ರಂದು. ಧಾರವಾಡದ ವಿಕ್ಟೋರಿಯಾ ಹೈಸ್ಕೂಲಿನಲ್ಲಿ ಶಿಕ್ಷಕ. (ಈಗಿನ ವಿದ್ಯಾರಣ್ಯ ಹೈಸ್ಕೂಲು)

೧೯೧೯ : ಲಕ್ಷ್ಮೀಬಾಯಿ ಅವರೊಂದಿಗೆ ಹುಬ್ಬಳ್ಳಿಯಲ್ಲಿ ವಿವಾಹ. 'ವಾಗ್ಭೂಷಣ' ಸಂಪಾದಕ ವರ್ಗದಲ್ಲಿ ಸೇರ್ಪಡೆ.

ಸಂತತಿ

೧. : ಕ್ಷೇಮೇಂದ್ರ (ಜನನ : ೧೯೨೨ ಧಾರವಾಡ; ಮರಣ ; ೧೯೨೩)
'ಮೊದಲಿನ ಫಲವೊಂದು ಮೀಸಲು ಮಣ್ಣಿಗೆ.'

೨. : ರಾಮು (ಜನನ ೧೯೨೪ ಹಾನಗಲ್ಲ : ಮರಣ ೧೯೪೪)
'ಹುಸಿನಗುವ ಕೂಸಿನ ಹೊಸ ಹೊಸ ಆಟಿಕೆ.'

೩. : ಭಾಸ್ಕರ (ಜನನ ೧೯೨೭ ಧಾರವಾಡ ; ಮರಣ ೧೯೨೭)
'ಭೆಟ್ಟಿಗೆ ಬಂದನು ಹೊಸದೊಬ್ಬ ಕಂದನು ಅಥಿತಿಯೋ ಎಂಬಂತೆ.'

೪. : ಪಾಂಡುರಂಗ (ಜನನ:೧೯೨೮, ಧಾರವಾಡ ಮರಣ : ೧೮-೧೧-೨೦೦೩)
'ಹುಡುಗನ ಒಡನಾಟವು ಹುಡುಗಾಟ ಮಾಡಿದವು.'

೫. : ಲಲಿತಾ (೧೯೩೪, ಧಾರವಾಡ; ಮರಣ ೧೯೩೪)
'ಆ ಕೂಸ ಕಳಕೊಂಡು ನೀನೆಂತೊ ಉಳಕೊಂಡು
ಲಾಲಿತ್ಯವಿಲ್ಲದ ಶೈಲಿಯೊಲು.'
('ನೀ ಹಿಂಗ ನೋಡಬ್ಯಾಡ ನನ್ನ' ಕವನದ ವಸ್ತು)

೬. : ವಾಮನ (ಜನನ : ೧೯೩೫, ರಾಣೆಬೆನ್ನೂರು)

೭. : ಪ್ರೇಮಾ (ಜನನ : ೧೯೩೭, ಧಾರವಾಡ; ಮರಣ : ೧೯೩೭)

೮. : ಮಂಗಲಾ (ಜನನ : ೧೯೩೯, ಧಾರವಾಡ)

೯. : ಆನಂದ (ಜನನ : ೧೯೪೩, ಧಾರವಾಡ; ಮರಣ : ೧೯೪೪)

ಇತರ

೧೯೨೨ : ದಾವಣಗೇರಿಗೆ ಸಾಹಿತ್ಯ ಸಮ್ಮೇಲನಕ್ಕೆ ಹೋದದ್ದು.

೧೯೨೨ : ''ಕೃಷ್ಣಾಕುಮಾರಿ'' ಮೊದಲನೆಯ ಆವೃತ್ತಿ ಪ್ರಕಟವಾದದ್ದು.

೧೯೨೩ : ವಿಜಾಪೂರದ ಸಾಹಿತ್ಯ ಸಮ್ಮೇಲನಕ್ಕೆ ಹೋದದ್ದು.
'ಜಯ ಕರ್ನಾಟಕ' ಪತ್ರಿಕೆಯೊಂದಿಗೆ ಸಂಬಂಧ, ಮಧುರಚೆನ್ನರ ಭೆಟ್ಟಿ.

೧೯೨೪ : ತಾಯಿ-ಪಾರ್ವತಿ-ಅಂಬಿಕೆ ತೀರಿಕೊಂಡದ್ದು
'ತಾಯಿ ಗಿಡವು ಮಾಯವಾಯಿತಲೇ!'
– 'ಜೇನುಹುಟ್ಟು' ಕೈ ಬರಹ ಪತ್ರಿಕೆ ಎಳೆಗೆಳೆಯರಾದ ವಿದ್ಯಾರ್ಥಿಗಳ ಮೂಲಕ ಹೊರಡಿಸಿದ್ದು.

೧೯೨೬ : 'ಸ್ವಧರ್ಮ' ಪತ್ರಿಕೆಯ ಸಂಪಾದಕರು.
– ಗೆಳೆಯರ ಗುಂಪಿನಿಂದ ನಾಡ ಹಬ್ಬ ಪ್ರಾರಂಭ.

೧೯೨೮ : 'ನನ್ನದು ಈ ಕನ್ನಡ ನಾಡು' ಕವನ ಸಂಗ್ರಹದ ಸಂಪಾದಕರು.

೧೯೨೯ : I) ಕಕ್ಕ ಬಂಡೋಪಂತ ಬೇಂದ್ರೆಯವರು ದ. ರಾ. ಬೇಂದ್ರೆಯವರಿಗೆ ೫-೧೧-೧೯೨೯ ರಂದು ವಾಸಕ್ಕಾಗಿ ಸಾಧನಕೇರಿಯಲ್ಲಿ ಒಂದು ಮನೆಯನ್ನು ಕಾಣಿಕೆಯಾಗಿ ಕೊಡಿಸಿದ್ದು.
೧೩, ಶ್ರೀಮಾತಾ, ಸಾಧನಕೇರಿ, ಧಾರವಾಡ - ನಿವಾಸ.
'ಮಲೆನಾಡ ಸೆರಗಿನ ನೆರೆಗ।ದ್ದ ಮನೆಯೊಂದು ಮಮತೆಯ
ಕುರುಹಾಗಿ ತಾ ದೊರಕಿತು.'

II) ಬೆಳಗಾವಿಯ ಸಮ್ಮೇಳನದಲ್ಲಿ -
'ಹಕ್ಕಿ ಹಾರುತಿದೆ ನೋಡಿದಿರಾ' ಕವನ ವಾಚನ.

III) ೧೧-೧೧-೧೯೨೯ ರಂದು ಶ್ರೀ ಆಲೂರ್ ವೆಂಕಟರಾವ್ ಇವರಿಂದ 'ಜಯ ಕರ್ನಾಟಕ' ಕೊಂಡದ್ದು.
ಸಂಪಾದಕರಾಗಿ ಕಾರ್ಯ ನಿರ್ವಹಣೆ.
''ಜಯ ಕರ್ನಾಟಕವೆನ್ನುತ ಗೆಳೆಯರ ಕನ್ನಡದಾಸೆಯು ಗುಡಿಕಟ್ಟಿತು.''
'ನರಬಲಿ' - ಕವನವು ಬಲಿಮಾಡಿತೆನ್ನನು,
ಹೆಳವನಿದ್ದಲ್ಲಿಗೆ ಹೊಳೆ ಬಂದಿತು.''

೧೯೩೦ : 'ಹಕ್ಕಿ ಹಾರುತಿದೆ' ಕವನ ಸಂಗ್ರಹದ ಸಂಪಾದಕರು.

೧೯೩೨ : ಹಿಂಡಲಗಿ ಜೇಲುವಾಸ. ಮುಗದ ಎಂಬ ಹಳ್ಳಿಯಲ್ಲಿ ದಿಗ್‌ಬಂಧನವಾಸ.
''ಪ್ರಾಣದ ಒಗರಷ್ಟು ಹಿಂಡಿತು ಹಿಂಡಲಗಿ,
ಮುಗದದ ಮಳೆಗಾಗಿ ಮುಂದೆಳೆದಿತು.''

೧೯೩೨ : ''ಗರಿ'' ಮೊದಲನೆಯ ಆವೃತ್ತಿಯು ಹೊರ ಬಂದದ್ದು.

೧೫-೮-೧೯೩೩ : 'ಜಯ ಕರ್ನಾಟಕ' ಸಂಬಂಧ ಮುಕ್ತಾಯ.
ಗೆಳೆಯರ ಗುಂಪಿನ ಸ್ಫೋಟ, ವಿಘಟನೆ.

೧೯೩೩ : ಎಂ. ಎ. ಅಭ್ಯಾಸಕ್ಕಾಗಿ ಪುಣೆಗೆ ಪ್ರಯಾಣ.
'ಪುಣೆಯಲ್ಲಿ ಕಳೆದಂಥ ಅಜ್ಞಾತವಾಸವ ನೆನೆದರೆ ಮೈಯೆಲ್ಲ ಜುಮ್ಮೆನ್ನುತ್ತ'

೧೯೩೪ : "ಮೂರ್ತಿ" ಮೊದಲನೆಯ ಆವೃತ್ತಿ ಪ್ರಕಟವಾದದ್ದು.

೧೯೩೪ : "ಕಾಮಕಸ್ತೂರಿ" ಮೊದಲನೆಯ ಆವೃತ್ತಿ ಪ್ರಕಟವಾದದ್ದು.

೧೯೩೫ : ಎಂ. ಎ. ಪದವಿ ಪಡೆದದ್ದು.
ಮುಂಬೈಯಲ್ಲಿ ಸಾಹಿತ್ಯ ಸಮ್ಮೇಳನದ ಕವಿ ಸಮ್ಮೇಳನಕ್ಕೆ ಅಧ್ಯಕ್ಷ.

೧೯೩೫-೪೦ : ಡಾ|| ಮಾಸ್ತಿಯವರ ಸಹಾಯ ಹಸ್ತ ಲಭಿಸಿದ್ದು.
"ದೈವದ ಕೃಪೆಯೆಂದು ಅದ ತಿಳಿದೆನು."

೧೯೩೬ : ವಿಜಯನಗರ ಷಟ್ ಶತಸಾಂವತ್ಸರಿಕ ಉತ್ಸವದ ಕೆಲಸಕ್ಕಾಗಿ
ಹೈದರಾಬಾದ ಪ್ರವಾಸ.

೧೯೩೭ : 'ಸಖೀಗೀತ'ದ ಮೊದಲನೆಯ ಆವೃತಿ ಪ್ರಕಟಗೊಂಡದ್ದು.

೧೯೩೮ : ನಾದಲೀಲೆ, ಉಯ್ಯಾಲೆ, ಪ್ರಕಟಗೊಂಡದ್ದು,
"ಜೀವನ" ಪತ್ರಿಕೆಯ ಸಂಪಾದಕ ಆದದ್ದು.

೧೯೩೯ : "ನಿರಾಭರಣ ಸುಂದರಿ," ಹಾಗೂ "ಸಾಹಿತ್ಯ ಮತ್ತು ಸಂಶೋಧನೆ,"
ಕೃತಿಗಳು ಪ್ರಕಟಗೊಂಡದ್ದು.

೧೯೪೦ : ಧಾರವಾಡದಲ್ಲಿ ಸಾಹಿತ್ಯ ಸಮ್ಮೇಳನ.

೧೯೪೧ : ಗದಗ-ವಿದ್ಯಾದಾನ ಸಮಿತಿ ಹೈಸ್ಕೂಲಿಗೆ-ಹೆಡ್ ಮಾಸ್ತರ ಆಗಿ ಹೋದದ್ದು.

೧೯೪೨ : ಹುಬ್ಬಳ್ಳಿಯ ನ್ಯೂ ಇಂಗ್ಲೀಷ್ ಸ್ಕೂಲಿಗೆ ಶಿಕ್ಷಕ.

೧೯೪೩ : ಫೆಬ್ರುವರಿಯಲ್ಲಿ ಪಾಂಡಿಚೇರಿ-ಶ್ರೀಮಾತಾರವಿಂದರ ದರ್ಶನ.
- ಪೂನಾ ಬಿ. ಎಂ. ಸಿ. ಸಿ. ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕ,
"ಮೇಘದೂತ" ಪ್ರಕಟಗೊಂಡದ್ದು.

೧೯೪೪ : ಸೊಲ್ಲಾಪುರದ ಡಿ. ಎ. ವ್ಹಿ. ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕ ಆದದ್ದು.

೧೯೪೪ : ರಾಮ ಹಾಗೂ ಆನಂದ ತೀರಿಕೊಂಡದ್ದು ಸೊಲ್ಲಾಪುರದಲ್ಲಿ.

೧೯೪೫ : ಸೊಲ್ಲಾಪುರ ನೀಲಾನಗರದಲ್ಲಿ ವಾಸ ಪ್ರಾರಂಭ.

೧೯೪೬ : ಗೆಳೆಯರಿಂದ ಸನ್ಮಾನ. ೫೦ನೆಯ ಹುಟ್ಟುಹಬ್ಬ
"ಹಾಡು-ಪಾಡು" ಪ್ರಕಟಗೊಂಡದ್ದು.

೧೯೪೭ : ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ್ದು.

೧೯೪೮ : ಗಾಂಧೀ ಮರಣ, ಜೆ.ಕೃಷ್ಣಮೂರ್ತಿ ಮತ್ತು
ಶ್ರೀ ಗುಳವಣಿ ಮಹಾರಾಜರ ದರ್ಶನ.

೧೯೫೦ : ಶ್ರೀಅರವಿಂದರ ನಿರ್ವಾಣ ; ಡಿಶೆಂಬರ-೫. ಹೆಂಡತಿಗೆ ವಿಷಮ ಜ್ವರ.

೧೯೫೧ : "ಗಂಗಾವತರಣ" ಪ್ರಕಟಗೊಂಡದ್ದು. ಸಂಖ್ಯಾಯೋಗ ವಿಚಾರ,
ಮರಾಠಿಯಲ್ಲಿ ವಿಪುಲವಾಗಿ ಬರವಣಿಗೆ.

೧೯೫೨ : ಪ್ರಭಾಕರ ಮಹಾರಾಜರ ದರ್ಶನ.

೧೯೫೩ : ಗೆಳೆಯ ಚೆನ್ನಮಲ್ಲಪ್ಪ-ಮಧುರಚೆನ್ನ-೧೫ ಅಗಸ್ಟರಂದು ಮರಣ.

೧೯೫೪ : ಶ್ರೀರಾಮದಾಸರ ದರ್ಶನ.

೧೯೫೫ : ದಿಲ್ಲಿಗೆ ಕವಿ ಸಮ್ಮೇಳನಕ್ಕಾಗಿ ಹೋದದ್ದು.

೧೯೫೬ : ೬೦ನೇ ಹುಟ್ಟುಹಬ್ಬ. ಧಾರವಾಡ ಆಕಾಶವಾಣಿ ಸಾಹಿತ್ಯ ಸಲಹಾಕಾರ,
ಮಗ-ಪಾಂಡುರಂಗನ ವಿವಾಹ,
ಡಾ|| ಕುವೆಂಪು ಅವರಿಗೆ ಸಾಹಿತ್ಯ ಅಕಾಡೆಮಿ ಬಹುಮಾನ.

೧೯೫೭ : ''ಅರಳು-ಮರಳು'' ಪ್ರಕಟಗೊಂಡದ್ದು,
ಡಾ|| ರಂ. ಶ್ರೀಮುಗಳಿ ಯವರಿಗೆ ಸಾಹಿತ್ಯ ಅಕಾಡೆಮಿ ಬಹುಮಾನ.

೧೯೫೮ : ಸಾಹಿತ್ಯ ಅಕಾಡೆಮಿ ಬಹುಮಾನ ಯಾರಿಗೂ ಸಿಗಲಿಲ್ಲ.

೧೯೫೮-೫೯ : ''ಅರಳು-ಮರಳು'' ಸಂಗ್ರಹಕ್ಕೆ ಸಾಹಿತ್ಯ ಅಕಾಡೆಮಿ ಬಹುಮಾನ,
ಧರ್ಮಸ್ಥಳಕ್ಕೆ ಹೋದದ್ದು. 'ನಮನ', 'ಸಂಚಯ' ಪ್ರಕಟಗೊಂಡದ್ದು.

೧೯೬೦ : ಡಾ|| ಕಾರಂತರಿಗೆ ಬಹುಮಾನ.

೧೯೬೧ : ಡಾ|| ಗೋಕಾಕರಿಗೆ ಬಹುಮಾನ.

(ಇಲ್ಲಿಯವರೆಗಿನ ಜೀವನ ಘಟನಾವಳಿಗಳನ್ನು ದ.ರಾ.ಬೇಂದ್ರೆಯವರು ತಮ್ಮ ಆತ್ಮಚರಿತ್ರೆಗೆ ಅನುಬಂಧವಾಗಿ ಪ್ರಕಟಿಸಿದ್ದು ''ನಡೆದು ಬಂದ ದಾರಿ'' ಸಂ.೩ರಲ್ಲಿ. ಇದಕ್ಕೆ ಐತಿಹಾಸಿಕ ಮಹತ್ವವಿದೆ. ತಮ್ಮ ಸ್ನೇಹಿತರಿಗೆ ಸಿಕ್ಕ ಬಹುಮಾನ ಅಥವಾ ಅವರ ಜೀವನ ಘಟನೆಗಳು ತಮ್ಮ ಜೀವನದ ಪ್ರಮುಖ ಘಟನೆ ಎಂಬುದಾಗಿ ಬೇಂದ್ರೆ ಭಾವಿಸಿದ್ದು ಅನುಕರಣೀಯ. ಸಾಹಿತಿ-ಸಾಹಿತಿ-ಸ್ನೇಹ ಸಂಬಂಧವೇ ಸಂಸ್ಕೃತಿ.)

೧೯೬೨ : ತುಮಕೂರಿನ ಪೌರಸಭೆಯ ಸನ್ಮಾನ.

೧೯೬೪ : ಮೈಸೂರು ದಸರಾ ಮಹೋತ್ಸವ ಸನ್ಮಾನ.

೧೯೬೫ : ಮರಾಠಿ ''ಸಂವಾದ'' ಕೃತಿಗೆ ಕೇಳಕರ ಪ್ರಶಸ್ತಿ.

೧೯೬೬ : ಮೈಸೂರು ವಿಶ್ವವಿದ್ಯಾಲಯದಿಂದ ''ಗೌರವ ಡಾಕ್ಟರೇಟ್,''
ಹೈದ್ರಾಬಾದಿನ ಹಿಂದೀ ಪ್ರಚಾರ ಸಭಾದ 'ಸಾಹಿತ್ಯ ಆಚಾರ್ಯ' ಪ್ರಶಸ್ತಿ.
ಶಿರಹಟ್ಟಿಯಲ್ಲಿ ೭೦ನೇ ಹುಟ್ಟುಹಬ್ಬ,
ಮೈಸೂರು ಸರ್ಕಾರದ (ಕರ್ನಾಟಕ) ಆಜನ್ಮ ವಿಶ್ರಾಂತಿ ವೇತನ.
ಪತ್ನಿ ಶ್ರೀಮತಿ ಲಕ್ಷ್ಮೀಬಾಯಿಯವರ ನಿಧನ: ೧೭-೮-೧೯೬೬.

೧೯೬೮ : ದಿಲ್ಲಿಯಿಂದ 'ಪದ್ಮಶ್ರೀ' ಪ್ರಶಸ್ತಿ.
ಕರ್ನಾಟಕ ವಿಶ್ವವಿದ್ಯಾಲಯದಿಂದ ''ಗೌರವ ಡಾಕ್ಟರೇಟ್.''

೧೯೬೯ : ಕೇಂದ್ರ ಸಾಹಿತ್ಯ ಅಕಾಡೆಮಿಯ 'ಫೆಲೊಶಿಪ್'ಗೌರವ-ದಿಲ್ಲಿ.

೧೯೭೨ : ಪರ್ಯಾಯದಲ್ಲಿ ಉಡುಪಿ ಮಠದ ವತಿಯಿಂದ
'ಕರ್ನಾಟಕ ಕವಿ ಕುಲ ತಿಲಕ' ಬಿರುದು. ೭೫ನೇ ಹುಟ್ಟು ಹಬ್ಬದ
ಸವಿನೆನಪಿಗಾಗಿ ವರಕವಿ ಬೇಂದ್ರೆಯವರನ್ನು ಕುರಿತು ರಾಜ್ಯ ಸರ್ಕಾರದ
ಸಾಕ್ಷಿ ಚಿತ್ರ ನಿರ್ಮಾಣ.

೧೯೭೩-೭೪ : 'ನಾಕುತಂತಿ' ಕವನ ಸಂಗ್ರಹಕ್ಕೆ ಜ್ಞಾನಪೀಠ ಪ್ರಶಸ್ತಿ ಪ್ರದಾನ.

೧೯೭೬ : ವಾರಣಾಸಿ ಕಾಶೀ ವಿದ್ಯಾಪೀಠದಿಂದ ''ಗೌರವ ಡಾಕ್ಟರೇಟ್''

೨೬-೧೦-೮೧ : ನಿರ್ವಾಣ - ಮುಂಬೈಯ ಹರಿಕಿಸನ್‌ದಾಸ ಆಸ್ಪತ್ರೆಯಲ್ಲಿ.
''ನಾವು ಬರತೇವಿನ್ನ ನೆನಪಿರಲಿ ತಾಯಿ, ನಂ ನಮಸ್ಕಾರ ನಿಮಗ''



ಡಾ.ದ.ರಾ.ಬೇಂದ್ರೆಯವರ ಸಾಹಿತ್ಯ ಕೊಡುಗೆ

ಕವನ ಸಂಗ್ರಹಗಳು-'ಅರಳು ಮರಳು' ಪೂರ್ವದಲ್ಲಿ - ೧೦

೧. ಕೃಷ್ಣಕುಮಾರಿ	೨. ಗರಿ	೩. ಸಖೀಗೀತ
೪. ಮೂರ್ತಿ	೫. ಕಾಮಕಸ್ತೂರಿ	೬. ಉಯ್ಯಾಲೆ
೭. ನಾದಲೀಲೆ	೮. ಕನ್ನಡ ಮೇಘದೂತ	೯. ಹಾಡು-ಪಾಡು
೧೦. ಗಂಗಾವತರಣ		

ಕವನ ಸಂಗ್ರಹಗಳು-'ಅರಳು ಮರಳು' ಅನಂತರದಲ್ಲಿ - ೧೭

೧೧. ಸೂರ್ಯಪಾನ	೧೨. ಹೃದಯ ಸಮುದ್ರ	೧೩. ಮುಕ್ತಕಂಠ
೧೪. ಚೈತ್ಯಾಲಯ	೧೫. ಜೀವಲಹರಿ	೧೬. ಅರಳು ಮರಳು*
೧೭. ನಮನ	೧೮. ಸಂಚಯ	೧೯. ಉತ್ತರಾಯಣ
೨೦. ಮುಗಿಲ ಮಲ್ಲಿಗೆ	೨೧. ಯಕ್ಷಯಕ್ಷಿ	೨೨. ನಾಕುತಂತಿ**
೨೩. ಮರ್ಯಾದೆ	೨೪. ಶ್ರೀಮಾತಾ	೨೫. ಇದು ನಭೋವಾಣಿ
೨೬. ಮತ್ತೆ ಶ್ರಾವಣಾ ಬಂತು	೨೭. ಚತುರೋಕ್ತಿ ಮತ್ತು ಇತರ ಕವನಗಳು.	

*ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, **ಜ್ಞಾನಪೀಠ ಪ್ರಶಸ್ತಿ

ಮರಣೋತ್ತರ ಕವನ ಸಂಕಲನಗಳು - ೬

೨೮. ಪರಾಕಿ	೨೯. ಕಾವ್ಯವೈಖರಿ	೩೦. ತಾ ಲೆಕ್ಕಣಿಕಿ ತಾ ದೌತಿ
೩೧. ಬಾಲಬೋಧೆ	೩೨. ಪ್ರತಿಬಿಂಬಗಳು	೩೩. ಶತಮಾನ

ಆಯ್ದ ಕವನ ಸಂಕಲನಗಳು - ೯

೩೪. ಬಾ ಹತ್ತರ	೩೫. ವಿನಯ	೩೬. ಒಲವೆ ನಮ್ಮ ಬದುಕು
೩೭. ಚೈತನ್ಯದ ಪೂಜೆ	೩೮. ಶ್ರಾವಣ ಪ್ರತಿಭೆ	೩೯. ಕುಣಿಯೋಣು ಬಾ
೪೦. ಸಮರಸವೇ ಜೀವನ	೪೧. ನಾಳಿನಾ ಕನಸು	೪೨. ನೂರು ಮರ ನೂರು

ಸ್ವರ ಒಂದೊಂದು ಅತಿ ಮಧುರ.

ದ. ರಾ. ಬೇಂದ್ರೆ ಜೀವನ ಮಹಾಕಾವ್ಯ : ಅಂಬಿಕಾತನಯದತ್ತರ ಸಮಗ್ರ ಕಾವ್ಯ : "ಔದುಂಬರಗಾಥೆ"

(ವರಕವಿ ಡಾ॥ದ.ರಾ.ಬೇಂದ್ರೆ ಸಂಶೋಧನ ಸಂಸ್ಥೆಯ ಪ್ರಕಟಣೆಗಳು ೮ ಸಂಪುಟಗಳು)

೪೩. ನಮನ ಸಂಪುಟ
೪೪. ದರ್ಶನ ಸಂಪುಟ
೪೫. ವಿಕಾಸ ಸಂಪುಟ
೪೬. ವಿನ್ಯಾಸ ಸಂಪುಟ
೪೭. ತತ್ತ್ವ ಸಂಪುಟ
೪೮. ಸಿದ್ಧಾಂತ ಸಂಪುಟ
೪೯. ಶ್ರೀಮಾತಾರವಿಂದ ಪ್ರಜ್ಞಾಪ್ರಕಾಶ
೫೦. ಸಮಗ್ರ ಸಖೀಗೀತ

ವರಕವಿ ದ. ರಾ. ಬೇಂದ್ರೆ ಸಂಗೀತ ಅಕಾಡಮಿ ಪ್ರಕಟಣೆಗಳು-೧೦

ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಸಂಯೋಜನೆಗಳೊಂದಿಗೆ ಬೇಂದ್ರೆ ಗೇಯ ಗೀತಗಳ ಸಂಗ್ರಹಗಳು.

೫೧. ಅಂಬಿಕಾತನಯನ ಹಾಡs ಬೆಳದಿಂಗಳ ನೋಡs
೫೨. ನೋಡ್ಯಾನs ದಶಾವತಾರ ಅಂಬಿಕಾತನಯ ಹಾಡ್ಯಾನs
೫೩. ಅಂಬಿಕಾತನಯದತ್ತ ಬೇಂದ್ರೆ ಕಂಡ ಬೆನಕ
೫೪. ಅಂಬಿಕಾತನಯದತ್ತ ಬೇಂದ್ರೆ ಕಂಡ ಶ್ರಾವಣ
೫೫. ಅಂಬಿಕಾತನಯದತ್ತ ಬೇಂದ್ರೆ ಕಂಡ ಋತು ದರ್ಶನ
೫೬. ಅಂಬಿಕಾತನಯದತ್ತ ಬೇಂದ್ರೆ ಕಂಡ ಶ್ರೀಮಾತಾರವಿಂದರು
೫೭. ಅಂಬಿಕಾತನಯದತ್ತ ಬೇಂದ್ರೆ ಕಂಡ ನಾಳಿನಾ ನಾಳಿನಾ ಕನಸು
೫೮. ಅಂಬಿಕಾತನಯದತ್ತ ಬೇಂದ್ರೆ ಕಂಡ ಭಾವ ರಾಗ ಮಂಜರಿ
೫೯. ಅಂಬಿಕಾತನಯದತ್ತ ಬೇಂದ್ರೆ ಕಂಡ ನಾದ ನವನೀತ
೬೦. ಬೇಂದ್ರೆ ಸಂಗೀತ-ಸಿದ್ಧಾಂತ ಪ್ರಯೋಗ.

ನಾಟಕಗಳು - ೧೪

೬೧. ದೆವ್ವನ ಮನೆ
೬೨. ಹಳೆಯ ಗೆಣೆಯರು
೬೩. ಸಾಯೋ ಆಟ
೬೪. ತಿರುಕರ ಪಿಡುಗು
೬೫. ಗೋಲ್
೬೬. ಉದ್ಧಾರ
೬೭. ನಗೆಯ ಹೊಗೆ
೬೮. ಮಂದೀ ಮದಿವಿ
೬೯. ಮಂದೀ ಮಕ್ಕಳು
೭೦. ಮಂದೀ ಮನಿ
೭೧. ಆ ಥರಾ ಈ ಥರಾ
೭೨. ಶೋಭನಾ
೭೩. ಜಾತ್ರೆ
೭೪. ಮಕ್ಕಳು ಅಡಗಿ ಮನೆ ಹೊಕ್ಕರೆ

ಬೇಂದ್ರೆ ಮಾನಸ ನಾಟಕಗಳು - ೨

೭೫. ಮಿಸ್ ಫಾರ್ಚ್ಯುನ್ - ಪ್ರೊ॥ ಕೆ. ಎಸ್. ಶರ್ಮಾ ವಿರಚಿತ
೭೬. ಕರೆ ಹೆಂಡತಿ ಆದರ ಖರೆ ಹೆಂಡತಿ - ಪ್ರೊ॥ ಎನ್. ಕೆ. ಕುಲಕರ್ಣಿ ವಿರಚಿತ

ಹರಟೆ, ನಗೆ, ಕಥೆ - ೨

೭೭. ನಿರಾಭರಣ ಸುಂದರಿ
೭೮. ಚೀನದ ಬಾಳು ಬದುಕು (ಅನುವಾದಿತ ಕಥಾ ಸಂಕಲನ)

ವಿಮರ್ಶೆ - ೧೧

೭೯. ಸಾಹಿತ್ಯ ಮತ್ತು ವಿಮರ್ಶೆ
೮೦. ಸಾಹಿತ್ಯ ಸಂಶೋಧನೆ
೮೧. ವಿಚಾರ ಮಂಜರಿ
೮೨. ಕವಿ ಲಕ್ಷ್ಮೀಶನ ಜೈಮಿನಿ ಭಾರತಕ್ಕೆ ಮುನ್ನುಡಿ
೮೩. ಮಹಾರಾಷ್ಟ್ರ ಸಾಹಿತ್ಯ
೮೪. ಕಾವ್ಯೋದ್ಯೋಗ
೮೫. ಕುಮಾರವ್ಯಾಸ (ಪುಸ್ತಿಕೆ)
೮೬. ಸಾಹಿತ್ಯದ ವಿರಾಟ್ ಸ್ವರೂಪ,
೮೭. ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕ ರತ್ನಗಳು
೮೮. ಸಾಹಿತ್ಯ ಯೋಗ (ಆಯ್ದ ವಿಮರ್ಶ ಲೇಖನ ಸಂಗ್ರಹ)
೮೯. ಶ್ರೀ ಅರವಿಂದ ಯೋಗ, ಆಶ್ರಮ ಮತ್ತು ತತ್ತ್ವೋಪದೇಶ.
(ಶ್ರೀ ಅರವಿಂದರನ್ನು ಕುರಿತು ಪರಿಚಯ ಪುಸ್ತಿಕೆ)

ಸಂಪಾದನೆ - ೬

೯೦. ನನ್ನದು ಈ ಕನ್ನಡ ನಾಡು
೯೧. ಹಕ್ಕಿ ಹಾರುತಿದೆ
೯೨. ಹೊಸಗನ್ನಡ ಕ್ಯಾವ್ಯಶ್ರೀ
೯೩. ರವೀಂದ್ರ ಪ್ರಶಸ್ತಿ
೯೪. ಕನಕದಾಸ ಚತುಶ್ಯತಮಾನೋತ್ಸವ ಸಂಸ್ಮರಣ ಸಂಪುಟ
೯೫. ಚಂದ್ರಹಾಸ

ಸಂಪಾದಿತ ಪತ್ರಿಕೆಗಳು - ೪

೯೬. ವಾಗ್ಭೂಷಣ
೯೭. ಸ್ವಧರ್ಮ
೯೮. ಜಯ ಕರ್ನಾಟಕ
೯೯. ಜೀವನ

ಅನುವಾದ ಕನ್ನಡಕ್ಕೆ - ೬

೧೦೦. ಉಪನಿಷತ್ ರಹಸ್ಯ ಅಥವಾ ಭಾರತೀಯ ಅಧ್ಯಾತ್ಮ ಶಾಸ್ತ್ರ
ಪೀಠಿಕೆ - ರಂ. ರಾ. ದಿವಾಕರ ಹಾಗೂ ಶಂ. ಬಾ. ಜೋಶಿ
೧೦೧. ಭಾರತೀಯ ನವಜನ್ಮ
೧೦೨. ಗುರು ಗೋವಿಂದಸಿಂಗ
೧೦೩. ಕಬೀರ ವಚನಾವಲಿ
೧೦೪. ಭಗ್ನ ಮೂರ್ತಿ
೧೦೫. ನೂರೊಂದು ಕವನಗಳು

ಮರಾಠಿಯಲ್ಲಿ - ೬

೧೦೬. ಸಂವಾದ
೧೦೭. ವಿಠಲ ಸಂಪ್ರದಾಯ
೧೦೮. ಶಾಂತಲಾ (ಕಾದಂಬರಿ)
೧೦೯. ಸಂತ ಮಹಂತ ಪೂರ್ಣಶಂಭು ವಿಠಲ (ಪ್ರಬಂಧ)
೧೧೦. ವಿಠ್ಠಲ ಪಾಂಡುರಂಗ (ಕವನ ಸಂಗ್ರಹ)
೧೧೧. ಉಮಾಳಾ (೧೧೩ ಮರಾಠಿ ಕವನಗಳ ಸಂಗ್ರಹ)

ಇತರ - ೨

೧೧೨. ಮಾತೆಲ್ಲ ಜ್ಯೋತಿ (ಭಾಷಣ ಸಂಗ್ರಹ)
೧೧೩. ಮತ-ಧರ್ಮ ಮತ್ತು ಆಧುನಿಕ ಮಾನವ (ಭಾಷಣಗಳ ಸಂಗ್ರಹ).

ಇಂಗ್ಲಿಷ ಕೃತಿಗಳು - ೨

114. A Theory of Immortality
115. Language-Mathematics & Truth.

ಬೇಂದ್ರೆ ಕವನಗಳು ವಿವಿಧ ಭಾಷೆಗಳಲ್ಲಿ ಅನುವಾದ - ೮

116. Dr. D. R. Bendre - Four Strings - ಇಂಗ್ಲಿಷ ಭಾಷೆಯಲ್ಲಿ
117. ಚತುರ್ಮುಖ ಸೌಂದರ್ಯ, ಲೀಲೆ, ಕೀರ್ತಿ - ಜರ್ಮನ್ ಭಾಷೆಯಲ್ಲಿ
118. ಚಾರ್ ತಾರ್ - 'ನಾಕು ತಂತಿ'ಯ ಹಿಂದೀ ಅನುವಾದ
119. ಚಾರ ತಂತು - 'ನಾಕು ತಂತಿ'ಯ ಮರಾಠಿ ಅನುವಾದ
120. Spring Fire
121. Dreaming Tomorrow
122. Three one Act Plays
123. Sakheegeet

} Dr. K. Raghavendra Rao, Dr. Vaman Bendre, Dr. K. S. Sharma

: ಪುಸ್ತಕಗಳು ದೊರೆಯುವ ಸ್ಥಳ :

"ಶ್ರೀಮಾತಾ ಪ್ರಕಾಶನ", "ವಿಶ್ವಶ್ರಮ ಚೇತನ", ಗೋಕುಲ ರಸ್ತೆ
ಬಸವೇಶ್ವರ ನಗರ, ಹುಬ್ಬಳ್ಳಿ.

ರವೀಂದ್ರ ಪುಸ್ತಕಾಲಯ,
ಚಾಮರಾಜಪೇಟೆ, ಸಾಗರ - 577 401,
ಶಿವಮೊಗ್ಗ ಜಿಲ್ಲೆ
ದೂರವಾಣಿ : 08183-228616 (ಕ).

ಡಾ|| ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಕೊಡುಗೆ

ಡಾ|| ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಪ್ರಕಟಣೆಗಳು

ಡಾ|| ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಕೊಡುಗೆ

ಹೃದಯ-ವಿವೇಕ ಬೆಳಕು ಬರಲಿ

ಡಾ|| ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆಯ ಪ್ರಕಟಣೆಗಳು

ಹೃದಯ ಗೀತ

ಜ್ಞಾನಪೀಠ ಪ್ರಶಸ್ತಿ ವಿಜೇತ ವರಕವಿ

ಡಾ॥ ದ.ರಾ.ಬೇಂದ್ರೆಯವರು (ಅಂಬಿಕಾತನಯದತ್ತ) ಕನ್ನಡ ಸಾಹಿತ್ಯಕ್ಕೆ ಅಪಾರ, ಅಗಾಧ ಕೊಡುಗೆಯನ್ನು ನೀಡಿದ್ದಾರೆ. ಅಂತೆಯೇ ಅವರು ಮರಾಠಿ ಸಾಹಿತ್ಯಸಂವರ್ಧನೆಗೂ ಮಹತ್ತ್ವದ ಕೊಡುಗೆ ನೀಡಿರುವುದು ವಾಸ್ತವಾಂಶ. ಅವರ ಮರಾಠಿ 'ಸಂವಾದ' ಕೃತಿಗೆ ಸುಪ್ರಸಿದ್ಧ ಕೇಳಕರ ಪ್ರಶಸ್ತಿ ಪ್ರದಾನವಾಗಿತ್ತು. ಬೇಂದ್ರೆಯವರ 'ಸಂವಾದ' ಮತ್ತು 'ಉಮಾಳಾ' ಕವನ ಸಂಗ್ರಹಗಳಲ್ಲಿಯ ಸಮಗ್ರ ಮರಾಠಿ ಕಾವ್ಯಸಂಪತ್ತು ಕನ್ನಡ ರಸಿಕರಿಗೂ ಲಭ್ಯವಾಗುವಂತೆ 'ಹೃದಯಗೀತ' ಎಂಬ ಕವನ ಸಂಗ್ರಹ ರೂಪತಾಳಿದೆ.

ಬೇಂದ್ರೆ ಮರಾಠಿ ಸಾಹಿತ್ಯವನ್ನು ಕನ್ನಡ ಸಾಹಿತ್ಯಕ್ಕೆ ಪರಿಚಯಿಸುವ ಪ್ರಪ್ರಥಮ ಸಂಕಲನ 'ಹೃದಯಗೀತ'. ಈ ಕೃತಿಯಲ್ಲಿ ಬೇಂದ್ರೆಯವರ ನೂರು ಮರಾಠಿ ಕವನಗಳನ್ನು ಕವಿ ಪುತ್ರ ಡಾ॥ ವಾಮನ ಬೇಂದ್ರೆಯವರು ಕನ್ನಡಕ್ಕೆ ಭಾವಾನುವಾದ ಮಾಡಿದ್ದಾರೆ. ಸಹೃದಯರ ಬುದ್ದಿಯೊಂದಿಗೆ ಈ ಶುದ್ಧ ಭಾವಗೀತಗಳ ಸಹಯೋಗವಾಗಿ, ಎಲ್ಲರೂ ಸಖ್ಯದಿಂದ ಬಾಳುವಂತೆ ಸೇತುವೆಯನ್ನು ನಿರ್ಮಿಸಬೇಕೆಂಬುದು ಈ ಪ್ರಕಟಣೆಯ ಉದ್ದೇಶ. ಬೇಂದ್ರೆ ಭಾವಋಷಿ ಬಯಸುವದು ಹೃದಯ ಸಂವಾದ ಹಾಗೂ ವಿವೇಕೋದಯ. ಇವು ಸಫಲಗೊಂಡಾಗ ನವಮಾನವೀಯತೆಯ ಆವಿರ್ಭಾವ ಸಾಧ್ಯವಾಗುತ್ತದೆ.

- ಪ್ರಕಾಶಕರು.

ಬೇಂದ್ರೆ ಸಂಶೋಧನ ಸಂಸ್ಥೆ,
ಹುಬ್ಬಳ್ಳಿ

ಹೃದಯ-ವಿವೇಕ ಬೆಳಕು ಬರಲಿ

Disign:Ravindra